[MR. DEPUTY SPEAKER in the Chair.]

## BUDGET ESTIMATES FOR 1964-65

### Demands for grants Nos. 17, 37 and 40

(*Debate continued.*)

† ಶ್ರೀ ಇ. ನಾರಾಯಣ ಗೌಡ (ಬಂಗಾರುಪೇಟೆ).—ಮಾನ್ಯ ಅಧ್ಯಕ್ಷರೇ, ಈ ದಿವಸ ಡಿಮ್ಯಾಂಡ್ ನಂಬರ್ 17 ರಲ್ಲಿ ವಿದ್ಯಾಭ್ಯಾಸಕ್ಕೋಸ್ಕರ 21.93·66.400 ರೂಪಾಯಿಗಳ ಬೇಡಿಕೆಯನ್ನು ಈ ನಮ್ಮ ಸಭೆಯ ಮುಂದೆ ಇಟ್ಟಿದ್ದಾರೆ. ನಮ್ಮ ಬಡ್ಜೆಟ್ಟಿನಲ್ಲಿ ಸುಮಾರು 1/5 ಭಾಗವನ್ನು ವಿದ್ಯಾ ಖಾತೆಗೆ ಖರ್ಚು ಮಾಡುತ್ತಿದ್ದಾರೆ. ಆದರೆ ಈ ವಿದ್ಯಾ ಖಾತೆಯಲ್ಲಿರತಕ್ಕ ಅನೇಕ ನ್ಯೂನತೆಗಳು ನಮ್ಮ ಸಾರ್ವಜನಿಕರಲ್ಲಿ, ದೇಶದ ಜನಗಳಲ್ಲಿ ಅನುಮಾನಾಸ್ಪದವಾಗುವುದಕ್ಕೆ ಎಡೆಕೊಟ್ಟಿವೆ. ಪವಿತ್ರವಾದ ಈ ವಿದ್ಯಾಖಾತೆಯು ಮೈಸೂರು ರಾಜ್ಯದಲ್ಲಿ ಒಳ್ಳೆಯ ಹೆಸರನ್ನು ಪಡೆದಿತ್ತು. ನಮ್ಮ ರಾಜ್ಯದಲ್ಲಿ ವಿದ್ಯಾಭ್ಯಾಸ ಒಂದು ಒಳ್ಳೆಯ ಮಟ್ಟದಲ್ಲಿದ್ದು ಬೇರೆ ರಾಜ್ಯಗಳಿಗೆ ಮಾದರಿಯಾಗಿತ್ತು. ಈಗ ಇದು ನಮ್ಮ ದುರ್ದೈವವೋ ಏನೋ ನಮ್ಮ ಶ್ರೀಮಾನ್ ಕಂಠಿಯವರ ಕೈಗೆ ಈ ವಿದ್ಯಾ ಖಾತೆಯನ್ನು ಕೊಟ್ಟಿರುವುದು ಹೇಗಿದೆ ಎಂದರೆ * * * ಅವರು ಈ ಖಾತೆಯನ್ನು ಅಂಥಾ ಸ್ಥಿತಿಗೆ ತಂದಿದ್ದಾರೆ. ಈ ಸಮಯದಲ್ಲಿ ನಾನು ಬಹಳ ವಿಷಾದದಿಂದ ಹೇಳಬೇಕಾಗಿದೆ, ಈ ವಿದ್ಯಾ ಇಲಾಖೆ ತುಟುಕಿಸುತ್ತಾ ಇದೆ. ಈಗ ಉದಾಹರಣೆಗೆ ಹೇಳುವುದಾದರೆ ನಮ್ಮ ಬಡ್ಜೆಟ್ಟಿನಲ್ಲಿ ಕಟ್ಟಡಗಳಿಗೋಸ್ಕರ ಲಕ್ಷಾಂತರ ರೂಪಾಯಿಗಳನ್ನು ಒದಗಿಸಿದ್ದರೂ ಕೂಡ ನಮ್ಮ ಹಳೆಯ ಮೈಸೂರಿನಲ್ಲಿ ಯಾವ ಪ್ರದೇಶದಲ್ಲಿಯೂ ಕಟ್ಟಡಗಳ ವಿಚಾರದಲ್ಲಿ ಅಷ್ಟು ಹೆಚ್ಚಿನ ಗಮನವನ್ನು ಕೊಡುತ್ತಿಲ್ಲ. ಅದಕ್ಕೆ ಬಂಗಾರುಪೇಟೆಯ ಒಂದು ಉದಾಹರಣೆಯನ್ನು ನಾನು ಈ ಸಭೆಯ ಗಮನಕ್ಕೆ ತರುವುದಕ್ಕೆ ಅಪೇಕ್ಷೆಪಡುತ್ತೇನೆ. ನಮ್ಮ ಬಂಗಾರುಪೇಟೆಯ ಒಂದು ಬಾಲಕಿಯರ ಶಾಲೆ ಮಂಜೂರು ಆಗಿ ನಾಲ್ಕು ವರ್ಷಗಳಾದುವು. ಆ ಕಟ್ಟಡಕ್ಕೋಸ್ಕರವಾಗಿ ಆ ಊರಿನ ಸಾರ್ವಜನಿಕರು 30 ಸಾವಿರ ರೂಪಾಯಿಗಳನ್ನು ಬ್ಯಾಂಕಿನಲ್ಲಿ ಡಿಪಾಜಿಟ್ ಇಟ್ಟಿದ್ದಾರೆ. ಅವರು ಆ ಹಣವನ್ನು ಡಿಪಾಜಿಟ್ ಇಟ್ಟು ಮೂರು ವರ್ಷಗಳಾದರೂ ಕೂಡ ಇದುವರೆಗೂ ಸರ್ಕಾರದ ಪಾಲಿಸಿ ಪ್ರಕಾರ ಸರ್ಕಾರದಿಂದ ಬರಬೇಕಾದಂತಹ 60 ಪರ್ಸೆಂಟ್ ಹಣವನ್ನು ಕೊಟ್ಟಿಲ್ಲ. ಈ ವಿಷಯದಲ್ಲಿ ನಾವು ಎಷ್ಟೋಸಾರಿ ಸರ್ಕಾರದವರನ್ನು ಪ್ರಾರ್ಥನೆ ಮಾಡಿಕೊಂಡರೂ ಕೂಡ ಅದಕ್ಕೆ ಬೇಕಾದ ಹಣವನ್ನು ಇದುವರೆಗೂ ಒದಗಿಸಿಕೊಟ್ಟಿಲ್ಲ. ಈ ವಿಷಯದಲ್ಲಿ ಶ್ರೀಮಾನ್ ಕಂಠಿಯವರಿಗೆ ಏತಕ್ಕೆ ದಯ ಬರಲಿಲ್ಲವೋ ಗೊತ್ತಿಲ್ಲ. ಈ ಕಟ್ಟಡಗಳಿಗೆ ಹಣವನ್ನು ಒದಗಿಸತಕ್ಕ ವಿಷಯದಲ್ಲಿ ಹಳೆಯ ಮೈಸೂರಿಗೇ ಒಂದು ನಿಯಮ ಬಿಜಾಪುರ ಜಿಲ್ಲೆಗೇ ಒಂದು ನಿಯಮವನ್ನು ಮಾಡುತ್ತಿದ್ದಾರೆ. ಶ್ರೀಮಾನ್ ಜತ್ತಿಯವರ ಕಾನ್‌ಸ್ಟಿಟ್ಯೂಯನ್ಸಿಯಾದ ಜಮುಖಂಡಿಗೆ ಒಂದು ಬಾಲಕಿಯರ ಪಾಠಶಾಲೆಗೆ ಎರಡೂವರೆ ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ. ಆದರೆ ನಮ್ಮ ಹಳೆಯ ಮೈಸೂರಿನಲ್ಲಿ ಒಂದು ಬಾಲಕಿಯರ ಶಾಲೆಗೆ ನ್ಯಾಯವಾಗಿ 50 ಪರ್ಸೆಂಟ್ ಗ್ರಾಂಟ್ ಕೊಡಬೇಕೆಂದು ರೂಲ್ಸ್ ಇದ್ದರೂ ಅದನ್ನೂ ಕೊಡುವುದಿಲ್ಲ.

ಶ್ರೀ ಎಸ್. ಆರ್. ಕಂಠಿ.—ಜಮುಖಂಡಿಯಲ್ಲಿ ಬಾಲಕಿಯರ ಶಾಲೆಗೆ ಹಣವನ್ನು ಕೊಟ್ಟಿರುವುದು

* * *

ಇಂಡಿಯಾ ಸರ್ಕಾರದವರು ಯೋಜನೆಯಲ್ಲಿ ಅದು ನಮ್ಮದಲ್ಲ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಒಂದು ವಿಷಯ ಕೇಳಿದರೆ ಇದು ನಮ್ಮ ದುಡ್ಡಲ್ಲ, ಇಂಡಿಯಾ ಸರ್ಕಾರದ್ದು ಎಂದು ಹೇಳುತ್ತಾರೆ. ಇನ್ನೊಂದು ವಿಷಯವನ್ನು ಕೇಳಿದರೆ ಇದು ಅಮೇರಿಕಾದಿಂದ ಬಂದದ್ದು ಎಂದು ಹೇಳುತ್ತಾರೆ. ಇದರಲ್ಲಿ ಸರ್ಕಾರದ ಒಂದು ನಿಲುವು ಏನು ಎಂಬುದನ್ನು ಹೇಳಬೇಕು.

ಶ್ರೀ ಎಸ್. ಆರ್. ಕಂಠಿ.—ನಮ್ಮ ಯೋಜನೆಗೆ ಸಂಬಂಧಪಟ್ಟದ್ದು ಇದ್ದರೆ ನಮ್ಮದು ಎಂದು ಹೇಳುತ್ತೇವೆ. ಇಂಡಿಯಾ ಸರ್ಕಾರದವರ ಯೋಜನೆಗೆ ಸಂಬಂಧಪಟ್ಟದ್ದು ಆಗಿದ್ದರೆ ಇಂಡಿಯಾ ಸರ್ಕಾರದವರದು ಎಂದು ಹೇಳುತ್ತೇವೆ.

ಶ್ರೀ ಇ. ನಾರಾಯಣ ಗೌಡ.—ಈ ಸ್ಕೂಲ್ ಬಿಲ್ಡಿಂಗ್‌ಗಳನ್ನು ಕಟ್ಟುವ ವಿಷಯದಲ್ಲ ನಾವು 50 ಪರ್ಸೆಂಟ್ ಕೊಡುವುದಕ್ಕೆ ಸಾಧ್ಯವಾಗುವುದಿಲ್ಲ. ಈ ಸಂಬಂಧದಲ್ಲಿ ನಾನು ಈ ಮಾನ್ಯ ಸಭೆಯಲ್ಲಿ ಒಂದು ಪ್ರಶ್ನೆಯನ್ನು ಕೂಡ ಕಳುಹಿಸಿದ್ದೆ. ಹಳೆಯ ಮೈಸೂರಿನವರಿಗೇ ಒಂದು ಪಾಲಿಸಿ,

*-** Expunged as ordered by the Chair

ಹೈದರಾಬಾದ್ ಕರ್ನಾಟಕಕ್ಕೆ ಒಂದು ಪಾಲಿಸಿ ಮಾಡುತ್ತಾ ಇವರು ದೇಶಕ್ಕೆ ದ್ರೋಹವನ್ನು ಮಾಡುತ್ತಿದ್ದಾರೆ. ಇದೇ ರೀತಿ ಇವರು ಮುಂದುವರಿಸಿಕೊಂಡು ಹೋದರೆ ಹಳೆಯ ಮೈಸೂರಿನವರು ಪ್ರತ್ಯೇಕವಾಗಿ ನಮಗೆ ಬರಬೇಕಾದ ನ್ಯಾಯವನ್ನು ದೊರಕಿಸಿಕೊಳ್ಳಬೇಕಾಗುತ್ತದೆ.

ಮೊನ್ನೆತಾನೇ ಕಹಿ ವಾತಾವರಣ ಮುಗಿದು ನಮ್ಮ ವಿದ್ಯಾರ್ಥಿಗಳ ಮುಷ್ಕರ ಒಂದು ಸೌಹಾರ್ದ ವಾತಾವರಣದಲ್ಲಿ ಕೊನೆಗೊಂಡಿತು. ಆ ಸನ್ನಿವೇಶದಲ್ಲಿ ಶ್ರೀಮಾನ್ ಕಂಠಿಯವರ ಹೆಸರು ನಮ್ಮ ದೇಶದಲ್ಲಿ ಪ್ರತಿಯೊಂದು ಹಳ್ಳಿಯಲ್ಲಿಯೂ, ಪಟ್ಟಣದಲ್ಲಿಯೂ ಎಲ್ಲರಿಗೂ ತಿಳಿಯು ವಂತಾಯಿತು.

ಹಿಂದಿನಿಂದ ವಿದ್ಯಾರ್ಥಿಗಳಿಗೆ ಸ್ಕಾಲರ್‌ಷಿಪ್ ಕೊಡುವಾಗ ಫ್ರೀಷಿಪ್ ಸಹ ಕೊಡುತ್ತಿದ್ದರು. ಈಗ ಹೊರಡಿಸಿರುವ ಆರ್ಡರ್ ಪ್ರಕಾರ ಸ್ಕಾಲರ್‌ಷಿಪ್ ಮಾತ್ರ ಕೊಡುತ್ತಿದ್ದಾರೆ. ಇದು ಸರಿಯಲ್ಲ ವೆಂದು ಹೇಳುತ್ತೇನೆ.

ಶ್ರೀ ಎಸ್. ಆರ್. ಕಂಠಿ.—ಸ್ಕಾಲರ್‌ಷಿಪ್ ಕೊಡುವವರಿಗೆ ಫ್ರೀಷಿಪ್ ಕೊಡಬೇಕೆಂದಿದೆ.

ಶ್ರೀ ಇ. ನಾರಾಯಣ ಗೌಡ.—ಹಳೆಯ ಮೈಸೂರಿನ ಅನೇಕ ಕಾಲೇಜು ವಿದ್ಯಾರ್ಥಿಗಳು ಬಡ ವರಾಗಿದ್ದು ವಿದ್ಯಾಭ್ಯಾಸ ಮಾಡುತ್ತಿದ್ದಾರೆ. ಅವರಿಗೆ ಇದರಿಂದ ಬಹಳ ತೊಂದರೆಯಾಗುತ್ತದೆ. ಈಗಲಾದರೂ ಕೂಡ ಸರ್ಕಾರದವರನ್ನು ಪುನರ್‌ಪರಿಶೀಲಿಸಿ ನ್ಯಾಯವಾದ ಸೌಕರ್ಯವನ್ನು ಕಲ್ಪಿಸಿ ಕೊಡಬೇಕೆಂದು ಅವರ ಗಮನಕ್ಕೆ ತರಲು ಇಷ್ಟಪಡುತ್ತೇನೆ.

ಹಳ್ಳಿಗಳಲ್ಲಿ ಕಡ್ಡಾಯ ಶಿಕ್ಷಣ ಬಂದು 2-3 ವರ್ಷಗಳಾಗಿದೆ. ಆದರೂ ಕೂಡ ಅದು ಮುಗಿಯು ದಂತಾಗಿದೆ. ಇದು ಹೇಗಿದೆ ಎಂದರೆ ಒಬ್ಬ ಕುರುಡನಾದವನು ಕತ್ತಲೆ ಕೋಣೆಯಲ್ಲಿ ಕಪ್ಪು ಬೆಕ್ಕನ್ನು ಹಿಡಿಯುವುದಕ್ಕೆ ಹೋದ ಹಾಗೆ ಇದೆ. ಆದರೂ ಕೂಡ ಕಡ್ಡಾಯ ಶಿಕ್ಷಣವನ್ನು ಯಶಸ್ವಿಯಾಗಿಸು ತ್ತೇನೆ, ಜನಪ್ರಿಯಮಾಡುತ್ತೇನೆಂದು ಹೇಳುವುದರಲ್ಲಿ ಎಷ್ಟುವಟ್ಟಿಗೆ ಸಾಫಲ್ಯವನ್ನು ಹೊಂದುತ್ತಾ ರೆನ್ನುವುದನ್ನು ನಾವು ಎದುರುನೋಡಬೇಕಾಗಿದೆ.

ಕಡ್ಡಾಯ ಶಿಕ್ಷಣವನ್ನು ಜಾರಿಗೆ ತಂದಿದ್ದರೂ ತರಪೇತಾದ ಉಪಾಧ್ಯಾಯರಿರುವುದಿಲ್ಲ. ಕಟ್ಟಡ ಗಳಿಲ್ಲದೆ ಇರುವ ಶಾಲೆಗಳು, ಉಪಾಧ್ಯಾಯರಿಲ್ಲದೆ ಇರುವ ಶಾಲೆಗಳು ಇರುತ್ತವೆ. ಕೋಟ್ಯಾಂತರ ರೂಪಾಯಿ ವರ್ಷಂಪ್ರತಿ ಖರ್ಚು ಮಾಡುತ್ತೀರಿ. ಇದರಿಂದ ಸಾಧಿಸಿರುವುದು ಏನು ಎನ್ನುವುದು ನೋಡಿದರೆ ಬಡ್ಜೆಟ್ಟಿನಲ್ಲಿರುವ ಅಂಕಿ ಸಂಖ್ಯೆಗಳು ನಮಗೆ ಕಾಣುತ್ತವೆ. ಕಡ್ಡಾಯ ವಿದ್ಯಾಭ್ಯಾಸ ದಿಂದ ಹಳ್ಳಿಗಾಡಿನವರಿಗೆ ಎಷ್ಟು ಮಾತ್ರವೂ ಪ್ರಯೋಜನವಾಗುತ್ತಾ ಇಲ್ಲವೆಂದು ನಾನು ಬಹಳ ವಿಷಾದದಿಂದ ಈ ಸಮಯದಲ್ಲಿ ಸರ್ಕಾರದ ಗಮನಕ್ಕೆ ತರಲಿಚ್ಛಿಸುತ್ತೇನೆ.

ಟೆಕ್ಸ್ಟ್ ಬುಕ್ಸ್ ಕಮಿಟಿಗೆ ಕದೀಮಗನ್ನು ನಾಮಕರಣ ಮಾಡಿದ್ದೀರಿ. ಅವರು ವ್ಯಾಪಾರಗಾರರು ಒಂದೊಂದು ಜಿಲ್ಲೆಗೆ ಒಂದೊಂದು ರೀತಿಯ ಪಠ್ಯ ಪುಸ್ತಕಗಳನ್ನಿಡುತ್ತಿದ್ದಾರೆ. ಸಾಧಾರಣವಾಗಿ ಒಬ್ಬ ಅಧಿಕಾರಿ ಒಂದು ಜಿಲ್ಲೆಯಿಂದ ಮತ್ತೊಂದು ಜಿಲ್ಲೆಗೆ ವರ್ಗವಾದ ಮೇಲೆ ಆತನು ತನ್ನ ಮಕ್ಕ ಳಿಗೆ ಮೊದಲು ಕೊಂಡುಕೊಂಡಿದ್ದ ಪುಸ್ತಕಗಳನ್ನು ಬಿಟ್ಟು ಹೊಸದಾಗಿ ಪುಸ್ತಕಗಳನ್ನು ತೆಗೆದು ಕೊಳ್ಳಬೇಕಾಗುತ್ತದೆ. ಇದರಿಂದ ಬಹಳ ಅನ್ಯಾಯವಾಗುತ್ತದೆ. ಪಠ್ಯಪುಸ್ತಕಗಳು ಎಲ್ಲಕಡೆಗೂ ಒಂದೇ ಇರಬೇಕು. ಇದಕ್ಕೆ ಗಮನ ಕೊಡಬೇಕೆಂದು ನಾನು ಶಿಕ್ಷಣ ಮಂತ್ರಿಗಳನ್ನು ಈ ಸಂದರ್ಭ ದಲ್ಲಿ ಕೇಳುತ್ತೇನೆ.

ಪ್ರಾಥಮಿಕ ಶಾಲಾ ಉಪಾಧ್ಯಾಯರಿಗೆ ಅನೇಕ ಶಿಕ್ಷಣ ಕೇಂದ್ರಗಳನ್ನು ತೆರೆದಿದ್ದಾರೆ. ದೊಡ್ಡಬಳ್ಳಾಪುರದಲ್ಲಿ ಇಂಥ ಒಂದು ಶಿಕ್ಷಣ ಕೇಂದ್ರವಿದೆ. ಅನೇಕ ಉಪಾಧ್ಯಾಯರು ಮತ್ತು ಉಪಾಧ್ಯಾಯಿನಿಯರು ಶಿಕ್ಷಣ ಪಡೆಯುವುದಕ್ಕೆ ಆ ಸ್ಥಳಗಳಿಗೆ ಬಂದು ವಾಸಮಾಡುತ್ತಿದ್ದಾರೆ. ಕೊಡಗಿನಿಂದ ಬಂದಿರುವ ಉಪಾಧ್ಯಾಯರಿಗೆ 15 ರೂಪಾಯಿಗಳ ಕುಟುಂಬ ಭತ್ಯವನ್ನು ಪ್ರತಿ ತಿಂಗಳೂ ಕೊಡುತ್ತಿದ್ದಾರೆ. ಬೇರೆ ಜಿಲ್ಲೆಗಳಿಂದ ಬಂದಿರುವವರಿಗೆ ಕೊಡುತ್ತಿಲ್ಲ. ಒಂದೇ ರಾಜ್ಯ ದಲ್ಲಿ ಒಂದೇ ಕೆಲಸ ಮಾಡತಕ್ಕ ಬಡ ಉಪಾಧ್ಯಾಯರುಗಳಿಗೆ ಈ ರೀತಿ ಪಕ್ಷಪಾತ ತೋರಿಸಿ, ಒಂದು ಕಣ್ಣಿಗೆ ಬೆಣ್ಣೆ ಒಂದು ಕಣ್ಣಿಗೆ ಸುಣ್ಣ ಇಡುವಂತೆ ಮಾಡತಕ್ಕದ್ದು ನ್ಯಾಯವಲ್ಲ. ಎಲ್ಲ ಉಪಾಧ್ಯಾ ಯರುಗಳಿಗೂ ಕೂಡ ಪ್ರತಿ ತಿಂಗಳೂ ಟ್ರೈನಿಂಗ್ ಪಡೆಯುವ ಕಾಲದಲ್ಲಿ 15 ರೂಪಾಯಿಗಳ ಕುಟುಂಬ ಭತ್ಯವನ್ನು ಕೊಡಬೇಕು, ರಾಜ್ಯದಲ್ಲೆಲ್ಲ ಏಕರೂಪವಾಗಿ ಕೊಡಬೇಕೆಂದು ಮಂತ್ರಿಗಳ ಗಮನಕ್ಕೆ ತರಲಿಚ್ಛಿಸುತ್ತೇನೆ.

ಸಂಗೀತ ನಾಟಕ ಅಕಾಡೆಮಿ ಎಂಬ ಸಂಸ್ಥೆಯನ್ನು ಸ್ಥಾಪನೆ ಮಾಡಿದ್ದಾರೆ, ಅದರಲ್ಲಿ ಅವರಿಗೆ ಬೇಕಾದವರು ಕೆಲವರನ್ನು ಹತ್ತಾರು ವರ್ಷಗಳಾದಾಗ್ಯೂ ನಾಮಕರಣ ಮಾಡುತ್ತಿದ್ದಾರೆ. ಅವರು ಸಾಧಾರಣವಾಗಿ ಮಂತ್ರಿಗಳ ಕೈಕೂಸುಗಳಾಗಿರುತ್ತಾರೆ. 1956ನೇ ಇಸವಿಯಲ್ಲಿ ಅದರಲ್ಲಿದ್ದವ ರನ್ನು ಇವತ್ತು ಕೂಡ ಮುಂದುವರಿಸಿಕೊಂಡು ಬರುತ್ತಿದ್ದಾರೆ, ಇದರಿಂದ ರಾಜ್ಯದಲ್ಲಿರುವ ಅನೇಕ ಸಂಗೀತಗಾರರಿಗೆ ಅಸಮಾಧಾನವುಂಟಾಗಿದೆ. ರಾಜ್ಯದಲ್ಲಿ ಸಂಗೀತಗಾರರಿಗೆ ಹೆಚ್ಚಿನ ಪ್ರೋತ್ಸಾಹ

(ಶ್ರೀ ಇ. ನಾರಾಯಣ ಗೌಡ)

ಕೊಡಬೇಕು, ಕಲೆಯ ಬೆಳವಣಿಗೆಯಾಗಬೇಕು ಎಂದು ಸರ್ಕಾರದವರು ಹಣ ಕೊಟ್ಟಿರುವಾಗ, ಸಂಗೀತಗಾರರಲ್ಲಿ ಯಾರು deserving ಇದ್ದಾರೆ ಅವರಿಗೆ ಕೊಡುವುದಕ್ಕೆ ಪ್ರಯತ್ನ ಮಾಡಬೇಕು. ವರ್ಷಂಪ್ರತಿ ಖರ್ಚಾಗದ ಎರಡು ಮೂರು ಲಕ್ಷ ರೂಪಾಯಿಗಳು ಯಾರೋ ಕೆಲವರು ಸಂಗೀತಗಾರರಿಗೆ, ಸರ್ಕಾರಕ್ಕೆ ಬಹಳ ಬೇಕಾದವರಿಗೆ ಇಂಥವರ ಜೇಬಿಗೆ ಸೇರುತ್ತದೆ. ಈ ರೀತಿ ಆಗಬಾರದು. ಪ್ರತಿಯೊಬ್ಬ ಸಂಗೀತಗಾರನಿಗೆ, ನಾಟಕಕಾರನಿಗೆ ಇವರಿಗೆಲ್ಲ ಈ ಹಣ ಸೇರುವ ರೀತಿಯಲ್ಲಿ ಮಾಡಬೇಕೆಂದು ಹೇಳುತ್ತೇನೆ.

ಪ್ರೌಢಶಾಲೆಗಳಿಗೋಸ್ಕರ direct grants to non-governmental Secondary Schools ಎಂದು ಆರು ಕೋಟಿ 49 ಲಕ್ಷ ರೂಪಾಯಿ ಖರ್ಚು ಮಾಡುತ್ತಿದ್ದಾರೆ. ಹಳೆಯ ಮೈಸೂರಿನಲ್ಲಿ ಪ್ರೌಢಶಾಲೆಗಳನ್ನು ಈಚೆಗೆ ಹೆಚ್ಚು ಹೆಚ್ಚಾಗಿ ಖಾಸಗಿಯವರು ತೆರೆಯುತ್ತಿದ್ದಾರೆ. ಕೆಲವರು education society ಮಾಡಿ ಹಳ್ಳಿಗಳ ಪ್ರದೇಶದಲ್ಲಿ ಪ್ರೌಢಶಾಲೆಗಳನ್ನು ತೆರೆದಿರುತ್ತಾರೆ. ನಮ್ಮ ಕೋಲಾರ ಜಿಲ್ಲೆಯಲ್ಲಿ 1962ನೇ ಇಸವಿಯಲ್ಲಿ ಏಳು ಪ್ರೌಢಶಾಲೆಗಳು ಆರಂಭವಾದವು. ಅವುಗಳಿಗೆ recognition ಕೊಟ್ಟಿದ್ದಾರೆ, registration ಆಗಿದೆ. ಪ್ರತಿ ವರ್ಷ ಲೆಕ್ಕಗಳು ಆಡಿಟ್ ಆಗುತ್ತಿದೆ. ಎಲ್ಲ ರಿಪೋರ್ಟನ್ನು ಸರ್ಕಾರಕ್ಕೆ ಕಳುಹಿಸುತ್ತಿದ್ದಾರೆ; ಆ ಶಾಲೆಗಳಿಗೆ ಇದುವರೆವಿಗೂ ಗ್ರಾಂಟನ್ನು ಕೊಟ್ಟಿಲ್ಲ. ಹೀಗಾದರೆ ಸೊಸೈಟಿಯವರು ಯಾವರೀತಿ ಹೈಸ್ಕೂಲನ್ನು ನಡೆಸಬೇಕು ? ಹಳ್ಳಿಗಾಡಿನಲ್ಲಿರುವ ಪ್ರೌಢಶಾಲೆಗಳಿಗೆ ಸಾಕಾದಷ್ಟು ಹಣವನ್ನು ಸಕಾಲಕ್ಕೆ ಕೊಡದೇ ಇದ್ದರೆ ಅವು ಹೇಗೆ ನಡೆಯಬೇಕು ? ಉತ್ತರ ಕರ್ಣಾಟಕದಲ್ಲಿರುವ ಕೆಲವು ಮಠಾಧಿಪತಿಗಳು ಸ್ಥಾಪನೆ ಮಾಡಿರತಕ್ಕ ಪ್ರೌಢಶಾಲೆಗಳಿಗೆ ಮತ್ತು ಕಾಲೇಜುಗಳಿಗೆ token grant ಮಂಜೂರುವಾಗಿ ಕೊಡುತ್ತಿದ್ದಾರೆ, ಅದೇ ಹಳೇ ಮೈಸೂರು ಭಾಗದಲ್ಲಿ ಸೊಸೈಟಿಗಳು ಪ್ರಾರಂಭ ಮಾಡಿರುವ ಹೈಸ್ಕೂಲುಗಳಿಗೆ ಅವರು ನ್ಯಾಯವಾಗಿ ಲೆಕ್ಕಪತ್ರಗಳನ್ನು ಕೊಟ್ಟರೂ ಕೂಡ ಹಣ ಒದಗಿಸುತ್ತಿಲ್ಲ. ಇದು ಎಂಥ ಪಕ್ಷಪಾತ? ವಿದ್ಯಾಮಂತ್ರಿಗಳಿಗೆ ಇದನ್ನೆಲ್ಲ ನ್ಯಾಯವಾಗಿ ನೋಡಿ ಸರಿಪಡಿಸುವುದಕ್ಕೆ ಚೈತನ್ಯವಿಲ್ಲದೆ ಇದ್ದರೆ ಅವರು ವಿದ್ಯಾ ಖಾತೆಗೆ ರಾಜೀನಾಮೆ ಕೊಟ್ಟು ಯಾವುದಾದರೂ ಮಠದಲ್ಲಿ ಸೇರಿ ಮತಪ್ರಚಾರಕರಾಗಿ ಕೆಲಸ ಮಾಡಲಿ ಎಂದು ನಾನು ಅವರಿಗೆ ತಿಳಿಸುತ್ತೇನೆ.

ಶ್ರೀ ಎಸ್. ಆರ್. ಕಂಠಿ.—Secondary Education Code ಎನ್ನತಕ್ಕದ್ದು ರಾಜ್ಯದ ಎಲ್ಲ ಭಾಗಗಳಿಗೂ ಒಂದೇ ಅನ್ವಯಿಸುತ್ತದೆ. ಯಾರಿಗೂ ಜಾಸ್ತಿ ಕೊಡುವ ಹಾಗಿಲ್ಲ. ಯಾರಿಗಾದರೂ ಕೊಡಬೇಕಾದ್ದಕ್ಕಿಂತ ಜಾಸ್ತಿ ಕೊಟ್ಟಿದ್ದರೆ ಅದನ್ನು ಇನ್ನೊಂದುಸಲ ಕೊಡುವಾಗ ವಜಾ ಮಾಡುತ್ತೇವೆ, ಬೊಂಬಾಯಿ ಕರ್ಣಾಟಕದಲ್ಲಿರುವಂಥ ಅಧಿಕಾರಿಗಳು ಹಳೆಯ ಮೈಸೂರಿನವರೇ ಹೋಗಿರುವವರಾಗಿದ್ದಾರೆ. ಅವರು ಅಲ್ಲಿಯವರಿಗೆ ಅನುಕೂಲಮಾಡುತ್ತಾರೆ, ಇಲ್ಲಿಯವರಿಗೆ ಅನ್ಯಾಯ ಮಾಡುತ್ತಾರೆಂದು ಹೇಳುವುದಕ್ಕಾಗುವುದಿಲ್ಲ.

ಶ್ರೀ ಇ. ನಾರಾಯಣ ಗೌಡ.—ಸರ್ಕಾರದವರು ಕೊಡಬೇಕಾದ ಶೇಕಡ 85 ಗ್ರಾಂಟ್ ಏನಿದೆ ಅದನ್ನು ಸಕಾಲದಲ್ಲಿ ಲೆಕ್ಕಪತ್ರಗಳನ್ನು ಆಡಿಟ್ ಮಾಡಿಸಿಕೊಡಿ ಎಂದು ನಾನು ಕೇಳುತ್ತಿರುವುದು.

ಶ್ರೀ ಎಸ್. ಆರ್. ಕಂಠಿ.—ನಾವು ಹಾಗೆಯೇ ಮಾಡುತ್ತೇವೆ. ಆದರೆ ಮಾನ್ಯ ಸದಸ್ಯರು ತಿಳಿದುಕೊಂಡಿರುವುದು ತಪ್ಪು, ಎಲ್ಲರಿಗೂ ಅನ್ವಯಿಸುವಂತೆ ಒಂದೇ Code ಇದೆ, ಒಂದೇ ರೀತಿ ಮಾಡುತ್ತೇವೆ.

ಶ್ರೀ ಇ. ನಾರಾಯಣ ಗೌಡ.—ಆ ರೀತಿ ಜನರಲ್ ಆಗಿ ಹೇಳಿದರೆ ನಾನು ಒಪ್ಪುವುದಿಲ್ಲ. ಬಂಗಾರುಪೇಟೆಯಲ್ಲಿ ಪುರಸಭೆಯ ಪ್ರೌಢ ಶಾಲೆ ಅದಕ್ಕೆ ಮೂರು ವರ್ಷದಿಂದ ಗ್ರಾಂಟು ಕೊಟ್ಟಿಲ್ಲ. ಈಗ 15-20 ದಿವಸದ ಕೆಳಗೆ ಎರಡುವರ್ಷದ ಗ್ರಾಂಟು 11 ಸಾವಿರ ರೂಪಾಯಿಗಳನ್ನು ಕೊಟ್ಟಿದ್ದಾರೆ. ಈ ರೀತಿ ಗ್ರಾಂಟು ಕೊಟ್ಟರೆ ಆ ಸಂಸ್ಥೆಗೆ ಧಕ್ಕೆಯಾಗುವುದಿಲ್ಲವೇ, ಆ ಸಂಸ್ಥೆಯನ್ನು ನಡೆಸುವುದಕ್ಕೆ ಚೈತನ್ಯ ಇದೆಯೇ ಎಂಬುದನ್ನು ತಾವು ಯೋಚನೆ ಮಾಡಬೇಕಾಗುತ್ತದೆ. ಯಾವ ಪ್ರೌಢ ಸಂಸ್ಥೆಯಾಗಲಿ, ವಿದ್ಯಾ ಸಂಸ್ಥೆಯಾಗಲಿ, ಸೊಸೈಟಿಯಾಗಲಿ ಪುರಸಭೆಯವರಾಗಲಿ ಅವರು ತೆಗೆದಿರತಕ್ಕ ನಾನ್ ಗವರ್ನಮೆಂಟ್ ಸೆಕೆಂಡರಿ ಸ್ಕೂಲ್ಸ್ ಯಾವುವು ಇವೆ ಅವಕ್ಕೆ ಸರಕಾರದವರು ನಿಗದಿಯಾದ ಕಾಲದಲ್ಲಿ ಅವಕ್ಕೆ ಗೊತ್ತು ಮಾಡಿರತಕ್ಕ ಗ್ರಾಂಟು ತಲಪುವ ವ್ಯವಸ್ಥೆಯನ್ನು ಮಾಡಬೇಕೆಂದು ಹೇಳುತ್ತೇನೆ. ನಿಮ್ಮ ಆಫೀಸಿನಲ್ಲಿ ಲೆಕ್ಕಪತ್ರ ಕಳುಹಿಸಿದರೆ ಎರಡು ಮೂರು ವರ್ಷವಾದರೂ ಕೂಡ ವಿಚಾರಣೆ ಮಾಡುತ್ತಾ ಇಲ್ಲ, ಅವರಿಂದ ಸಕಾಲದಲ್ಲಿ ಸಹಾಯ ಸಿಕ್ಕುತ್ತಾ ಇಲ್ಲ.

[MR. SPEAKER in the Chair.]

ಅದನ್ನು ಪಡೆಯ ಬೇಕಾದರೆ ಮಂತ್ರಿಗಳಿಂದ ಹೇಳಿಸಬೇಕು. ಸಾಮಾನ್ಯ ಜನರು ಮಂತ್ರಿಗಳನ್ನು ನೋಡುವುದಕ್ಕಾಗುವುದಿಲ್ಲ. ಯಾರಾದರೂ ಸ್ವಾಮಿಗಳನ್ನು ಕರೆದುಕೊಂಡು ಹೋದರೆ

ಅವರಿಗೆ ಭೇಟಿ ಕೊಡುತ್ತೀರೇ ಹೊರತು ಇಲ್ಲದೇ ಇದ್ದರೆ ಇಲ್ಲ. ಆದ್ದರಿಂದ ಈ ಒಂದು ವ್ಯವಸ್ಥೆಯನ್ನು ಸರಿಯಾಗಿ ಮಾಡಬೇಕೆಂದು ಈ ಸಮಯದಲ್ಲಿ ತಮ್ಮ ಗಮನಕ್ಕೆ ತರುತ್ತಾ ಇದ್ದೇನೆ. ಆ ರೀತಿ ಮಾಡಿ ವಿದ್ಯಾ ಖಾತೆ ನಮ್ಮ ದೇಶದಲ್ಲಿ ಒಳ್ಳೆಯ ಹೆಸರನ್ನು ಪಡೆಯುವಂತಾಗಿ ಮೈಸೂರಿನ ಎಲ್ಲ ಪ್ರಜೆಗಳಿಗೂ ನ್ಯಾಯವಾದ ಹಕ್ಕು ದೊರೆಯುವಂತಹ ವ್ಯವಸ್ಥೆಯನ್ನು ಮಾಡಬೇಕೆಂದು ಸರ್ಕಾರದವರಿಗೆ ಸೂಚನೆ ಮಾಡುತ್ತಾ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

Sri GANJI VEERAPPA (Harihar).—Mr. Speaker, Sir, so far as this Demand on Education is concerned, I wish to make a few observations. This is one of our very big demands wherein crores of rupees are being spent and it is the duty of this Hon'ble House to review the progress that has been made so far and also to comment upon the proposals made in the Budget with regard to the expenditure on this Department. To be fair to the Department of Education and to the Hon'ble Minister for Education, we have to admit that certain remarkable progress has been made. In fact, I am glad, that some of our friends on the other side also had to congratulate him because very important developments have taken place, *viz.*, nationalisation of text books, triple benefit scheme and the efforts to get uniformity between Karnatak University syllabi, and the Mysore University syllabi, and to the efforts to bring out another University here. These are not small events. If we know the number of High Schools that have increased during the last two years, it is astonishing to find that these things have come up and number of new Colleges have been started. Education is a very important item and we see, looking at the number of High schools that have sprung up, the Colleges that have sprung up, there is a wide awakening on the part of the Department. Sometimes, there is good response on the part of the Government also in that respect. I am glad that Government has very well responded, because they have increased the amenities for education. There are certain matters on which I would like to tell the Government, because what I find is, if at all we have to criticise the Education Minister, we can only do so by saying that he is over enthusiastic or perhaps he may be hasty in doing certain things. Apart from that, with regard to the progress in the field of education, none of us can have two opinions. If it is, there is only a feeling in the minds of some that a discrimination has been made in the matter of certain parts, it is for the Minister to reply, and I wish the Education Minister will come out in his reply, just like the Public Works Minister did, with certain facts and figures that discrimination has not been made. I hope he will do it.

There are certain things which ought to receive our attention. We see, that after the change of the Ministry of Education in the Centre, we are happy that Mr. Chagla has come out boldly with certain improvements in the Department. He has also come out with a statement wherein he has stated that an Expert Body is going to be appointed to find out as to the kind of education that one must receive. It is very unfortunate that this aspect has not received serious attention of our leaders. It is an All-India matter. I wish all our attention is cocentrated on this important aspect and we are glad that a man with a stature like that of Mr. Chagla has come out boldly with his ideas, very revolutionary ideas. We must wait and see as to what the outcome of

(SRI GANJI VEERAPPA)

this Committee would be. So far as our State is concerned, in fact, recently, a very important thing is receiving attention, *viz* , whether the number of years of education upto the degree level should be 14 or 15. The Education Minister, of course, has come out with a statement saying that the 11th standard must be opened now and whether that standard should be part of High School or University education is a matter that should be decided now. I for one, want to say that the 11th standard, if it is to be equivalent to the P.U.C., it must be within the control of the University in the matter of syllabi, in the matter of examination and all those matters, and only for the administrative side of it let it be with the Department of Education, we are not bothered. What we are now seeing is, what remedy should be found out and how best we can improve the standards of education. My friend, the Leader of the Opposition knows that we are seeing enormous failures in the University examinations, especially in the P.U.C., which is a very important examinatitn. We are seeing the fall in standards. Whether the standard should be improved at the Primary education level itself, because that is the foundation, or whether only at the Univesity level, we should th nk of. If the student does not get proper education from the Primary and Middle School level, we cannot expect to keep pace with the standard of the University. It is for the Government to think as to how best they can improve the standard at the Primary education level. Even the teachers at the Primary and Middle School level are not properly trained. If an examination is held for the teachers, I do not know how many of them will try to fit in with the post, under whose care the boys are there. The teachers must receive special training. Otherwise, according to the present rule of recruitment if any S.S.L.C. hand is to be taken, our standards will not improve. No use of trying to improve the standard at the University level ; it must be improved at the lower level. As a matter of fact, more attention should be given to this aspect of the matter. If we really feel that the stadards must improve, I suggest that even the Government can appoint an expert educationist to find out as to how best we can improve the standards. To minimise the number of failures, even the percentage of passes in the University and P.U.C., I may submit, that gracing and moderations are done. Artificial boosting of results cannot be a permanent remedy. If you want to have a real picture of these things, I think the Education Minister will do a lot of service to the cause of education if he tries to find out a remedy for this and tries to improve the standard.

3-30 P.M.

We must also improve the quality of education.

Sir, I next want to refer to the establishment of the new University. Sir, I say, let it be a model university. In fact, in our State what we find is proper attention is not given to the development of post-graduate

courses in science. In fact, that is very important thing and research work must be encouraged, and I belive that this is the main object of the Bangalore University, to see that proper training for post-graduate students to undertake research work also is given here. I am glad about it because I was a member of this Committee and even the Government of India, thanks to the U.G.C. Chairman also, because with no effort on our part, the U.G.C. came out with a statement that if at all, we are having any university, in the south, Bangalore is the most ideally suited place. I hope, they will come forward with lots of grants if our Government starts. If I may say, so, perhaps they are anxious to have this as a Central university. The financial burden on the State would be only for an initial period of one year, because of legal impediments, the Centre is not in a position to start any university in the State, because education is a State subject.

Sri G. V. GOWDA.—If it is impossible for the Central Government to start a university, how can it take over ?

Sri S. R. KANTHI.—I will explain the legal position. The Central Goverument cannot start a university anywhere under the Constitution. But it takes over any university as a Central University and before it is taken over, Parliament has to pass a law. All this takes some time. I hope within one year, it will be done.

Sri GANJI VEERAPPA.—Sir, I am glad the Education Minister has clarified the position. When we were in Delhi on the same matter they said that the constitutional impediment is there for the Centre to start a university in any State, because education is a State subject. If I may enlighten the House, as soon as we start the university, the Centre is going to take it over. And with all pride I can say that this university will be of a high order wherein facilities will be given for post-graduate research work in science subjects.

Sri ANNA RAO GANAMUKHI.—Sir, has the Central Government or the Minister given this assurance to you ?

Sri GANJI VEERAPPA.—Sir, I can speak with a certain amount of responsibility, because I was a Member of that Committee which went to Delhi and I think my friend will bear with me that the Central Government has given an assurance that they are going to take it over and to begin with, they are going to give grants under the U.G.C. rules.

Sri A. KRISHNA SETTY (Mangalore-II).—Is education going to be a concurrent subject, Sir ?

Sri S. R. KANTHI.—I can inform the Hon'ble Members that the higher education is already a concurrent subject, so far as standards are concerned.

Sri GANJI VEERAPPA.—Sir, in this connection, I want to make a few observation with regard to certain things in the Mysore University.

Suffice it to say, we are glad that the Bangalore University is to be established. But I do not know—the Bill itself is not ready, and the subject is not on the agenda for this Session. The Education Minister pointed out that it is to come into being very shortly—during the next academic year. But the Bill is not here.

Sri S. R. KANTHI.—The Bill is submitted.

Sri GANJI VEERAPPA.—Then we will congratulate the Hon'ble Minister if it comes soon.

Sir, another thing which I want to impress upon the Government is with regard to the two Universities that are functioning in Mysore State. In the Karnataka University, the Vice-Chancellor is an elected person. In Mysore, he is nominated. If I can enlighten you, this system of nomination is not correct and sooner the present Mysore University Act is amended in this respect, the better. It should admit of an elected vice-chancellor. That is my personal opinion and it is in keeping with progressive universities in this country.

Another thing I want to suggest is, nowhere can we see the Registrar being there only for a short period. In fact, there will be a permanent Registrar to ensure the continuity of administration and proper administration of the University. The man is always there. In the Mysore University there is a system of bringing a person from the cadre of teachers and as long as they are there, they lose touch with the teaching profession, nor is the continuity of administration kept up, because when a person gets some experience, he will be posted outside and somebody also will come.

Sir, I do not want to say that both the Acts are to be brought into uniformity. If there are any defects or difficulties in the way, then you are free to remedy them. We know in neighbouring Madras State, there is the Annamalai University which has its own act, the Madras University has its own act. In Maharashtra also, we see several Acts. It is not wrong to have different University Acts within the same State. It is not wrong. But let us try as far as possible, to make it uniform. But one thing is certain, syllabi must be made uniform. What is happening is, when officers are transferred to the integrated areas, these boys are to be admitted to the Karnataka University, there are impediments, — it is the same *vice versa*. To avoid all these difficulties I think it is better to have a uniform syllabi.

With regard to the suggestion made by some friends here that even here, education in High Schools should be made free. I for one would support it, because in the neighbouring State of Madras, they have made education free. Even here, under the present rules, only 15 per cent of the boys have to pay fees. 85 per cent are free. Why not be magnanimous and make the entire education in high schools free also. So, it is better that such a progressive step is taken so that even the poorest boy will have an opportunity of having free education up to the S.S.L.C. stage which is the minimum required for entry into any vocation in life.

Sir, one point which I want to touch upon is temporary lecturers.

Mr. SPEAKER.—Two minutes more.

Sri GANJI VEERAPPA.—I shall close Sir. Sir, with regard to temporary lecturers working in the university colleges and Government colleges, people who have worked for nearly 5—6 years are still called temporary. Every time we go to the Syndicate Meeting, a number of them young people, hang upon us. Their plight is really miserable. I

think with regard to Government colleges, perhaps, you want the rules of recruitment to be finalised. Sir, let it be done as soon as possible.

With regard to the demotion of some lecturers, I humbly appeal to the Government not to think of taking it to the Supreme Court. Sir, whatever be the legal quibbles, let them not be decided at the cost of tha careers of a number of these young men. It is a human problem. It is no fault of theirs for having gone to the High Court, because they were aggrieved. Let the Government be magnanimous in giveing effect to the decision of the High Court, once again restoring the same position to them. Because, if I may enlighten you, there is no difference so far as qualifications are concerned between these two sets of persons—between those who are demoted and those who still continue in the same position. In fact some of them are better qualified—there are first class people who are demotee. It is not proper and fair that these people should be allowed to suffer. I appeal to the Government to see that the matters rests there and the decision of the High Court is implemented.

With this, I close, Sir. Thank you.

SRI L. B. BIRJE (Khanapur).—Spoke in Marathi.

†ಶ್ರೀ ಬೈರಪ್ಪಾಜಿ (ತುರುವೇಕೆರೆ).—ಮಾನ್ಯ ಅಧ್ಯಕ್ಷರೇ, ಈ 21 ಕೋಟಿ 93 ಲಕ್ಷಗಳ ವಿದ್ಯಾ ಬೇಡಿಕೆಗಳ ಮೇಲೆ ಮಾತನಾಡುತ್ತಾ ಸರ್ಕಾರಕ್ಕೆ ನಾನು ಕೆಲವು ಸಲಹೆಗಳನ್ನು ಕೊಡಬಯಸುತ್ತೇನೆ. ಸ್ವಾಮಿ, ವಿದ್ಯಾಖಾತೆಯ ಮಂತ್ರಿಗಳ ಮೇಲೆ ಈ ಸಭೆಯಲ್ಲೂ ಹಾಗೂ ಹೊರಗಡೆಯಲ್ಲೂ ಬಹಳ ಜನರು ಟೀಕೆಗಳನ್ನು ಮಾಡುತ್ತಿರುವುದರಿಂದ ಈ ದಿವಸ ಮಂತ್ರಿಗಳು ಆ ಟೀಕೆಗಳಿಗೆಲ್ಲಾ ಒಳಗಾಗಿದ್ದಾರೆ. ಆದರೆ ಇವರ ಭಾಗಕ್ಕೆ ಬಂದಿರತಕ್ಕ ವಿದ್ಯಾಖಾತೆಯ ಬಗ್ಗೆ ಇನ್ನು ಮುಂದಕ್ಕೆ ಇದು ಸುಗಮವಾಗಿ ನಡೆದುಕೊಂಡು ಹೋಗಲು ಇವರು ಕೆಲವು ಪ್ರಗತಿಪರವಾದ ಮಾರ್ಪಾಡುಗಳನ್ನು ಮಾಡಿದ್ದಾರೆ. ಅದರಿಂದಲಾದರೂ ನಾವು ಇವರ ಬಗ್ಗೆ ಎರಡು ಒಳ್ಳೆಯ ಮಾತುಗಳನ್ನಾಡುವುದು ನಮ್ಮ ಕರ್ತವ್ಯ. ಇವರು ಮೊದಲನೆಯದಾಗಿ ಪಠ್ಯ ಪುಸ್ತಕಗಳನ್ನು ರಾಷ್ಟ್ರೀಕರಣ ಮಾಡಿದ್ದಾರೆ. ಇನ್ನು ಎರಡನೆಯದಾಗಿ ಕಡ್ಡಾಯ ಪ್ರಾಥಮಿಕ ಶಿಕ್ಷಣವನ್ನು ಜಾರಿಗೆ ತಂದಿದ್ದಾರೆ. ಆದರೆ ಇವುಗಳಿಂದ ನಮ್ಮ ವಿದ್ಯಾಭ್ಯಾಸಕ್ಕೆ ಎಷ್ಟರಮಟ್ಟಿಗೆ ಒಳ್ಳೆಯದಾಗಿದೆಯೆಂಬುದನ್ನು ನಾವೀಗ ನೋಡಬೇಕಾಗಿದೆ. ಆದರೆ ಈ ಕಡ್ಡಾಯ ಶಿಕ್ಷಣವನ್ನು ಜಾರಿಗೆ ತಂದಿರತಕ್ಕ ಕ್ರಮದಲ್ಲಿ ಮತ್ತು ಇದನ್ನು ಇಂಪ್ಲಿಮೆಂಟ್ ಮಾಡಲು ಹೊರಟಿರತಕ್ಕ ವಿಧಾನದಲ್ಲಿ ಒಂದು ಕಟ್ಟುನಿಟ್ಟಾದ ನೀತಿ ರೀತಿಯಿಲ್ಲದೆ ಇರುವುದರಿಂದ ಈ ಬಗ್ಗೆ ಕೆಲವು ಸಲಹೆಗಳನ್ನು ಕೊಡತ್ತಾ ನಾನು ಕೆಲವು ಟೀಕೆಗಳನ್ನು ಮಾಡಲಿಚ್ಛಿಸುತ್ತೇನೆ. ಕಡ್ಡಾಯ ಶಿಕ್ಷಣ ಪದ್ಧತಿಯನ್ನು ಜಾರಿಗೆ ತರತಕ್ಕದ್ದು ಸರ್ಕಾರದ ಆದ್ಯ ಕರ್ತವ್ಯ. ಇದನ್ನು ಇವರು ಗ್ರಾಮಾಂತರ ಪ್ರದೇಶದಲ್ಲಿ ಕಟ್ಟಡಗಳನ್ನು ಕಟ್ಟಿಸಿಕೊಡತಕ್ಕದ್ದರ ಮೂಲಕ ಇವರು ಜಾರಿಗೆ ತರಬೇಕಾದ್ದು ಯುಕ್ತವಾದದ್ದು. ಅಷ್ಟೇ ಅಲ್ಲದೆ ಗ್ರಾಮಾಂತರ ಪ್ರದೇಶಗಳಲ್ಲಿ ಮಕ್ಕಳು ಸರಿಯಾಗಿ ಪಾಠಶಾಲೆಗೆ ಬರುತ್ತಿದ್ದಾರೆಯೇ, ಅಥವಾ ಇಲ್ಲವೇ ಶಾಲೆಗಳಿಗೆ ಸರಿಯಾಗಿ ಉಪಾಧ್ಯಾಯರುಗಳು ಬರುತ್ತಿದ್ದಾರೆಯೇ ಇಲ್ಲವೇ ಎಂಬುದನ್ನು ನಿಗಾನೋಡಿಕೊಳ್ಳುವುದು ಸರ್ಕಾರದವರ ಪ್ರಥಮ ಕರ್ತವ್ಯಗಳಲ್ಲೊಂದಾಗಿದೆ. ಕೆಲವು ಗ್ರಾಮಗಳಲ್ಲಿ ಇದರ ಮೇಲ್ವಿಚಾರಣೆಗಾಗಿ ಒಂದು ಸಮಿತಿಯನ್ನು ನೇಮಕಮಾಡಿದ್ದಾರೆ. ಹೆಸರು ಬೆಟರ್‌ಮೆಂಟ್ ಕಮಿಟಿ ಎಂದು. ಅದಕ್ಕೊಬ್ಬ ಛೇರ್ಮನ್ನರಿದ್ದಾರೆ. ಇವರು ನಾಮಕರಣಮಾಡಲ್ಪಟ್ಟ ಛೇರ್ಮನ್ನರು. ಆದ್ದರಿಂದ ಇವರ ಕೆಲಸವೂ ಕೂಡ ನಾಮಕಾವಾಸ್ತೆಯೇ. ಸರ್ಕಾರದವರು ನೇಮಕ ಮಾಡತಕ್ಕ ಕಮಿಟಿಗಳಲ್ಲಿ 100ಕ್ಕೆ 99 ಕಮಿಟಿಗಳು ಹೀಗೇ ಇರುತ್ತವೆ. ಆಯಾಯ ಶಾಲೆಯ ಉಪಾಧ್ಯಾಯರು ಪ್ರೊಸೀಡಿಂಗ್ಸ್ ಬುಕ್ಕಿನಲ್ಲಿ ಬರೆದುಕೊಂಡು ಹೋಗಿ ಛೇರ್ಮನ್ನರ ಮನೆಯಲ್ಲಿ ಅವರಿಂದ ರುಜುವನ್ನು ಆ ಪುಸ್ತಕಕ್ಕೆ ಹಾಕಿಸಿಕೊಂಡು ಬರುತ್ತಾರೆ. ಅಷ್ಟೇ ಶಿವಾಯಿ ಅವರೇನೂ ಒಂದು ದಿವಸಕ್ಕೂ ಆ ಶಾಲೆಯ ಹತ್ತಿರಕ್ಕೆ ಬಂದಿರುವುದಿಲ್ಲ. ಇಂಥ ವಿದ್ಯಾಭ್ಯಾಸವೇತಕ್ಕೆ, ಇಂಥ ಕಮಿಟಿಗಳಾದರೂ ಏತಕ್ಕೆಂದು ಕೇಳುತ್ತೇನೆ? ಕಡ್ಡಾಯ ಶಿಕ್ಷಣ ಕ್ರಮದಲ್ಲಿ ಪ್ರಾಥಮಿಕ ಶಾಲೆಗಳನ್ನು ಅಪ್‌ಗ್ರೇಡ್ ಮಾಡಬೇಕು. ಇತ್ತೀಚೆಗೆ ಆರು ವರ್ಷದ ಮಕ್ಕಳನ್ನು ಶಾಲೆಗೆ ಕಡ್ಡಾಯವಾಗಿ ಕಳುಹಿಸಬೇಕೆಂದು ಒತ್ತಾಯ ಮಾಡುತ್ತಿರುವುದರಿಂದ ಶಾಲೆಗಳ ಎಲ್ಲಾ ಹಂತಗಳಲ್ಲೂ ವಿದ್ಯಾರ್ಥಿಗಳ ಸಂಖ್ಯೆ ಏರುತ್ತಿದೆ. ಎಲ್ಲಾ ಪಾಠಶಾಲೆಗಳ ಸಂಖ್ಯೆಯನ್ನೂ ಅಪಗ್ರೇಡ್ ಮಾಡಬೇಕಾಗಿದೆ. ಕಳೆದ ಸಾಲಿನಲ್ಲಿ ಸೆಕೆಂಡರೀ

(ಶ್ರೀ ಬಿ. ಬೈರಪ್ಪಾಜಿ)

ವಿದ್ಯಾಭ್ಯಾಸದ ಮಟ್ಟದಲ್ಲಿ ಸುಮಾರು 400 ಸ್ಕೂಲುಗಳನ್ನು ತೆರೆಯಲು ಅನುಮತಿಯನ್ನು ಕೊಡಲಾಗಿತ್ತು. ಕಡ್ಡಾಯ ಶಿಕ್ಷಣವನ್ನು ಜಾರಿಗೆ ತಂದಮೇಲೆ ಈ ಹೈಸ್ಕೂಲುಗಳನ್ನು ಜಾಸ್ತಿಮಾಡಬೇಕಾದ್ದು ಸರ್ಕಾರದವರ ಕರ್ತವ್ಯ. ಕಳೆದ ಸಾಲಿನಲ್ಲಿ ಕೆಲವು ವಿದ್ಯಾರ್ಥಿಗಳಿಗೆ ಹೈಸ್ಕೂಲಿನಲ್ಲಿ ಸೀಟ ಸಿಕ್ಕದೆ ಅತಿವಾಡಬೇಕಾದ ಪ್ರಸಂಗ ಬಂದಿದ್ದನ್ನು ನಾನು ಕಣ್ಣಾರೆ ನೋಡಿದ್ದೇನೆ. ಈ ವಿಚಾರವನ್ನು ಮಂತ್ರಿಗಳ ಗಮನಕ್ಕೂ ತರಲಾಗಿದೆ. ಆದರೆ ಇತ್ತೀಚೆಗೆ ಸರ್ಕಾರದವರು ಹೊರಡಿಸಿರತಕ್ಕ ಒಂದು ಸರ್ಕಾರಿ ಆಜ್ಞೆಯ ಪ್ರಕಾರ ಹಳ್ಳಿಗಳಲ್ಲಿ ಪ್ರಾರಂಭಮಾಡತಕ್ಕ ಹೈಸ್ಕೂಲುಗಳಿಗೆ ಯಾವ ತರಹೇ ಗ್ರಾಂಟನ್ನೂ ಮೂರು ವರ್ಷಗಳ ಕಾಲ ಕೊಡುವುದಿಲ್ಲವೆಂದು ಅದು ತಿಳಿಸುತ್ತಿದೆ. ಹೀಗೆ ಮಾಡಿತಕ್ಕದ್ದು ತರವಲ್ಲ. ಪಟ್ಟಣಗಳ ವಿಚಾರ ಒಂದು ರೀತಿ ಇರುತ್ತದೆ. ಹಳ್ಳಿಗಳಲ್ಲಿರತಕ್ಕವರೆಲ್ಲಾ ಬಡವರು. ಅವರಿಗೆ ಸರಿಯಾಗಿ ಹೊಟ್ಟೆಬಟ್ಟೆಗೇ ಇರುವುದಿಲ್ಲ. ಸರ್ಕಾರದವರು ಈ ವಿಚಾರವನ್ನು ಪುನರ್‌ಪರಿಶೀಲನೆಮಾಡಬೇಕೆಂದು ಹೇಳುತ್ತೇನೆ. ಈ ಆಜ್ಞೆಯನ್ನು ಸರ್ಕಾರದವರು ಕೂಡಲೇ ಸಡಿಲಮಾಡಿ ಕನಿಷ್ಠ ಪಕ್ಷ ಶೇಕಡ 50 ರಷ್ಟು ಆ ಶಾಲೆಗಳ ಖರ್ಚಿನಲ್ಲಿ ಸರ್ಕಾರದವರು ವಹಿಸಿಕೊಳ್ಳಬೇಕೆಂದು ನಾನು ಸಲಹೆಮಾಡುತ್ತೇನೆ. ಇಲ್ಲವೇ ತಾವೇ ಆ ಶಾಲೆಗಳನ್ನು ನೇರವಾಗಿ ನಡೆಸಿಕೊಂಡು ಹೋಗಬೇಕೆಂದು ಹೇಳುತ್ತೇನೆ. ಈ ದಿವಸ ಏನೋ ಮಕ್ಕಳಿಗೆ ಸೀಟ್ ಸಿಕ್ಕಲಿಲ್ಲವೆಂಬ ಉದ್ದೇಶದಿಂದ ಶಾಲೆಗಳನ್ನು ತೆರೆದಿದ್ದಾರೆ. ಅವುಗಳ ಬಗ್ಗೆ ಸರ್ಕಾರದವರು ಸೂಕ್ತ ರೀತಿಯಲ್ಲಿ ಸಹಾಯವನ್ನು ನೀಡದಿದ್ದರೆ ಅವರು ಅವುಗಳನ್ನು ಮುಂದಿನ ವರ್ಷ ಖಂಡಿತವಾಗಿಯೂ ಮುಚ್ಚಿಬಿಡುತ್ತಾರೆ. ಇದಕ್ಕೆ ಸರ್ಕಾರದವರು ಅವಕಾಶ ಕೊಡಬಾರದೆಂದು ಸಲಹೆಮಾಡುತ್ತೇನೆ.

4-00 P. M.

ಸ್ವಾಮಿ, ಇನ್ನು ಹಂಗಾಮಿ ಲೆಕ್ಚರರುಗಳನ್ನು ತಾವಾಗಿಯೇ ನೇಮಿಸಿಕೊಂಡಿದ್ದೀರಿ. 3-4-5 ವರ್ಷಗಳ ಕಾಲ ಈ ಇಲಾಖೆಯಲ್ಲಿ ಕೆಲಸಮಾಡಿದ್ದರೂ ಅವರನ್ನು ಇನ್ನೂ ಖಾಯಂ ಮಾಡಲಿಲ್ಲ. ಇದನ್ನು ಮಾನವೀಯತೆಯ ದೃಷ್ಟಿಯಿಂದ ಮತ್ತು ಬಹಳ ಉದಾತ್ತವಾದ ಮನೋಭಾವನೆಯಿಂದ ಸರ್ಕಾರ ವಿಮರ್ಶೆ ಮಾಡಬೇಕೆಂದು ನಾನು ಸರ್ಕಾರದವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ಕಾರಣವೇನೆಂದರೆ ವಿದ್ಯಾ ಇಲಾಖೆಯ ಮಂತ್ರಿಗಳು ಈ ಸಂದರ್ಭದಲ್ಲಿ ಅವರಿಗೆ ಕೊಡತಕ್ಕ ಒಂದು ಹಾನರೇರಿಯಂನ್ನು ½ಕ್ಕೆ ಇಳಿಸಿದರೆ ಬೆಂಗಳೂರು ವಾಸದಲ್ಲಿ ಹೇಗೆ ಜೀವನ ಮಾಡಬೇಕೆಂಬುದನ್ನು ಅವರೇ ಊಹಿಸಿಕೊಂಡು ವಿವೇಚನೆಯಿಂದ ಪ್ರಯತ್ನ ಮಾಡಬೇಕು. ಅವರಿಗೆ ಕೊಡುತ್ತಿರುವ 250 ರೂಪಾಯಿಗಳನ್ನು 150 ಕ್ಕೆ ಇಳಿಸಿದರೆ ಅವರ ಜೀವನ ಮಟ್ಟ ಹೇಗೆ ನಡೆಯುತ್ತದೆ, ಮಾನವೀಯತೆಯ ದೃಷ್ಟಿಯನ್ನು ನೋಡತಕ್ಕ ಕ್ರಮದಲ್ಲಿ ಬಹಳ ಉದಾತ್ತವಾದ ಧ್ಯೇಯವನ್ನು ಪರಿಗಣಿಸಬೇಕು. ಸುಪ್ರೀಂ ಕೋರ್ಟಿಗೆ ಹೋಗುವ ಹವ್ಯಾಸವನ್ನು ಇಲ್ಲಿ ತಡೆದು ಅವರ ವಿಷಯದಲ್ಲಿ ಹೆಚ್ಚು ಸೂಕ್ತ ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕೆಂದು ನಾನು ಸರ್ಕಾರಕ್ಕೆ ಮನವಿ ಮಾಡುತ್ತೇನೆ.

ಇನ್ನು ನನಗೆ ಇಷ್ಟು ಹೊತ್ತು ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟಂಥ ಮಾನ್ಯ ಅಧ್ಯಕ್ಷರಿಗೆ ವಂದನೆಗಳನ್ನು ಅರ್ಪಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಜಿ. ಮರುಳಪ್ಪ (ಕಡೂರು).—ಅಧ್ಯಕ್ಷರೆ, ನನಗೆ ಈ ದಿವಸ ಈ ಸಂದರ್ಭದಲ್ಲಿ ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟಿದ್ದಕ್ಕೆ ಮೊದಲು ತಮ್ಮನ್ನು ಅಭಿನಂದಿಸುತ್ತೇನೆ. ನಿನ್ನೆ ದಿವಸ ಈ ವಿದ್ಯಾ ಇಲಾಖೆ ಬಡ್ಜೆಟ್ ಮೇಲೆ ಮಾತನಾಡುತ್ತಾ ನಮ್ಮ ಸಹೋದರಿಯವರಾದಂಥ ಶ್ರೀಮತಿ ನಾಗರತ್ನಮ್ಮನವರು ಬಹಳ ವಿಚಾರಗಳನ್ನು ಹೇಳಿದರು. ಅವರು ಮಾತನಾಡಿದ ಮೇಲೆ ನಮಗೆಲ್ಲರಿಗೂ ಮಾತನಾಡುವುದಕ್ಕೆ ಏನಾದರೂ ಉಳಿದಿದೆಯೇ ಎಂದು ಪರೀಕ್ಷೆ ಮಾಡಿ ನೋಡಿದರೆ ಅವರು ಎಲ್ಲವನ್ನೂ ಸರಿಯಾಗಿಯೇ ಹೇಳಿದ್ದಾರೆ. ಆದರೆ ವಿದ್ಯಾ ಖಾತೆಯ ಬಗ್ಗೆ ಹೇಳುವುದಾದರೆ ಇನ್ನೂ ಬೇಕಾದಷ್ಟು ಹೇಳೋಣ ಅನ್ನಿಸುತ್ತದೆ. ವಿದ್ಯಾ ಸಚಿವರ ಮೇಲೆ ನನಗೇನೋ ಒಳ್ಳೆಯ ಗೌರವವಿದೆ. ಒಳ್ಳೆಯವರು, ಒಳ್ಳೆಯವರು ಎಂದೇನೋ ಹೇಳುತ್ತೇನೆ. ಆದರೆ ಅವರಿಗೆ ವಿದ್ಯಾ ಖಾತೆ ಕೊಡುವುದು ಸರಿಯೇ, ಅದನ್ನು ನಿರ್ವಹಿಸುವ ಶಕ್ತಿ ಅವರಿಗೆ ಇದೆಯೇ ಇಲ್ಲವೇ ಎಂಬುದನ್ನು ವಿಚಾರ ಮಾಡಬೇಕು, ಕಳೆದ ಎರಡು ವರ್ಷಗಳಿಂದಲೂ............

Mr. SPEAKER.—Which demand ? We are not concerned with the Minister. We are sanctioning the amount for the whole year.

Sri G. MARULAPPA.—He is responsible to spend that amount.

ಶ್ರೀಮತಿ ನಾಗರತ್ನಮ್ಮನವರು ಈ ವಿದ್ಯಾ ಶಾಖೆ ಸಚಿವರಿಗೆ ರಾಜೀನಾಮೆ ಕೊಟ್ಟುಬಿಡಿ ಎಂದು ಹೇಳಿದರೂ ಇವರು ಕೊಟ್ಟಿಲ್ಲ. ಅದು ಅವರ ಜವಾಬ್ದಾರಿ. ರಾಜಕೀಯ ವಿಚಾರ ಅವರಿಗೆ ಇದೆಯೇ ಎನ್ನುವ ಪ್ರಶ್ನೆ ಇಲ್ಲಿ ಬರುತ್ತದೆ. ಆದರೆ ಎರಡು ವರ್ಷಗಳಿಂದಲೂ ಇವರ ಆಡಳಿತದ ಬಗ್ಗೆ ಏನಾದರೂ ವಿದ್ಯಾ ಇಲಾಖೆಯ ವಿಚಾರದಲ್ಲಿ ಯಾರಾದರೂ ಚರಿತ್ರೆ ಬರೆಯುವುದಾದರೆ ಎಷ್ಟು ದೊಡ್ಡ ಪುಸ್ತಕ ಬರೆಯಬೇಕಾಗುತ್ತದೆ. ರಾಜ್ಯದಲ್ಲಿ ಎಲ್ಲೆಲ್ಲೂ ಕೂಡ ಇವರ ಬಗ್ಗೆ ಅಸಮಾಧಾನವನ್ನು ವ್ಯಕ್ತಪಡಿಸುತ್ತಿದ್ದರೂ ಇವರು ಏನಾದರೂ ಆಗಲೀ ನಾನು ಎಂತಹ ಪ್ರಾಬ್ಲಮ್ ಆಗಲೀ ಅದನ್ನು ಬಾಯಿನಲ್ಲಿ solve ಮಾಡುತ್ತೇನೆಂದು ಹೇಳುತ್ತಲೇ ಬರುತ್ತಿದ್ದಾರೆ. ನಮ್ಮ ಈ ವಿದ್ಯಾ ಸಚಿವರು ಯಾವ ಪ್ರಾಬ್ಲಂ ಬಂದರೂ ಅದನ್ನು solve ಮಾಡದೆ ಹೋದರೂ ಯಾವುದಾದರೂ ಒಂದು ರೀತಿಯಲ್ಲಿ ದೇಶದಲ್ಲಿ ಗೊಂದಲವೆಬ್ಬಿಸುವಂತಹ ಪ್ರಾಬ್ಲಂನ್ನು ಕ್ರಿಯೇಟ್ ಮಾಡುತ್ತಿದ್ದಾರೆ. ಇದು ಒಂದು ಅವರ ಹೊಸ ಮೆಷನರಿ. ಇದರಿಂದ ಜನಗಳಿಗೆ ಬಹಳ ಅಸಹ್ಯ ಮತ್ತು ಬೇಜಾರು ವುಂಟಾಗಿದೆ. ಇಂಡಿಯಾ ಸರ್ಕಾರದಲ್ಲಿ ಲಾಲ್ ಬಹದೂರ್‌ಶಾಸ್ತ್ರಿಗಳು ರೈಲ್ವೆ ಮಂತ್ರಿಗಳು ಆದಾಗ ಒಂದು ರೈಲು ಬಿದ್ದುಹೋಯಿತು. ಏನೇ ಇರಲಿ, ಏನೇ ಆಗಲಿ, ಎಂತಹ ಪ್ರಾಬ್ಲಂ ಬರಲಿ, ಅವನ್ನೆಲ್ಲಾ ನೋಡುತ್ತೇನೆ ಎಂದು ಹೇಳುತ್ತಿದ್ದರು. ಹಾಗೆ ಇವರು ಹೇಳುವುದನ್ನು ಷುರು ಮಾಡಿದ್ದಾರೆ. ಇದು ದೇಶದ ಎರಡುವರೆ ಕೋಟಿ ಜನಗಳ ಪ್ರಶ್ನೆ. ನಾನು ಹೇಳುವುದು ಇಷ್ಟೆ. ತಾವಾಗಿ ತಾವೇ ಏಕೆ ಇಲ್ಲದ ಸಲ್ಲದ ಪ್ರಾಬ್ಲಂಗಳನ್ನು ಕ್ರಿಯೇಟ್ ಮಾಡಿಕೊಂಡು ಇವರು ಮುಂದಿನ ಜನಾಂಗದಲ್ಲಿ ಏಕೆ ಒಂದು ರೀತಿಯ ಸಂದೇಹಕ್ಕೊಳಗಾಗುತ್ತಾರೋ ನನಗೆ ಗೊತ್ತಾಗಲಿಲ್ಲ. ಏಕೆಂದರೆ ಮುಂದೆ ರಾಜ್ಯಾಂಗವನ್ನು ಅಭಿವೃದ್ಧಿ ಮಾಡುವ ಜವಾಬ್ದಾರಿ ಈಗಿನ ಮಕ್ಕಳ ಮೇಲಿದೆ. ಜನಗಳಿಗಂತೂ ಈ ವಿದ್ಯಾ ಇಲಾಖೆಯ ಆಡಳಿತದ ಬಗ್ಗೆ ಬಹಳ ಮಟ್ಟಿಗೆ ಬೇಜಾರು ಆಗಿದೆ. ನಾನು ಹೋಗುವುದು ನಿಶ್ಚಯ ಎಂದು ಅವರು ಹೇಳದೆ ಮೈಸೂರು ದೇಶದ ರಾಜಕೀಯ ಏನಾದರೂ ಆಗಲೀ ಎರಡು ಕೋಟಿ ಮೂವತ್ತು ಲಕ್ಷ ಜನಗಳಿಗೆ ಏನು ಅನ್ಯಾಯವಾದರೂ ಪರವಾ ಇಲ್ಲವೆಂದು ತಾನು ಮಾತ್ರ ಅಧಿಕಾರ ಬಿಡಲಿಕ್ಕೆ ಇಷ್ಟವಿಲ್ಲ, ತಯಾರಿಲ್ಲವೆಂಬ ಒಂದು ತೀರ್ಮಾನಕ್ಕೆ ಬಂದಿದ್ದಾರೆ.

ಶ್ರೀ ಎಸ್. ಆರ್. ಕಂಠಿ.—2 ಕೋಟಿ 30 ಲಕ್ಷ ಜನಗಳ ವಿಚಾರವಾಗಿ ಹೇಳುವುದಕ್ಕೆ ಮಾನ್ಯ ಸದಸ್ಯರಿಗೆ ಶಕ್ತಿ ಇದೆಯೇ ?

ಶ್ರೀ ಜಿ. ಮರುಳಪ್ಪ.—ಹಾಗಾದರೆ ಇವರಿಗೆ 2 ಕೋಟಿ ಜನಗಳನ್ನು ಆಳುವುದಕ್ಕೆ ಶಕ್ತಿ ಇದೆಯೇ ?

ಶ್ರೀ ಎಸ್. ಆರ್. ಕಂಠಿ.—ಶಕ್ತಿ ಇದೆಯೆಂತಲೇ ಈ ಕಡೆ ಇಲ್ಲಿದ್ದೇವೆ.

ಶ್ರೀ ಜಿ. ಮರುಳಪ್ಪ.—ಹಾಗಾದರೆ ಒಂದು ಕೆಲಸ ಮಾಡೋಣ, ಸರ್ಕಾರದವರು ಒಂದು ಚುನಾವಣೆಯನ್ನು ನಡೆಸಿದಾಗ ಅದರಲ್ಲಿ ನಾನೂ ಇರಬೇಕು, ವಿದ್ಯಾ ಮಂತ್ರಿಗಳೂ ಇರಬೇಕು, ಇಬ್ಬರಿಗೂ ಚುನಾವಣೆ ನಡೆಯಲಿ, ನೋಡೋಣ.

ಶ್ರೀ ಎಸ್. ಆರ್. ಕಂಠಿ.—ಮಾನ್ಯ ಸದಸ್ಯರಿಗೆ ಅಷ್ಟು ಗೊತ್ತಾಗುವುದಿಲ್ಲವೆಂದು ಕಾಣುತ್ತದೆ. ಡಿಮ್ಯಾಂಡ್ ಬಗ್ಗೆ ಮಾತ್ರ ಮಾತನಾಡಿ.

ಶ್ರೀ ಜಿ. ಮರುಳಪ್ಪ.—ಮೈಸೂರು ದೇಶದ ಪರವಾಗಿ ಮಾತನಾಡುವ ಹಕ್ಕು ಈ ಸಭೆಯಲ್ಲಿರತಕ್ಕ 208 ಸದಸ್ಯರಿಗೂ ಇದೆ.

ಶ್ರೀ ಎಸ್. ಆರ್. ಕಂಠಿ.—ನನಗೂ ಇದೆ.

ಶ್ರೀ ಜಿ. ಮರುಳಪ್ಪ.—ಇವರು ಶಿಕ್ಷಣ ಮಂತ್ರಿಗಳಾದಂದಿನಿಂದ ಇವರ ಪ್ರತಿಯೊಂದು ಪ್ರಾಬ್ಲಂ ಜನಗಳಿಗೆ ಬೇಸರವನ್ನುಂಟು ಮಾಡುವುದೇ ಆಗಿದೆ. ಪ್ರತಿಯೊಬ್ಬರೂ ಇಂತಹ ಬಜೆಟ್ ಮಾಡಿದ್ದಾರೆ. ಬೇರೆಯವರು ಈ ಖಾತೆಯ ಮಂತ್ರಿಯಾಗಿದ್ದರೆ ಬಹಳ ಚೆನ್ನಾಗಿತ್ತು ಎಂದು ಹೇಳಿಕೊಳ್ಳುವ ಪರಿಸ್ಥಿತಿ ಈಗ ಬಂದಿದೆ. ಏನಾದರೂ ಒಂದು ಪ್ರಾಬ್ಲಂನ್ನು ಹೇಗೋ ಕ್ರಿಯೇಟ್ ಮಾಡಿಬಿಡುತ್ತಾರೆ. ಇವರನ್ನು ನಿಮಿಷ ನಿಮಿಷ ಕಂಟ್ರೋಲ್ ಮಾಡುವುದಕ್ಕೆ ಯಾರಿಂದ ಸಾಧ್ಯವಾಗುತ್ತದೆ ? ಬಹಳ ಕಷ್ಟ. ಇದಕ್ಕಿಂತ ಬೇರೆ ಸಾಕ್ಷಿ ಮತ್ತು ಉದಾಹರಣೆಗಳು ಬೇಕೇ ? ಇವರ ಒಳ್ಳೆಯತನ ಹೇಗೆ ಆಗಿದೆಯೆಂದರೆ ಶ್ರೀಮತಿ ನಾಗರತ್ನಮ್ಮನವರು ಅವಿದ್ಯಾವಂತನಾದ ಶ್ರೀಮಂತ ಸಲಕ್ಷಣವಾದ ಹುಡುಗನಿಗೆ ಕನ್ಯೆ ಕೊಡುವ ಕಥೆ ಹೇಳಿದಂತಾಗಿದೆ. ಆದ್ದರಿಂದ ಇವರಿಗೆ ಈ ಪೋರ್ಟ್‌ಫೋಲಿಯೋ ಖಂಡಿತವಾಗಿ ಸರಿಯಲ್ಲ. ದೇಶದ ಪ್ರಾಬ್ಲಂಗಳು ಪಾರ್ಟಿ ಪ್ರಾಬ್ಲಂಗಳಾಗಿರುತ್ತವೆ. ಇವರು ಮಾಡತಕ್ಕ ಕಾನೂನುಗಳನ್ನು ಯಾರಿಗಾದರೂ ಹೇಳಿದರೆ ಅವನ್ನು ಪಾಲನೆ ಮಾಡುವವರಿಗೇನಾದರೂ ಗ್ರಾಚಾರ ತಗಲುತ್ತಾ ಇದೆಯೆಂದು ಹೇಳಬಹುದು ಕತ್ತೆಯ ಮರಿಯನ್ನು ಕುದುರೆಯ ಮೇಲೆ ಕುಳ್ಳಿರಿಸಿದರೆ ಚೆನ್ನಾಗಿರುತ್ತದೆಯೇ ? ಅದನ್ನು ಅದರ ಜಾಗದಲ್ಲಿ ಕುಳ್ಳಿರಿಸಬೇಕು. ಕತ್ತೆಯ ಮರಿಯನ್ನು ಕತ್ತೆಯ ಮೇಲೆ ಕುಳ್ಳಿರಿಸಬೇಕು, ಕುದುರೆಯ ಮರಿಯನ್ನು ಕುದುರೆಯ ಮೇಲೆ ಕುಳ್ಳಿರಿಸಬೇಕು. ಆದ್ದರಿಂದ ಇವರಿಗೆ ಯಾವ ಪೋರ್ಟ್ ಫೋಲಿಯೋ ಸಹ ಇಲ್ಲದೆ ಇರುವ ಅಧಿಕಾರವೇನಾದರೂ

(ಶ್ರೀ ಜಿ. ಮರುಳಪ್ಪ)

ಕೊಡುವುದು ಒಳ್ಳೆಯದು. 22 ಕೋಟಿ ರೂಪಾಯಿಗಳಷ್ಟು ಹಣವನ್ನು ಇವರ ಕೈಗೆ ಈ ಖಾತೆ ಗಾಗಿ ಕೊಡುವುದು ಅಷ್ಟು ಚೆನ್ನಾಗಿ ಕಾಣುವುದಿಲ್ಲ.

ಶ್ರೀ ಎಸ್. ಆರ್. ಕಂಠಿ.—ನೀವೇ ತೆಗೆದುಕೊಳ್ಳಿ.

ಶ್ರೀ ಜಿ. ಮರುಳಪ್ಪ.—ನಾವೂ ಸಹ ಕಾಯುತ್ತಾ ಇದ್ದೇವೆ. ನಮಗೆ ಆ ಅಧಿಕಾರ ಬಂದಾಗ ಮಾತ್ರ ಖಂಡಿತ ಬಿಟ್ಟುಕೊಡುವುದಿಲ್ಲ. ಈಗ ಇನ್ನೂ ಬಂದಿಲ್ಲ, ಸುಮ್ಮನಿದ್ದೇವೆ. ಆಗ ಅವರೂ ಸಹ ನಮ್ಮ ಹಾಗೆ ಈ ಕಡೆ ಬಂದು ಕೂತುಕೊಳ್ಳಬೇಕಾಗುತ್ತದೆ. ಇದರಲ್ಲಿ ಒಂದು ಸಂತೋಷದ ವಿಷಯ. ಅವರು ನಮಗೆ ವಿರೋಧವಾಗಿರುವವರು ಅದರಲ್ಲಿಯೂ ಶ್ರೀಮತಿ ನಾಗರತ್ನಮ್ಮನವರು ಬೈದದ್ದು ಅವರಿಗೆ ಸಂತೋಷವಿರಬಹುದು. ಆದರೆ ನಾನು ಅದನ್ನು ಮತ್ತೊಮ್ಮೆ ಹೇಳುವುದಿಲ್ಲ. ನಾನು ಇದನ್ನು ಏತಕ್ಕೋಸ್ಕರ ಹೇಳಿದೆನೆಂದರೆ ಪಾರ್ಟಿಗಿಂತ ದೇಶ ಬಹಳ ಮುಖ್ಯವಾದುದು, ದೇಶದ ಹಿತವನ್ನು ಮನಸ್ಸಿನಲ್ಲಿಟ್ಟುಕೊಂಡು ಸರ್ಕಾರದ ಕೆಲಸಕಾರ್ಯಗಳನ್ನು ಮಾಡಬೇಕು, ಇದು ಒಂದು ಆಡಳಿತ ಪಕ್ಷ, ಇದೇನಾದರೂ ಅನ್ಯಾಯ ಮಾಡಿದರೆ ಯಾರೂ ಸುಮ್ಮನಿರಬಾರದು, ಈ ಪಾರ್ಟಿ ಇರಬಹುದು, ಅಥವಾ ಹೋಗಬಹುದು, ದೇಶದ ಮಕ್ಕಳಿಗೆ ಮುಂದೆ ಈಗಿನ ಆಡಳಿತದಿಂದ ಎಷ್ಟರ ಮಟ್ಟಿಗೆ ಅನ್ಯಾಯವಾಗುತ್ತದೆ ಎನ್ನುವುದನ್ನು ತಿಳಿದುಕೊಂಡು ಕೆಚ್ಚೆದೆಯಿಂದ ಶ್ರೀಮತಿ ನಾಗರತ್ನಮ್ಮನವರು ಮಾತನಾಡಿದ್ದಾರೆ. ನಾನು ಅದನ್ನು ಬಹಳವಾಗಿ ಮೆಚ್ಚುತ್ತೇನೆ. ಅವರು ಓಟ್ ಮಾಡಬೇಕಾದರೆ ಅವರ ಕಡೆಗೇ ಮಾಡುತ್ತಾರೆ, ಆದರೆ ಇದರಲ್ಲಿರುವ ನ್ಯೂನತೆಗಳನು ಸ್ಪಷ್ಟವಾಗಿ ಚೆನ್ನಾಗಿ ಹೇಳಿದ್ದಾರೆ. ನಾವು ಹೇಳುವುದಕ್ಕೆ ಏನೂ ಉಳಿಸಿಲ್ಲ. ಇಂಥವರೂ ಅವರಲ್ಲಿ ದ್ದಾರೆಂದು ಅವರಿಗೆ ಧನ್ಯವಾದಗಳನ್ನರ್ಪಿಸಬೇಕಾಗಿದೆ. ತಪ್ಪು ಕಂಡಾಗ ಅದನ್ನು ಧೈರ್ಯವಾಗಿ, ನಿರ್ಭಯವಾಗಿ, ನಿರ್ದಾಕ್ಷಿಣ್ಯವಾಗಿ ಹೇಳುವ ಶಕ್ತಿ ಅದರಲ್ಲಿಯೂ ಮಹಿಳೆಯರಿಗೆ ಬಂದುದು ಬಹಳ ಸಂತೋಷ. ವಿದ್ಯಾರ್ಥಿವೇತನಗಳನ್ನು ಹಂಚುವ ಸಮಿತಿಗಳನ್ನು ಮಾಡಿದ್ದಾರೆ. ಅದಕ್ಕೆ ಸದಸ್ಯರಾಗಿ ತಾಲ್ಲೂಕು ಬೋರ್ಡ್ ಪ್ರೆಸಿಡೆಂಟರನ್ನು ನೇಮಕ ಮಾಡಿದ್ದಾರೆಯೆ, ಅಲ್ಲಿನ ಎಂ. ಎಲ್. ಎ. ಗಳನ್ನು ಮಾಡಿದ್ದಾರೆಯೇ ? ಯಾವುದಾದರೂ ಒಂದು ನೀತಿಯನ್ನನುಸರಿಸಿ, ಅದರ ಮೇಲೆ ಮಾಡಲಿ, ಸಂತೋಷ. ಆದರೆ ಯಾವ ನೀತಿಯೂ ಇಲ್ಲದಿದ್ದರೆ ಏನು ಮಾಡುವುದು ? ಎಲ್ಲೆಲ್ಲಿ ಕಾಂಗ್ರೆಸ್ ನವರು ತಾಲ್ಲೂಕು ಬೋರ್ಡ್ ಪ್ರೆಸಿಡೆಂಟರಾಗಿದ್ದಾರೋ ಅಲ್ಲಿ ಅವರನ್ನೆ ಸಮಿತಿಗೆ ಹಾಕುವುದು, ಬೇರೆ ಕಡೆ ನಾನ್‌ಕಾಂಗ್ರೆಸ್‌ನವರು ಪ್ರೆಸಿಡೆಂಟ್ ಆಗಿದ್ದ ಕಡೆ ಬೇರೆ ಕಾಂಗ್ರೆಸಿಗರನ್ನು ಹಾಕುವುದು. ಎಲ್ಲಿ ಜನರಲ್ಲಿ ನಿಷ್ಠೂರ ಬರುವ ಅವಕಾಶವಿರುತ್ತದೆಯೋ ಅಲ್ಲಿ ನನ್ನಂಥವರನ್ನು ಹಾಕುತ್ತಾರೆ. ಏಕೆಂದರೆ 600 ಜನ ಅರ್ಜಿ ಹಾಕಿಕೊಂಡರೆ, ವೇತನ ಕೊಡುವುದು 6 ಜನರಿಗೆ, ಮಿಕ್ಕವರಿಗೆ ಸಿಕ್ಕು ವುದಿಲ್ಲ, ಅವರೆಲ್ಲರಿಂದ ನಿಷ್ಠೂರ ಕಟ್ಟಿಕೊಳ್ಳಬೇಕಾಗುತ್ತದೆ. ಬಾಕಿ ವಿಷಯಗಳನ್ನು ವಿವರವಾಗಿ ಅನೇಕರು ಮಾತನಾಡಿದ್ದಾರೆ. ಒಟ್ಟಿನಲ್ಲಿ ಇವರ ಮೇಲೆ ಜನತೆಗೆ ವಿಶ್ವಾಸವಿಲ್ಲ, ಇವರು ವಿದ್ಯಾ ಮಂತ್ರಿಗಳಾಗಿ ಮುಂದುವರಿಯುವುದು ದೇಶದ ಗೌರವಕ್ಕೆ ಒಳ್ಳೆಯದಲ್ಲ. ಇವರ ವ್ಯವಹಾರ ದೇಶದ ಘನತೆಗೆ ತಕ್ಕದ್ದಲ್ಲವೇ ಅಲ್ಲ. ಆದರೂ ಈ ಸಭೆಯಲ್ಲಿ ಕೆಲವರು ಹೇಳಿದ್ದಾರೆ. ಇವರು ಬಹಳ ತ್ಯಾಗ ಮಾಡಿದ್ದಾರೆಂದು. ತ್ಯಾಗವನ್ನೇನೂ ಮಾಡಿಲ್ಲ. ಇವರಲ್ಲಿ ಗೌರವ ಮತ್ತು ನಂಬಿಕೆಯನ್ನಿಟ್ಟು ಇವರನ್ನು ಮಂತ್ರಿಗಳಾಗಿ ತೆಗೆದುಕೊಂಡು, ದೊಡ್ಡ ಸ್ಥಾನ, ಮೊದಲ ಸ್ಥಾನ ಕೊಟ್ಟು 22 ಕೋಟಿ ರೂಪಾಯಿ ಖರ್ಚು ಮಾಡುವ ವಿದ್ಯಾ ಖಾತೆಯನ್ನು ಇವರಿಗೆ ವಹಿಸಿದರು. ಈಗ ಇವರ ವಿಷಯ ಇವರ ಪಕ್ಷಕ್ಕೂ ಮತ್ತು ಬೇರೆ ಮಂತ್ರಿಗಳಿಗೂ ಗೊತ್ತಾಗಿದೆ. ಕೊಡಲಿ ತೆಗೆದುಕೊಂಡು ತಲೆ ತುರಿಸಿಕೊಂಡಂತಾಯಿತು ಇವರಿಗೆ ಕೊಟ್ಟದ್ದು ಎಂದು ಗೊತ್ತಾಗಿದೆ. ಆದಕಾರಣ ಇವರೇ ಮುಂದೆ ಬಂದು, ದೇಶದ ಹಿತದೃಷ್ಟಿಯಿಂದ, ಪಕ್ಷದ ಹಿತದೃಷ್ಟಿಯಿಂದ, ಇವರಿಗೆ ಈ ಜವಾಬ್ದಾರಿಯನ್ನು ವಹಿಸಿದ ನಾಯಕರ ಹಿತದೃಷ್ಟಿಯಿಂದ, ತಾವೇ ಧೈರ್ಯ ಮಾಡಿ ಆದಷ್ಟು ಜಾಗ್ರತೆ ರಾಜೀನಾಮೆ ಪತ್ರಕೊಟ್ಟು, ಅದು ಒಂದು ವೇಳೆ ಅಂಗೀಕಾರವಾಗುವುದು ತಡವಾದರೆ ಜಾಗ್ರತೆ ಅಂಗೀಕಾರ ಮಾಡ ಬೇಕೆಂದು ಒತ್ತಾಯ ಮಾಡಿ ಅಂಗೀಕಾರವಾದ ಮೇಲೆ ಮನೆಗೆ ಹೋಗಲಿ; ಇಲ್ಲದಿದ್ದರೆ ಪೋರ್ಟ್ ಪೋಲಿಯೋ ಇಲ್ಲದ ಮಂತ್ರಿಯಾಗುವುದು ಕ್ಷೇಮ ಎಂದು ಜನತೆಯ ಪರವಾಗಿ ಕೇಳಿಕೊಳ್ಳು ತ್ತೇನೆ.

†Sri ANNA RAO GANAMUKHI (Afzalpur).—Mr. Speaker, Sir, while supporting the Education Demand, I should like to offer a few comments on the education policies pertaining in this State. As far as primary

education is concerned, I should like to say that the Budget speech says :

> "that there is more than 80 per cent or in the first year more than 90 per cent of enrolment"

but the speech does not contain anything about the attendance of the school children. I think the Government would have justified the enrolment by showing the figures about the attendance. Mere enrolment in the register would not reflect the true strength of the primary students. I have visited some of the primary schools in my constituency, where I could see that only 30 to 40 per cent of the students were present in the schools. Therefore, it is highly necessary that this Compulsory Education Act should be implemented in the spirit in which it was conceived so that all the students may receive proper education at primary stage. Another thing which I should like to say is that before all these students who have enrolled, reach the fourth class about 50 per cent of them discontinue the school. So, it is very necessary that they must be compelled to attend the fifth class so that they reach the seventh class. Otherwise there will be wastage and so much of money which has been spent on education will go down the drain. There is stagnation in some cases. In the schools, I think, where 5,000 teachers were required for recruitment during the current year, only 1,000 teachers were appointed in the first instance and after a long lapse of time, I think two or three months before, again they have appointed at the fag end of the year, some five thousand teachers. Does it not contribute to stagnation ? When there are less teachers and more students in the school, they can only sit and nothing more is done. If you want to implement the compulsory primary education in the true spirit, then the teachers should be appointed in time so that they may teach the students effectively.

In the middle schools, there is no science equipment or the laboratory equipment. So, those students fail in the Middle school examination and while they join the High school, I think, about 50 to 60 per cent of them discontinue the school, because of failures as also other circumstances. Here, I want to suggest one thing, just as what they have done in Madras. In Madras, they have created the system of God-fathers scheme. In this scheme, the Head Master of a High School is appointed as a God-father of 4 or 5 Middle schools. He visits the schools and guides the teachers properly. He also takes the students to the High School and gives model lessons in science and other subjects. If this is done, I think, much more will have been done towards improving of standards in education. Now, what we are doing is this. There is quantitative expansion, but no qualitative improvement in our State. Therefore, it is very necessary that we should divert our attention towards qualitative improvement also, because in every field, quantity is threatening quality, and it is more so in the Education Department.

(SRI ANNARAO GANAMUKHI)

Another thing to which I would like to draw the attention of the Hon'ble Minister. At the secondary level, high schools are started even within a radius of 2–3 miles. This I think is not desirable. Whereas we had designed to start 200 high schools during the third plan period, already 426 high schools have been started. I have no objection if high schools are started where there is necessity. And if there is competition between villages to start more high schools, then this policy of starting high schools in every village is not, I think, a proper course. I can quote instances where, within the radius of 2-3 miles, high schools have been started and cut-throat competition is going on. At least there should be 4-5 feeder middle schools for each high school. If that is not considered, then these high schools which are started, cannot make tangible headway. I had occasion once to ask the departmental people, how they are recommending the starting of so many high schools and they said that the DPI has never recommended to start so many high schools. On the other hand, simply out of politics, they have started all the high schools without the recommendation of the DPI. I think this course is not a desirable course. On the other hand, we should call for the recommendations of the DPI and then if it is necessarys then we must start these schools. Even I know the DPI give, permission. But in some cases, even the Education Minister gives permission. But unless he takes the opinion of the DPI or the Depart. mental people, I think he will not be justified in issuing orders directly- I have also issued some orders.

Sri S. R. KANTHI.—For the information of the Hon'ble Member, I should say that no such thing has happened. In every case, we have called for the report of the DPI and the Departmental officers. But as the Hon'ble Member said, there may be one or two instances where high schools have come closer together. But by and large, it has not happened.

Sri ANNA RAO GANAMUKHI.—Sir, I am telling the impression I have got. Your ex-DPI has told me about it. He said without recommendations from the DPI, Government have sanctioned high schools. I only say that the Department should be consulted because it is an academic matter, where cut-throat competition takes place. I have seen in South Kanara there are so many rigid rules-unless they satisfy all those conditions, no high schools can be started in South Kanara. But here, in our area, so far as I know, many high schools have been started, simply because they have come here and asked. Merely for asking, they have got it.

I am not saying anything against the Education Minister. If I am saying anything, it is only about the policy.

Sri S. R. KANTHI—May I also tell the Hon'ble Member that in Hyderabad Karnatak, we have given very few high schools. They do not exceed six during the last two years.

Sri ANNA RAO GANAMUKHI.—I leave the matter there only.

At the higher education level, I should like to say a few words. Education according to the Constitution, is not a concurrent subject. It is a State subject. Now the idea is being mooted at the Centre that education should become a concurrent subject. As it is in entry 66 of the list in the Third Schedule......

Mr. SPEAKER.—Is it not necessary that the Constitution will have to be demanded, if it is to be done? It will come up before the members, He can deal with the other points now, because he has to close his speech at 4-30 p.m.

Sri ANNA RAO GANAMUKHI.—This is an important point, I want to deal with it. Whenever the time is over, I will close, Sir.

Sir, it is being said that education will be taken as a concurren subject. Under entry 66 in the list to the Third Schedule to the Constitution, the Government of India has got power about co-ordination and determination of the standard of education. It is said that the Education Minister at the Centre has already announced that they are already thinking of education becoming a concurrent subject and they have addressed the State Governments also on this subject. Not only that, an All-India Education Service also is being constituted. These are the two points which the Centre wants to do. Here Sir, I should like to say that even previously, the Central Government had the idea and it addressed the State Governments to agree to this proposal of making education service an All-India Service. The State Governments did not agree. If our State agrees to that proposal, it means that a person from Punjab or Bengal or Kerala will be the DPI and if further the proposal is to include all Class I posts into that, then all your educational inspectors and DEOs will become part of the Central services. Would this position be tolerable, I want to ask. I do not know what the Education Minister has said on this point. But as far as constituting the All-India Education Service, the Central Government says that nearly all the States have agreed. I do not know whether our Minister would state clearly whether our State Government has also agreed to this proposal. As far as I am concerned, it is not correct. We should never agree to this proposal. Also, when the Centre has got power to co-ordinate and determine standards of higher education, then where is the necessity of including education as a concurrent subject? I think this should not be done. Even now the All-India Council of Technical Education is there, as far as Technical Education is concerned and also the All India Education Advisory Board is there. All the State Government Ministers and also Heads of Departments are members of these bodies. Therefore, I think Sir, it is not correct for our State Government to agree to include education as a concurrent subject.

4-30 P.M.

As far as technical education is concerned, I saw with regret one thing, the Central Minister announcing that in the Southern region they

(SRI ANNARAO GANAMUKHI)

had started 3 or 4 Engineering Colleges without referring the matter to the All India Council for Technical Education where these decisions are taken. I have not seen any case where without their consent any College has been started; but here 3 or 4 Colleges have been started without consulting the All India Council for Technical Education. That is why the Central Minister has referred to this matter. I am sorry to say that this has happened and I want that it should not happen again. If such contraventions take place, if the University and Government both encourage such things in the country, then the Centre will be justified to take over Education also and include it as a concurrent subject. Now we want to decentralise this; not only that; we want to entrust the whole management of primary education and high school education to Zilla Parishad and Taluk Board. If the Centre comes forward and asks the State Governments to hand over Education, to be treated as a concurrent subject, I think the State Government will have no work except prescribing the curriculum and then inspection; nothing more than that. I think the State Government should not reduce itself to such a position.

As far as the nationalisation of text-books is concerned, I think the Education Minister should exercise some restraint; he should not go the whole hog. In our country we have mixed economy; everywhere there is mixedness. Where large-scale books have to be distributed at low price, Government should nationalise only those books; at higher elementary level and high school level there should be free competitions so that intelligent people must write books and offer them for selection. Otherwise, what happens is, Government appoints some persons for serving on the Editorial Board and their books only will be nationalised and distributed all over the country. This will lead to regimentation also. I think in Kerala when the communist ministry was in office, there was some agitation about this. Wherever mass production is necessary, for instance, 1st, 2nd and 3rd classes, such books only should be nationalised, but not at higher level because talented people write books and if those books are submitted, we can select the best books among them for our children.

As far as the printing of text-books is concerned, we have not got printing press exclusively for this purpose. I think Andhra has got it; I do not know whether Madras has got it. If the Centre is going to have a Central Printing press, I do not think it will be managed by our State, although I have got great admiration for the Government Press which is functioning very efficiently and the Director also is taking a lot of interest. At the same time if we want to have our own arrangement, then one printing press either at Gulbarga or Mysore should be alloted only this work; otherwise, pupils will not be able to get books in the market in time. This should be kept in mind before we go the whole hog in the nationalisation of text books.

ಶ್ರೀ ಎಚ್. ಡಿ. ದೇವೇ ಗೌಡ (ಹೊಳೇನರಸಿಪುರ).—ಸ್ವಾಮಿ, ಈ ದಿವಸ ನಮ್ಮ ಮುಂದಿರತಕ್ಕಂಥ ವಿದ್ಯಾಭ್ಯಾಸ ಇಲಾಖೆಯ ಬೇಡಿಕೆಗಳ ಬಗ್ಗೆ ಮಾತನಾಡುತ್ತಾ ನಾನು ಈ ಸರಕಾರದ ಧೋರಣೆಗಳನ್ನು ಆ ಬಗ್ಗೆ ಬಹಳ ಕಟುವಾಗಿ ಮತ್ತು ಬಹಳ ದುಃಖದಿಂದ ಟೀಕೆ ಮಾಡಬೇಕಾದ ಪರಿಸ್ಥಿತಿ ಬಂದಿದೆ. ಈ ದಿವಸ ವಿದ್ಯಾಭ್ಯಾಸ ಇಲಾಖೆಯನ್ನು ಹೊಂದಿರತಕ್ಕಂಥ ಸಚಿವರ ಬಗ್ಗೆ ಈ ಸಭೆಯಲ್ಲಿ ಬಹಳ ಆರೋಪಣೆಗಳು ಬಂದಿರತಕ್ಕಂಥಾದ್ದು ನಮಗೆಲ್ಲರಿಗೂ ತಿಳಿದಿರತಕ್ಕಂಥ ವಿಷಯ. ಈ ಸಂದರ್ಭದಲ್ಲಿ ಈ ಇಲಾಖೆಯಲ್ಲಿ ಉಂಟಾಗಿರತಕ್ಕಂಥ ಜಿಜ್ಞಾಸೆ ನೋಡಿದರೆ ಮತ್ತು ಮೊನ್ನೆ ಶ್ರೀ ಅನ್ನದಾನಪ್ಪ ದೊಡ್ಡಮೇಟಿಯವರ ಪ್ರಶ್ನೆಗೆ ಬಂದ ಉತ್ತರದ ಧೋರಣೆಯನ್ನು ನೋಡಿದರೆ ನಾವು ಬಹಳ ವಿಷಾದ ವ್ಯಕ್ತಪಡಿಸಬೇಕಾಗುತ್ತದೆ. ನಿನ್ನೆ ಪಿ.ಡಬ್ಲ್ಯು.ಡಿ. ಶಾಖೆಯ ಸಚಿವರಾದ ಶ್ರೀ ವೀರೇಂದ್ರ ಪಾಟೀಲರು ಅಂಕಿ ಅಂಶಗಳನ್ನು ಈ ಸಭೆಯಲ್ಲಿ ಕೊಟ್ಟು ತಮ್ಮ ವಾದವನ್ನು ಹೇಗೆ ಸಮರ್ಥನೆ ಮಾಡಿದರೊ, ಅದೇ ರೀತಿ ನಮ್ಮ ವಿದ್ಯಾಭ್ಯಾಸ ಇಲಾಖೆ ಸಚಿವರೂ ಕೂಡ ತಮ್ಮ ಒಂದು ವಾದವನ್ನು ಅಂಕಿಅಂಶಗಳಿಂದ ಸಮರ್ಥಿಸುತ್ತಾರೆಂದು ನಾನು ಭಾವಿಸುತ್ತೇನೆ. ಏಕೆಂದರೆ ವಿದ್ಯಾಭ್ಯಾಸ ಇಲಾಖೆಯಲ್ಲಿ ಬಹಳ ರೀತಿಯಲ್ಲಿ ಅನ್ಯಾಯ ನಡೆಯುತ್ತಾ ಇದೆ; ಹಳೆಯ ಮೈಸೂರಿಗೆ ಅನ್ಯಾಯವಾಗಿದೆ. ಇದನ್ನು ಅಂಕಿಅಂಶಗಳಿಂದ ನಾನು ಸಮರ್ಥನೆ ಮಾಡಿಕೊಂಡು ಹೋಗುವುದಕ್ಕೆ ನನಗ ಕಾಲವಿಲ್ಲ. ಈ ದಿವಸ ಈ ಇಲಾಖೆಯಲ್ಲಿ ನಡೆದಿರತಕ್ಕಂಥ ಧೋರಣೆಗಳ ಬಗ್ಗೆ ಕಟುವಾಗಿ ಟೀಕೆ ಮಾಡತಕ್ಕಂಥ ಪ್ರಸಂಗ ಬಂದಿದೆ.

ಫೀ ಕನ್‌ಸೆಶನ್ ಬಗ್ಗೆ ತಾವು ದೇಶದಲ್ಲಿ ಒಂದು ಮಹತ್ತರವಾದ ಸಮಸ್ಯೆಯನ್ನು ಎಬ್ಬಿಸಿದ್ದರಿಂದ ವಿದ್ಯಾರ್ಥಿಗಳ ಸ್ಟ್ರೈಕ್ ನಡೆಯಿತು. ಸರಕಾರದ ತಮ್ಮ ನಿಲುವನ್ನು ವಿವರಿಸುವಾಗ ಯೂನಿವರ್ಸಿಟಿಯವರು ಜವಾಬ್ದಾರರು, ನಾವು ಜವಾಬ್ದಾರರಲ್ಲ ಎಂಬ ಒಂದು ಮಾತನ್ನು ಹೇಳಿದರು. ಆದರೆ ಯೂನಿವರ್ಸಿಟಿಯನ್ನು ಕನ್‌ಸಲ್ಟ್ ಮಾಡದೇನೆ ತೀರ್ಮಾನವನ್ನು ಕೊಟ್ಟಿದ್ದಾರೆ. ಬೊಂಬಾಯಿ ಕರ್ಣಾಟಕ ಯೂನಿವರ್ಸಿಟಿಗೆ ಫೀ ರೆಡ್ಯೂಸ್ ಮಾಡಿದರೆ ನಮ್ಮ ಅಡ್ಡಿ ಇಲ್ಲ. ಆದರೆ ಈ ಅವಕಾಶವನ್ನು ಉಪಯೋಗಿಸಿಕೊಂಡು ಬೊಂಬಾಯಿ ಕರ್ಣಾಟಕ ಯೂನಿವರ್ಸಿಟಿಯಲ್ಲಿಯೂ ಫೀ ರೆಡ್ಯೂಸ್ ಮಾಡತಕ್ಕಂಥ ಒಂದು ಸಣ್ಣ ಮನೋಭಾವಕ್ಕೆ ಹೋದರು. ನಿಜವಾಗಿ ಹಳೇ ಮೈಸೂರಿನ ವಿದ್ಯಾರ್ಥಿಗಳಿಗೆ, ಜನತೆಗೆ ಏನು ಸೌಲಭ್ಯವಿತ್ತು; ಅದನ್ನು ಮೊಟಕು ಮಾಡತಕ್ಕಂಥ ಒಂದು ಸಮಸ್ಯೆಯನ್ನು ತಂದಿರಿ. ನಿನ್ನೆ ಶ್ರೀ ವೀರೇಂದ್ರ ಪಾಟೀಲರು ಉತ್ತರ ಕೊಡುತ್ತಾ, ಹುಬ್ಬಳ್ಳಿ ಮೆಡಿಕಲ್ ಕಾಲೇಜು ಕನ್‌ಸ್ಟ್ರಕ್ಷನ್ನನ್ನು ಬೊಂಬಾಯಿ ಸರಕಾರ ಮಾಡಿದ್ದನ್ನು ಈ ಸರಕಾರ ಮುಂದುವರಿಸಿಕೊಂಡು ಹೋಗುತ್ತಿದೆ ಎಂದು ಹೇಳಿದರು. ಆದರೆ ಹಳೇ ಮೈಸೂರಿಗೆ ಇದ್ದ ಸೌಲಭ್ಯವನ್ನು ಮೊಟಕು ಮಾಡಿದಿರಿ; ಹಳೇ ಮೈಸೂರಿನ ಜನತೆಗೆ ಇದ್ದ ಸೌಲಭ್ಯ ಹೋಗುತ್ತಿದೆ ಇವರ ಕಾಲದಲ್ಲಿ. ಇದು ಬಹಳ ಅನ್ಯಾಯ. ಈ ತಮ್ಮ ಧೋರಣೆಯನ್ನು ಖಂಡಿಸಬೇಕಾಗುತ್ತದೆ. ಈ ಸಭೆಯಲ್ಲಿ ಉತ್ತರ ಕೊಡುತ್ತಾ, ಯೂನಿಫಾರಂ ಪಾಲಿಸಿ ತರಬೇಕು ಅಂತ ಪ್ರಯತ್ನ ಮಾಡುತ್ತಾ ಇದ್ದೇವೆ, ಅಂತ ಅವರು ಹೇಳಿದರು. ಅದನ್ನು ನಾನು ಸ್ವಾಗತಿಸಿದರೂ, ಕೇವಲ ಫೀಯನ್ನು ಯೂನಿಫಾರಂ ಮಾಡುತ್ತೇವೆ ಅಂತ ಹೇಳುವುದಾದರೆ, ಇದು ಅನ್ಯಾಯ. ನೀವು ಎಲ್ಲ ರೂಪದಲ್ಲಿಯೂ ಏಕರೂಪತೆ ಹಳೆ ಮೈಸೂರಿನಲ್ಲಿ ಮಾಡಿ. ಹಳೆಯ ಮೈಸೂರಿನಲ್ಲಿ ಅಧಿಕಾರಿಗಳಿಗೆ ಬರತಕ್ಕಂಥ ಸಂಬಳ, ಬೊಂಬಾಯಿ ಕರ್ಣಾಟಕ ಏರಿಯದಿಂದ ಬಂದಿರತಕ್ಕಂಥ ಅಧಿಕಾರಿಗಳಿಗಿರುವ ಸಂಬಳದಲ್ಲಿ ತಾರತಮ್ಯವನ್ನು ಹೋಗಲಾಡಿಸಲು ಸರಕಾರ ಏನಾದರೂ ಪ್ರಯತ್ನ ಮಾಡಿದೆಯೆ ಎಂದು ಸ್ಪಷ್ಟವಾಗಿ ಹೇಳಬೇಕು. ತಾವು ಹೇಳುವುದನ್ನು ಸಮರ್ಥನೆ ಮಾಡಬೇಕು. ಕನ್‌ಸೆಶನ್ ಹೆಚ್ಚಿಗೆ ಪ್ರದೇಶಕ್ಕೆ ಆಗಬಾರದು ಎಂದು ಹೇಳುತ್ತಿಲ್ಲ. ಆದರೆ ತಾವು ಮಾಡತಕ್ಕಂಥ ಯೋಜನೆಗಳು ಏನಿವೆ, ಅವುಗಳಿಂದ ಜನತೆಗೆ ಬಹಳ ಬೇಸರವಾಗಿ, ದೇಶವನ್ನು ಇಬ್ಭಾಗ ಮಾಡತಕ್ಕಂಥ ವಾದ ಪ್ರಾರಂಭವಾಗಿರುವುದಕ್ಕೆ ಕಾರಣ ತಾವೇ ಎಂದು ಸ್ಪಷ್ಟವಾಗಿ ಹೇಳಬಹುದು. ಸರಕಾರ ಯೂನಿವರ್ಸಿಟಿಯನ್ನು ಕನ್‌ಸಲ್ಟ್ ಮಾಡದೇನೆ ಜನರಿಗೆ ಕೊಟ್ಟಿದ್ದಾರೆ. ಇವತ್ತು ಹುಡುಗರು ಫೀಸು ಕೊಟ್ಟಿಲ್ಲ. ಮುಂದಿನ ತಿಂಗಳು ಎಕ್ಸಾಮಿನೇಶನ್ ಮಾಡುವುದಾದರೆ, 1960-61ನೇ ಸಾಲಿಗೆ ಕನ್‌ಸೆಶನ್ ಕೊಟ್ಟು ಫೀ ರೆಡ್ಯೂಸ್ ಮಾಡಿದರೆ, ತಮ್ಮ ಆರ್ಡರನ್ನು ಜಾರಿಗೆ ಕೊಟ್ಟಿದ್ದೀರ ಎಂದು ಕೇಳಬಯಸುತ್ತೇನೆ. ಸರಕಾರದ ಆರ್ಡರನ್ನು ಜಾರಿಗೆ ಕೊಡದೆ, ಅಧಿಕಾರಿಗಳ ಸಂಬಳಸಾರಿಗೆಗಳಲ್ಲಿ ಏಕರೂಪತೆಯನ್ನು ಕಾರ್ಯಗತ ಮಾಡದೆ ಹೋದರೆ ಇದು ವಂಚನೆ ಅಲ್ಲದೆ ಇನ್ನು ಯಾವುದೂ ಅಲ್ಲ. ಸರಕಾರ ಯುನಿಫಾರ್ಮಿಟಿಯನ್ನು ಎಲ್ಲ ಕಡೆಯೂ ತಂದು, ಡಿಸ್‌ಪ್ಯಾರಿಟಿ ಇಲ್ಲದಂತೆ ಮಾಡಲು ಬೇಗ ಕ್ರಮ ಕೈಗೊಳ್ಳತಕ್ಕಂಥಾದ್ದು ಬಹಳ ಸೂಕ್ತ.

ಶ್ರೀ ಗ್ರಾಂಜಿ ವೀರಪ್ಪನವರು ಹೇಳಿದರು, ಸರಕಾರ ಬೆಂಗಳೂರು ಯೂನಿವರ್ಸಿಟಿ ಪ್ರಾರಂಭ ಮಾಡುವ ಬಗ್ಗೆ ಒಂದು ಯೋಜನೆಯನ್ನು ಇಟ್ಟು ಕೊಂಡಿದ್ದಾರೆ ಎಂದು. ನಿಜವಾಗಿ ಬೆಂಗಳೂರು ಯೂನಿವರ್ಸಿಟಿ ಪ್ರಾರಂಭಮಾಡಬೇಕಾದರೆ, ಈ ಸಭೆಯಲ್ಲಿ ವಿಧೇಯಕವಾಗಿಲ್ಲ. ಇವತ್ತು ಮೈಸೂರು

(ಶ್ರೀ ಎಚ್ ಡಿ. ದೇವೇ ಗೌಡ)

ಯೂನಿವರ್ಸಿಟಿಗೆ ಸೇರಿರತಕ್ಕಂಥ 60 ಕಾಲೇಜುಗಳು ಏನಿವೆ, ಅವುಗಳನ್ನು ಬೈಫರ್ಕೇಟ್ ಮಾಡಿ, ಅವುಗಳಲ್ಲಿ ಸುಮಾರು 23 ಕಾಲೇಜುಗಳನ್ನು ಸೇರಿಸಿ ಒಂದು ಪ್ರತ್ಯೇಕ ಯೂನಿವರ್ಸಿಟಿ ತೆರೆಯಬೇಕು ಅನ್ನತಕ್ಕಂಥ ಪ್ರಯತ್ನ ಶ್ಲಾಘನೀಯವಾದರೂ ಕೂಡ, ಈ ಯೂನಿವರ್ಸಿಟಿಯನ್ನು ಮಾಡತಕ್ಕಂಥ ಕಾಲದಲ್ಲಿ ಇರುವ ತೊಂದರೆಗಳೇನು, ವಿಧೇಯಕವೆಲ್ಲಿ? ಯೂನಿವರ್ಸಿಟಿಯ ಕಮಿಟಿಗಳೆಷ್ಟು, ಅವುಗಳಲ್ಲಿ ಎಷ್ಟು ಸದಸ್ಯರಿರುತ್ತಾರೆ, ಮುಂತಾದುದನ್ನೆಲ್ಲಾ ಯೋಚನೆ ಮಾಡದೇನೆ, ಹರಿ ಬಾಯಲ್ಲಿ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದಾರೆ. ಇದನ್ನೆಲ್ಲಾ ಯೋಚನೆಮಾಡುವುದು ಸೂಕ್ತ ಅಂತ ಹೇಳುತ್ತೇನೆ. ವಿಧೇಯಕವಿಲ್ಲದೆ ಮಾಡಿದರೆ, ಗಾದೆಯಂತೆ ಏನೋ ಮಾಡುವುದಕ್ಕೆ ಹೋದ ಹಾಗೆ ಆಗುತ್ತದೆ.

ಹನ್ನೊಂದನೆಯ ಸ್ಟ್ಯಾಂಡರ್ಡ್ ಬಗ್ಗೆ ದೇಶದಲ್ಲಿ ದೊಡ್ಡ ಸಮಸ್ಯೆಯಾಗಿದೆ. ಆ ವಿಷಯದಲ್ಲಿ ಯೂನಿವರ್ಸಿಟಿ ಸಿಂಡಿಕೇಟ್‌ನಲ್ಲಿ ಭಿನ್ನಾಭಿಪ್ರಾಯ ಬರುತ್ತಾ ಇದೆ, ಮತ್ತು ಅದರಲ್ಲಿ ಲೀಗಲ್ ಇಂಪ್ಲಿಕೇಷನ್ ಇದೆ ಎಂದು ತಿಳಿದು ಬಂದಿದೆ. ಯೂನಿವರ್ಸಿಟಿಯವರ ಅಭಿಪ್ರಾಯಕ್ಕೆ ವಿರುದ್ಧವಾಗಿ ಇವತ್ತು ಹನ್ನೊಂದನೇ ಸ್ಟ್ಯಾಂಡರ್ಡ್‌ನ್ನು ತೆಗೆಯುತ್ತೇವೆ ಎಂದು ಮಾನ್ಯ ಮಂತ್ರಿಗಳು ಹೇಳುತ್ತಿರುವುದು ಅವರ ಘೋಷಣೆ ಅಥವಾ ಅವರ ಧೋರಣೆ ಏನಿದೆ ಅದು ನಮಗೆ ಅರ್ಥವಾಗುತ್ತಿಲ್ಲ.

ಶ್ರೀ ಎಸ್. ಆರ್. ಕಂಠಿ.—ಯೂನಿವರ್ಸಿಟಿಯವರು ಒಪ್ಪಿದ್ದಾರೆ, ಸ್ವಾಮಿ.

ಶ್ರೀ ಎಚ್. ಡಿ. ದೇವೇಗೌಡ.—ಅವರು ಏನು ಹೇಳಿದ್ದಾರೋ ಅದಕ್ಕೆ ತಾವು ಹೇಳುತ್ತಾ ಇರುವುದು ವಿರೋಧವಾಗಿದೆ, ಅವರ ರಿಪೋರ್ಟನ್ನು ನಾನು ನೋಡಿದ್ದೇನೆ. ಅದನ್ನು ತಾವು ಹೇಗೆ ಸರಿ ಎಂಬುದನ್ನು ಸಾಬೀತು ಮಾಡಿ.

ವೈಸ್-ಚಾನ್ಸಲರ್ಸ್ ಕಾನ್‌ಫರೆನ್ಸ್‌ನಲ್ಲಿ ಪ್ರೀ-ಯೂನಿವರ್ಸಿಟಿ ಎರಡು ವರ್ಷ ಮಾಡಬೇಕೆಂಬ ಒಂದು ಪ್ರಪೋಸಲ್ ಇರುವುದಾಗಿ ನಮಗೆ ತಿಳಿದು ಬಂದಿದೆ. ಹೈಸ್ಕೂಲಿನಲ್ಲಿ ಹನ್ನೊಂದನೇ ಸ್ಟ್ಯಾಂಡರ್ಡ್‌ನ್ನು ಇಂಟ್ರೊಡ್ಯೂಸ್ ಮಾಡಿದರೆ, ಎಸ್.ಎಸ್.ಎಲ್.ಸಿ. ಪಬ್ಲಿಕ್ ಪರೀಕ್ಷೆಗೆ ಕುಳಿತುಕೊಳ್ಳಬೇಕು, ಹನ್ನೊಂದನೇ ಸ್ಟ್ಯಾಂಡರ್ಡ್‌ನಲ್ಲಿ ಪಬ್ಲಿಕ್ ಪರೀಕ್ಷೆಗೆ ಕುಳಿತುಕೊಳ್ಳಬೇಕು ಆ ನಂತರ ಪಿ.ಯು.ಸಿ. ಗೆ ಅಪಿಯರ್ ಆಗಬೇಕು ಎಂದರೆ ವಿದ್ಯಾಭ್ಯಾಸದ ಮಟ್ಟ ಎಲ್ಲಿಗೆ ಹೋಗುತ್ತದೆ ಎಂಬುದನ್ನು ನಾವು ನೋಡಿದ್ದೇ ಆದರೆ, ಹುಡುಗರಿಗೂ ಮತ್ತು ತಂದೆತಾಯಿಗಳಿಗೂ ಅವರ ಮಕ್ಕಳಿಗೆ ವಿದ್ಯಾಭ್ಯಾಸವನ್ನು ಕೊಡಿಸುವುದಕ್ಕೆ ಕಷ್ಟವಾಗಿ ಒಂದು ರೀತಿಯಲ್ಲಿ ಅವರ ವಿದ್ಯಾಭ್ಯಾಸಕ್ಕೆ ಅಡ್ಡಿ ತರುತ್ತಾ ಇದ್ದೀರಿ. ಇದಕ್ಕೆ ಒಂದು ಉದಾಹರಣೆಯನ್ನು ಹೇಳುವುದಾದರೆ, ನೂರು ಜನ ಹುಡುಗರು ಎಸ್. ಎಸ್. ಎಲ್. ಸಿ. ಪರೀಕ್ಷೆಗೆ ಅಪಿಯರ್ ಆದರೆ ಪಾಸ್ ಆಗುವವರು 25 ಜನ, ಮತ್ತೆ ಪುನಃ ಆ 25 ಜನರಲ್ಲಿ ಹನ್ನೊಂದನೇ ಸ್ಟ್ಯಾಂಡರ್ಡ್‌ನಲ್ಲಿ ಪಾಸ್ ಆಗುವವರು ಮತ್ತು ಪಿ. ಯು. ಸಿ. ಯಲ್ಲಿ ಪಾಸ್ ಆಗುವವರು 6 ಜನ ಎಂದರೆ ವಿದ್ಯಾಭ್ಯಾಸದ ಹೊರೆ, ಖರ್ಚು ಹುಡುಗರ ಮೇಲೆ ಮತ್ತು ತಂದೆ ತಾಯಿಗಳ ಮೇಲೆ ಎಷ್ಟು ಬೀಳುತ್ತದೆ, ಸರಕಾರದವರಿಗೆ ಎಷ್ಟು ಬೀಳುತ್ತದೆ, ಹುಡುಗರ ಗತಿ ಏನು ಎಂಬುದನ್ನು ಬಹಳ ಕೂಲಂಕಷವಾಗಿ ನಾವು ಯೋಚನೆ ಮಾಡಬೇಕಾಗುತ್ತದೆ. ಈ ವಿಷಯದಲ್ಲಿ ಬಹಳ ಆತುರವಾದ ಒಂದು ತೀರ್ಮಾನವನ್ನು ತೆಗೆದುಕೊಳ್ಳದೇ ಇದಕ್ಕಾಗಿಯೇ ಒಂದು ಕಮಿಟಿಯನ್ನು ನೇಮಕ ಮಾಡಿ ಅವರು ಕೂಲಂಕಷವಾಗಿ ಎಲ್ಲವನ್ನೂ ಪರಿಶೀಲನೆ ಮಾಡಿದ ನಂತರ ಸೂಕ್ತವಾದ ಒಂದು ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ. ಈ ತರಹ ಒಂದು ಗೊಂದಲದ ಪರಿಸ್ಥಿತಿಯನ್ನು ಉಂಟುಮಾಡುವುದು ಸರಿಯಲ್ಲ ಎಂದು ಬಹಳ ನೊಂದುಕೊಂಡು ಹೇಳಬೇಕಾಗುತ್ತದೆ, ಏಕೆಂದರೆ ಇದರಿಂದ ಬಹಳ ದುಷ್ಪರಿಣಾಮವಾಗುತ್ತದೆ. ಲೆಕ್ಚರರುಗಳನ್ನು ಯಾರು ನೇಮಕ ಮಾಡಬೇಕು, ಲ್ಯಾಬೋರೇಟರಿ ವ್ಯವಸ್ಥೆ ಇದೆಯೇ ಕಟ್ಟಡಗಳು ಇದೆಯೇ ಎಂಬುದನ್ನು ಯಾವುದನ್ನೂ ಯೋಚನೆ ಮಾಡದೆ 30 ಹೈಸ್ಕೂಲುಗಳಲ್ಲಿ 11ನೇ ಸ್ಟ್ಯಾಂಡರ್ಡ್‌ನ್ನು ಇಂಟ್ರೊಡ್ಯೂಸ್ ಮಾಡುತ್ತೇನೆ ಎಂದು ಘೋಷಣೆ ಮಾಡಿರುವುದು ತಾತ್ವಿಕವಾಗಿ ಒಪ್ಪತಕ್ಕದಲ್ಲ ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಇನ್ನು ಯೂನಿವರ್ಸಿಟಿ ಲೆವೆಲ್‌ನಲ್ಲಿ ಮೀಡಿಯಂ ಆಫ್ ಇನ್‌ಸ್ಟ್ರಕ್ಷನ್ ರಾಜ್ಯ ಭಾಷೆಯಾದ ಕನ್ನಡ ಇರಬೇಕೆಂಬುದನ್ನು ಒಪ್ಪುವುದಾದರೂ ಕೂಡ ಇವತ್ತಿನ ದೃಷ್ಟಿಯಲ್ಲಿ ಅದನ್ನು ಯೂನಿವರ್ಸಿಟಿ ಲೆವೆಲ್‌ನಲ್ಲಿ ಇಂಟ್ರೊಡ್ಯೂಸ್ ಮಾಡಬೇಕಾಗಿದ್ದರೆ ಬಹಳವಾಗಿ ಯೋಚನೆ ಮಾಡಬೇಕಾಗಿದೆ. ಏಕೆಂದರೆ ಅದು ಗ್ರಾಜುಯಲ್ ಆಗಿ ಆಗಬೇಕೇ ಹೊರತು ತಕ್ಷಣ ಮೀಡಿಯಂ ಆಫ್ ಇನ್‌ಸ್ಟ್ರಕ್ಷನ್ ಬದಲಾವಣೆ ಮಾಡುತ್ತೇವೆ ಎಂದರೆ ಕಷ್ಟವಾಗುತ್ತದೆ. ಐ ಎ ಎಸ್ ಎಗ್ಸಾಮಿನೇಷನ್‌ಗೆ ನಮ್ಮ ಮಕ್ಕಳಿಗೆ ಟೀಚ್ ಮಾಡುವುದಕ್ಕಾಗಲೀ ಸೈನ್ಸ್ ಮತ್ತು ಟೆಕ್ನಿಕಲ್ ಎಗ್ಸಾಮಿನೇಷನ್ಸ್‌ಗೆ ಹೇಳಿಕೊಡುವುದಕ್ಕಾಗಲೀ ನಮ್ಮ ಕನ್ನಡ ಶಬ್ದಕೋಶ ಸಾಕಾದಷ್ಟು ಬೆಳೆದಿಲ್ಲ, ಆದ್ದರಿಂದ ಈ ವಿಷಯದಲ್ಲಿ ತಾವು

ಕೂಲಂಕಷವಾಗಿ ಯೋಚನೆ ಮಾಡಬೇಕೆಂದೂ ಅನಂತರ ತಮ್ಮ ಒಂದು ನಿಲುವನ್ನು ತೆಗೆದುಕೊಳ್ಳ ಬೇಕೆಂದೂ ಸೂಚನೆ ಮಾಡುತ್ತೇನೆ.

ಪ್ರೈಮರಿ ಎಜುಕೇಷನ್‌ನಲ್ಲಿ ಕಟ್ಟಡದ ಬಗ್ಗೆ 6 ಲಕ್ಷ ರೂಪಾಯಿಗಳನ್ನು ಒದಗಿಸಿದ್ದೀರಿ. 60 ಪರ್ಸೆಂಟ್, 40 ಪರ್ಸೆಂಟ್ ಬೇಸಿಸ್ ಮೇಲೆ ಹಣ ಕೊಡಬೇಕೆಂದು ನಿಗದಿಯಾಗಿ 230 ಪಾಠಶಾಲೆಗಳಿಗೆ ಜನರು ತಮ್ಮ ಕೋಟಾ ಕೊಡಬೇಕಾದ ಹಣವನ್ನು ಕೊಟ್ಟಿದ್ದರೂ ಕೂಡ ಸರ್ಕಾರದವರು ಏಕೆ ಅವರಿಗೆ ಸ್ಕೂಲ್ ಕಟ್ಟಡವನ್ನು ಕಟ್ಟಿಸಿಕೊಟ್ಟಿಲ್ಲ ಎಂದು ನಾನು ಈ ಸಂದರ್ಭದಲ್ಲಿ ಪ್ರಶ್ನೆಮಾಡು ತ್ತೇನೆ. ತಮಗೆ ಮನಸ್ಸು ಬಂದ ಕಡೆ, ಇಷ್ಟ ಬಂದ ಕಡೆ, ತಮ್ಮ ರಾಜಕೀಯದ ಒಂದು ಸಾಮರ್ಥ್ಯವನ್ನು ಪೂರೈಸಿಕೊಳ್ಳುವುದಕ್ಕೆ ಎಲ್ಲಿ ಬೇಕೋ ಅಂತಹ ಕಡೆ ಕಟ್ಟಿಸಿದ್ದೀರೇ ಹೊರತು ಪಬ್ಲಿಕ್ ಕಾಂಟ್ರಿಬ್ಯೂಷನ್ ಬಂದರೂ ಕೂಡ—ಸುಮಾರು 8–10 ವರ್ಷಗಳಾಗಿದ್ದರೂ ಸರ್ಕಾರ ದಿಂದ ಬರಬೇಕಾದ ಹಣವನ್ನು ಕೊಟ್ಟಿಲ್ಲ. ಇದಕ್ಕಾಗಿ ಸರಕಾರದವರನ್ನು ಅಂಗಲಾಚಿ ಬೇಡ ಬೇಕೇನು ? ಇದರ ಬಗ್ಗೆ ಸರಕಾರದ ನೀತಿ ಇಲ್ಲ ವೇನು ? 230 ಸ್ಕೂಲುಗಳಿಗೆ ಕಟ್ಟಡ ಕಟ್ಟುವುದಕ್ಕೆ ಕೊಟ್ಟಿರುವ ಹಣವನ್ನು ಉಪಯೋಗ ಮಾಡದೇ ಇರುವುದನ್ನು ಈವರೆಗೂ ಯಾರೂ ನೋಡಿಲ್ಲ. ಇದೇ ಈ ಇಲಾಖೆಯಲ್ಲಿರತಕ್ಕ ದೋಷ ಎಂದು ಹೇಳಬಯಸುತ್ತೇನೆ. ಇಷ್ಟು ಹೇಳಿ ಸಭಾಪತಿಗಳು ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ಅವರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

**Mr. SPEAKER.**—The Education Minister should begin his reply now. At 6–30 P. M. this demand is going to be voted and there would be no time for seeking clarification. I cannot accommodate more Members.

(*Several members rose.*)

**Sri H. D. DEVE GOWDA.**—We may extend the time.

**Mr. SPEAKER.**—After having I had discussions with the Leaders we have come to the conclussion that the debate should end at 6.30 P.M.

**Sri S. SIVAPPA.**—We agreed that the debate should close at 6–30 P.M. and we stand by it.

**Mr. SPEAKER.**—I am suggesting to the whips of parties to sit together and come to agreed conclusions.

**Sri H. D. DEVE GOWDA.**—According to the time allotted to our group, we have sent the list.

**Mr. SPEAKER.**—I have told the Hon'ble Member that his allotment is more generous than the quota.

**Sri V. S. PATIL.**—Sir, instead of taking the other Demand today, let us devote the whole time for this Demand today and let us sit tomorrow for some more time. The Minister may take 45 minutes for reply and one hour is there and we can have one hour and 20 minutes for this Demand besides 45 minutes for the Minister.

**Mr. SPEAKER.**—So, the member wants to give only 45 minutes to the Minister. He wanted one hour and thirty minutes.

**Sri V. S. PATIL.**—The congress members have taken so much time and it must be deducted from his time.

ಶ್ರೀ ಎಸ್. ಗೋಪಾಲ ಗೌಡ.—ನಾವು ಕೆಲವರು ಮಾತನಾಡಬೇಕೆಂದಿದ್ದೇವೆ. ಸಚಿವರು ರಾಜೀನಾಮೆ ಕೊಡುವರೇ ಅಥವ ಇಲ್ಲವೇ ಎಂಬುದನ್ನು ಹೇಳಬೇಕು, ಅಷ್ಟೇ; ಅದಕ್ಕೆ ಹೆಚ್ಚುಕಾಲ ಅವರಿಗೆ ಬೇಕಾಗಿಲ್ಲ. ಬಹುಶಃ ಸಭೆ ಅವರಿಂದ ನಿರೀಕ್ಷೆ ಮಾಡುವುದೂ ಅಷ್ಟೇ. ಆದುದರಿಂದ ಮಾತನಾಡಬೇಕೆಂದಿರುವ ಇತರ ಸದಸ್ಯರಿಗೆ ಸ್ವಲ್ಪ ಕಾಲ ಕೊಡುವುದು ಒಳ್ಳೆಯದು ಎಂದು ಕಾಣು ತ್ತದೆ.

**Mr. SPEAKER.**—Now, I am prepared to take that half-an-hour and postpone the consideration of the other Demand till tomorrow. I can give chance to three members within this half-an-hour. Now who are those three members ?

Sri SANJEEVANATH AIKALA.—I am one, Sir.

Sri V. S. PATIL.—Sri Muckannappa may be given a chance.

(Some members were found standing)

Mr. SPEAKER.—I really do not know what to do.

(*Laughter.*)

Sri SANJEEVANATH AIKALA (Suratkal).—Mr. Speaker, Sir, the problem of problems is the problem of education in the State. If you make a personified anology.........

Mr. SPEAKER.—Instead of speaking on the Demand, he is developing something; last time also he did the same thing. (Laughter.)

Sri SANJEEVANATH AIKALA.-I will directly come to the point, Sir. Sir, the private managed schools in the district of South Kanara are not given full maintenance grants for the last three years. They are given only 2/3 in 61-62 and 1/3 in 62-63 and this year no grant is given at all. Then, Sir, on every Hindi Vidwan Government is spending nearly 20,000 to train them for four years. Being trained with such enormous cost they are not posted to the High Schools or colleges to teach that subject. They are working in their original elementary schools. Several representations have been forwarded in this matter but no action has been taken. So, I request the Education Minister to see that these Hindi Vidwans are posted to the institutions where they deserve to be posted.

Then, Sir, about the quality of education. Now, from class education it has become mass education. Everywhere we see lot of dilution in the field of education and teaching. In the City of Bangalore we find for every five teachers of a high school out of six or every five professors of a college out of six are having coaching classes. After their school hours, they run these private coaching classes. When this is the case, how can they work efficiently in their respective schools or colleges; several parents who encouraged their children to go on strike when the fee is raised, spend so much money for these private tuitions of their children. I know that these professors and teachers encourage the boys to attend their private coaching classes; otherwise, the boys would not get promotion in the school. I can give instances where th y directly encourage the students to go to their private classes. This is a very serious affair which should be condemned and the Education Minister should see that such teachers and professors are seriously dealt with.

Then, Sir, there are certain schools run by the Fishery Department, the Labour Department and the Panchayets at the one and the same place so much so, they are overlapping. You find a fishery school, a school started by the Labour Department and a muslim school side by side. In several villages, there is a Muslim boys' school, a fishery school, a Panchayati school and a Labour Welfare school and a general school. These schools overlaps one another. If some of them are abolished, Government can save lot of money.

5-00 P.M.

The question of giving selection grade to the teachers and the appointment of permanent teachers those who have joined after 1958 especially the teachers in the South Kanara High Schools require consideration at the hands of the Education Minister. Teachers who are appointed in the High Schools after the Reorganisation of the States, are still treated as temporary. Consequently, they do not get increments and other benefits which a permanent teacher gets. About the management of the Elementary and High Schools, which were managed by the ex-District Boards, a permanent agency has not yet been created. Consequently, some schools are under the management of the Deputy Commissioner, some under the Taluk Boards and some under the Panchayat Boards. A single unified agency should be created to look after all these schools.

Government have created certain Multi-purpose schools in every District. They were not provided with enough materials. I pointed out several instances previously, and I hope the Education Department would look into this also.

Lastly, I just want to make a reference about the Hon'ble Minister for Education. I heard the Members speaking about the several irregularities and several acts of commission and omission done by the Education Minister in the Department. I feel that it is indulging in a sort of character-assasination. Education is not a problem which can be solved by a single-hand. Everywhere, not only here, but in the entire union, education is a problem which has not been tackled to the satisfaction of all. You all know, that the new Central Education Minister, Sri Chagla, abolished a number of Committees out of the 120 Committees which were there previously. That itself shows, what an enormous problems the Education Ministry has to face. I am very sorry to say that there is a sort of witch-hunting of the Education Minister. Therefore, I do not share the views of the Hon'ble Member to single-out the Education Minister and indulging in character—assasination. It behaves everyone of us to look into that aspect and find out a solution.

With these few words, I thank you.

ಶ್ರೀ ಎನ್. ನಂಜೇಗೌಡ (ಕೃಷ್ಣರಾಜಪೇಟೆ).—ಸ್ವಾಮಿ, ನಮ್ಮ ಮುಂದಿಟ್ಟಿರುವ ಡಿಮ್ಯಾಂಡು ಗಳನ್ನು ಅನುಮೋದಿಸುತ್ತ ಇದರಲ್ಲಿರತಕ್ಕ ಕೆಲವು ನ್ಯೂನತೆಗಳನ್ನು ಸರಕಾರದ ಗಮನಕ್ಕೆ ತರಲಿಚ್ಛಿಸುತ್ತೇನೆ.

ಈಗ ವಿದ್ಯಾಭ್ಯಾಸ ಏನಾಗಿದೆ ಎಂದರೆ ಓದತಕ್ಕ ಮಕ್ಕಳ ಗತಿ ತಾಯಿ ಇಲ್ಲದ ತಬ್ಬಲಿಯಂತಾಗಿದೆ. ತಂದೆಯೇನೋ ಬೇಕಾದ ಹಾಗೆ ಸಾಮಾನುಗಳನ್ನು ತಂದು ಕೊಡಬಹುದು, ತಾಯಿ ಅದನ್ನು ತೆಗೆದುಕೊಂಡು ಮಾಡಿ ಹಾಕಿ ಮಕ್ಕಳಿಗೆ ಕೊಟ್ಟರೆ ಜಾಸ್ತಿ ಶಕ್ತಿ ಬರುತ್ತದೆ, ಹಾಗೆ ಈಗಿನ ವಿದ್ಯಾಭ್ಯಾಸದ ಗತಿ ಕೂಡ ತಾಯಿ ಇಲ್ಲದ ತಬ್ಬಲಿಯಂತೆ ನಮ್ಮ ಪ್ರೈಮರಿ ಶಾಲೆಗಳ ಸ್ಥಿತಿಯಾಗಿದೆ. ನಮ್ಮ ತಾಲ್ಲೂಕಿಗೆ ಒಂದು ಸಾರಿ ವಿದ್ಯಾ ಇಲಾಖೆಯ ಜಾಯಿಂಟ್ ಡೈರೆಕ್ಟರವರು ಟೂರಿನ ಮೇಲೆ ಬಂದಾಗ ಅವರಿಗಾಗಿ ಕೆಲವು ಕಡೆಗಳಲ್ಲಿ ಸತ್ಕಾರ ಕೂಟಗಳನ್ನು ಏರ್ಪಾಡು ಮಾಡಿದ್ದರು. ಆಗ ನಾನೂ ಕೂಡ ಅಲ್ಲಿಗೆ ಹೋಗಿ ಜಾಯಿಂಟ್ ಡೈರೆಕ್ಟರನ್ನು ಕಂಡು ತಾವು ಇಂತಹ ಸಮಾರಂಭಗಳಿಗೆ ಬರುವುದಕ್ಕೆ ಬದಲು ನಮ್ಮ ಭಾಗದಲ್ಲಿರುವ ಪ್ರೈಮರಿ ಶಾಲೆಗಳ ಸ್ಥಿತಿಯನ್ನು ಹೋಗಿ ನೋಡಿದ್ದರೆ ಚೆನ್ನಾಗಿರುತ್ತಿತ್ತು ಎಂದು ಹೇಳಿದೆ. ಅದರಂತೆ ಅವರೂ ಕೂಡ ನಮ್ಮ ಭಾಗದಲ್ಲಿರುವ

(ಶ್ರೀ ಎನ್. ನಂಜೇ ಗೌಡ)

ಕೆಲವು ಪ್ರೈಮರಿ ಶಾಲೆಗಳಿಗೆ ಭೇಟಿ ಕೊಟ್ಟರು. ಆಗ ಒಂದು ಶಾಲೆಯಲ್ಲಿದ್ದ ಮೇಷ್ಟ್ರು ಮಗುವನ್ನು ಜಗ್ಗಿದು ಮೇಲೆ ಕೂಡಿಸಿಕೊಂಡು ಆಟವಾಡುತ್ತಿದ್ದರು ಮತ್ತು ಮಕ್ಕಳು ಒಳಗೆ ಆಡುತ್ತಿದ್ದವು. ಇನ್ನೊಂದು ಶಾಲೆಗೆ ಜಾಯಿಂಟ್ ಡೈರೆಕ್ಟರವರು ಬೇಟಿ ಕೊಟ್ಟಾಗ ಅಲ್ಲಿದ್ದ ಸ್ಕೂಲು ಮೇಷ್ಟ್ರು ಮೇಜಿನ ಮೇಲೆ ಒಂದು ಲೀವ್ ಅರ್ಜಿಯನ್ನು ಬರೆದಿಟ್ಟು ಹೋಗಿದ್ದರು. ಅಲ್ಲಿರುವ ಮಕ್ಕಳನ್ನು ಉಪಾಧ್ಯಾಯರು ಎಲ್ಲಿಗೆ ಹೋಗಿದ್ದಾರೆ ಎಂದು ಕೇಳಿದುದಕ್ಕೆ ಒಬ್ಬರು ಹೊರಗೆ ಹೋಗಿದ್ದಾರೆಂತಲೂ, ಇನ್ನೊಬ್ಬರು ಮೇಜಿನ ಮೇಲೆ ರಜಾಕ್ಕಾಗಿ ಅರ್ಜಿ ಬರೆದಿಟ್ಟು ಹೋಗಿದ್ದಾರೆಂತಲೂ ಹೇಳಿದರು. ಅಲ್ಲದೆ ಅಲ್ಲಿರುವ ಅಟೆಂಡೆನ್ಸು ರಿಜಿಸ್ಟರು ನೋಡಿದರೆ ಮಕ್ಕಳ ಹಾಜರಾತಿಯೂ ಕೂಡ ಇರಲಿಲ್ಲ. ಹೀಗಾಗಿ ನಮ್ಮ ಹಳ್ಳಿಗಳಲ್ಲಿರುವ ಪ್ರೈಮರಿ ಶಾಲೆಗಳ ಮಕ್ಕಳ ವಿದ್ಯಾಭ್ಯಾಸ ತುಂಬಾ ಕಷ್ಟತರವಾಗಿಯೇ ಉಳಿದಿದೆ. ನಮ್ಮ ತಾಲ್ಲೂಕಿನಲ್ಲಿರುವ ಹಳ್ಳಿಗಳಲ್ಲಿ ಒಟ್ಟು 193 ಪ್ರೈಮರಿ ಶಾಲೆಗಳಿವೆ, ಕೆಲವು ಶಾಲೆಗಳು ಚಾವಡಿ ಮತ್ತು ಜಗಲಿಗಳಲ್ಲಿ ನಡೆಯುತ್ತಿವೆ. 73 ಸ್ಕೂಲುಗಳು ಮಾತ್ರ ಕಟ್ಟಡಗಳಲ್ಲಿ ನಡೆಯುತ್ತಿವೆ, ಉಳಿದ 120 ಶಾಲೆಗಳಿಗೆ ಕಟ್ಟಡಗಳೇ ಇಲ್ಲದೆ ದುಸ್ತರವಾಗಿದೆ. ಇಂತಹ ಪ್ರೈಮರಿ ಶಾಲೆಗಳಿಗಾಗಿ ಆದಷ್ಟು ಜಾಗ್ರತೆ ಕಟ್ಟಡಗಳನ್ನು ಕಟ್ಟಿಸಿಕೊಡಬೇಕೆಂದು ಜನ ಕೇಳುತ್ತಿದ್ದರು. ಇದಕ್ಕಾಗಿ ಸರಕಾರದವರು ಒಂದು ಕಟ್ಟಡಕ್ಕಾಗಿ 1,000 ರೂಪಾಯಿಗಳನ್ನು ಕೊಟ್ಟಿದ್ದಾರೆಂದು ಕೇಳಿದೆವು. ಸರಕಾರದವರು ಹೇಳಿದಂತೆ ಆಯಾ ಊರುಗಳಲ್ಲಿರುವ ಜನರು ಕೂಡ ಅವರ ಕೋಟಾವನ್ನು ಕೂಡ ಕೊಟ್ಟಿದ್ದರೂ ಸಹ ಇನ್ನೂ ಕಟ್ಟಡಗಳು ಕಟ್ಟುವುದಕ್ಕೆ ಆಗಿಲ್ಲ. ಅಲ್ಲದೆ ಸರಕಾರದವರು ಈ ಬಾಬಿಗಾಗಿ ಆರು ಲಕ್ಷ ರೂಪಾಯಿಗಳೆಂದು ಮಾಡಿರುವುದನ್ನು ಇನ್ನೂ ಸ್ವಲ್ಪ ಹೆಚ್ಚು ಮಾಡಿ ಇಂತಹ ಕಟ್ಟಡಗಳನ್ನು ಆದಷ್ಟು ಬೇಗನೆ ಮಾಡಲು ಅವಕಾಶ ಮಾಡಿಕೊಡಬೇಕೆಂದು ಈ ಸಮಯದಲ್ಲಿ ಸರಕಾರವನ್ನು ಪ್ರಾರ್ಥಿಸುತ್ತೇನೆ.

ತಾವು ಹಿಂದೆ ಭೂದಾನ ಮತ್ತು ವಿದ್ಯಾದಾನಗಳಿಗಾಗಿ ಜಮೀನುಗಳನ್ನು ಜನರಿಂದ ಕಲೆಕ್ಟ್ ಮಾಡಿದ್ದೀರಿ. ಇದರ ಪರಿಸ್ಥಿತಿ ಏನಾಯಿತು ಮತ್ತು ಇದು ಹೇಗೆ ನಡೆಯುತ್ತಿದೆ, ಇದರ ಉತ್ಪತ್ತಿಯೇನು ? ಇದರ ಬಗ್ಗೆ ಸರಕಾರ ಏನು ಕಾರ್ಯಕ್ರಮ ತೆಗೆದುಕೊಂಡಿದೆ, ಧರ್ಮ ಎಂದು ಕೊಟ್ಟವರಿಗೆ ಕರ್ಮ ಎನ್ನುವುದು ಉಳಿದಿದೆಯೋ ? ಇದರಲ್ಲಿ ಯಾರು ದಾನ ಎಂದು ಕೊಟ್ಟಿದ್ದಾರೋ ಅದನ್ನು ಸರಕಾರ ಕೇರ್ ಸಂಸ್ಥೆ ಹೇಗೆ ಪದಾರ್ಥಗಳನ್ನು ಕೊಟ್ಟು ಸಹಾಯ ಮಾಡುತ್ತಿದೆಯೋ ಅದರಂತೆ ಇದರಲ್ಲೂ ಸುಧಾರಿಸಬೇಕು ಎಂದು ಈ ಸಮಯದಲ್ಲಿ ಸರಕಾರಕ್ಕೆ ಹೇಳುತ್ತೇನೆ.

ನಮ್ಮ ತಾಲ್ಲೂಕಿನಲ್ಲಿ ಒಂದು ಪಾಲಿಟೆಕ್ನಿಕ್ ಸ್ಕೂಲು ಎಂದು ಇದೆ. ಈ ಸ್ಕೂಲಿನಲ್ಲಿ ನಡೆಯುತ್ತಿರುವ ಅನ್ಯಾಯಗಳು ಎಷ್ಟು ಎನ್ನುವುದನ್ನು ಹೇಳತೀರದು. ಇದನ್ನು ನಾನು ಮಾನ್ಯ ಮಂತ್ರಿಗಳ ಗಮನಕ್ಕೂ ತಂದಿದ್ದರೂ ಮತ್ತು ಅಲ್ಲಿನ ಜನರಿಂದ ಅರ್ಜಿ ಬಂದಿದ್ದರೂ ಇದರ ಬಗ್ಗೆ ಗಮನ ಕೊಟ್ಟಂತೆ ಕಾಣುವುದಿಲ್ಲ. ಇಲ್ಲಿರುವ ಸ್ಕಾಲರ್‌ಷಿಪ್ಪು ಕಮಿಟಿಯವರು ಮಾಡಿದಂತಹ ತೀರ್ಮಾನವನ್ನು ಮತ್ತು ಅವರು ಮಾಡಿದ್ದ ಲಿಸ್ಟನ್ನು ಕಡೆಗಣಿಸಿ ತಮಗೆ ಇಷ್ಟ ಬಂದ ಹಾಗೆ ಸ್ಕಾಲರ್‌ಷಿಪ್ಪುಗಳನ್ನು ಕೊಟ್ಟಿದ್ದಾರೆ. ಇದನ್ನು ಮಾನ್ಯ ವಿದ್ಯಾಮಂತ್ರಿಗಳ ಗಮನಕ್ಕೂ ತಂದಿದ್ದೇನೆ ಮತ್ತು ಇದರ ಬಗ್ಗೆ ಅಲ್ಲಿನ ಜನರಿಂದ ನನಗೆ ಬಂದ ಅರ್ಜಿಯನ್ನೂ ಕೂಡ ಮಾನ್ಯ ಮಂತ್ರಿಗಳಿಗೇ ಕಳುಹಿಸಿ ಕೊಟ್ಟಿದ್ದೇನೆ. ಇಲ್ಲಿರುವ ಮಕ್ಕಳ ವಿದ್ಯಾಭ್ಯಾಸಕ್ಕೆ ಬಹಳ ಕಷ್ಟವಾಗಿದೆ, ಇದರ ಬಗ್ಗೆ ಸರಕಾರ ಸಾಕಾದಷ್ಟು ನಿಗಾ ತೆಗೆದುಕೊಳ್ಳಬೇಕೆಂದು ಈ ಸಮಯದಲ್ಲಿ ಪ್ರಾರ್ಥನೆ ಮಾಡಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ (ಸಿರಾ).—ಸ್ವಾಮಿ ನಾನು ನನಗೆ ಕೊಟ್ಟಿರತಕ್ಕ 10 ನಿಮಿಷಗಳಲ್ಲಿ 25 ಕೋಟಿ ರೂಪಾಯಿಗಳನ್ನು ಖರ್ಚುಮಾಡತಕ್ಕ ಬಾಬಿನ ಮೇಲೆ ಮಾತನಾಡಲು ನನಗೆ ಸಾಧ್ಯವಿಲ್ಲ. ತಾವು ಈ ಅವಕಾಶವನ್ನು ಯಾರಿಗಾದರೂ ಕೊಟ್ಟುಬಿಡಿ.

ಶ್ರೀ ಟಿ. ಎನ್. ಮಾದಪ್ಪಗೌಡ (ನಾಗಮಂಗಲ).—ಸ್ವಾಮಿ ಅಧ್ಯಕ್ಷರೇ: 22 ಕೋಟಿ ರೂಪಾಯಿಗಳನ್ನು ಖರ್ಚುಮಾಡತಕ್ಕ ಈ ವಿದ್ಯಾ ಇಲಾಖೆಯ ವಿಚಾರದಲ್ಲಿ ನನಗಿರುವ ಸ್ವಲ್ಪ ಅವಕಾಶದಲ್ಲಿ ಈ ಸಭೆಯ ಗಮನಕ್ಕೆ ಕೆಲವು ವಿಚಾರಗಳನ್ನು ತರಬೇಕೆಂದಿದ್ದೇನೆ. ಈಚೀಚೆಗೆ ಬರುತ್ತಿರುವ ಪಠ್ಯಪುಸ್ತಕಗಳೆಲ್ಲ ಬರಿ ಕಾಕಮ್ಮನ ಕಣಿಯಿಂದ ತುಂಬಿರುತ್ತವೆ. ನಾನು ಓದುತ್ತಿದ್ದ ಕಾಲದಲ್ಲಿ ಚಾ. ವಾಸುದೇವಯ್ಯ ಎಂಬುವವರು ಒಂದು ಬಾಲಬೋಧೆಯನ್ನು ಬರೆದಿದ್ದರು. ಅದನ್ನು ನಮಗೆ ಪಠ್ಯಪುಸ್ತಕವನ್ನಾಗಿಟ್ಟಿದ್ದರು. ನಾನು ಓದಿದ್ದು ಮತ್ತು ನಮ್ಮ ತಂದೆಯವರು ಓದಿದ್ದು ಈ ಒಂದೇ ಪುಸ್ತಕವನ್ನು. ಅದರಲ್ಲಿ ಮನುಷ್ಯನಿಗೆ ಬೇಕಾದ ಎಲ್ಲಾ ನೀತಿ ವಿಚಾರಗಳೂ ಅಡಕವಾಗಿದ್ದುವು. ಈ ದಿವಸ ನಮ್ಮಲ್ಲೇನಾದರೂ ಅಷ್ಟಿಷ್ಟು ನೀತಿ ಉಳಿದಿದ್ದರೆ ಅದು ಈ ಪುಸ್ತಕದಿಂದಲೇ ಎಂದು ನಾನು ಹೇಳುತ್ತೇನೆ. ಈ ದಿವಸ ಅಂಥ ಪುಸ್ತಕವನ್ನು ನೋಡತಕ್ಕ ಅವಕಾಶವೇ ಇಲ್ಲ. ಸರ್ಕಾರದವರು

ಇಂಥ ಒಳ್ಳೆಯ ಪುಸ್ತಕಗಳನ್ನು ಪಠ್ಯಪುಸ್ತಕವಾಗಿಡಬೇಕೆಂದು ನಾನು ಸಲಹೆ ಮಾಡುತ್ತೇನೆ. ಈ ಹಿಂದೆ ಏನು ಒಂದು ಎಥಿಕ್ಸ್ ಎಂಥ ಸಬ್‌ಜೆಕ್ಟ್ ಇತ್ತು ಈಗ ಅದನ್ನು ತೆಗೆದುಹಾಕಿದ್ದಾರೆ ಅದರಿಂದಲೇ ಈ ದಿವಸ ದೇಶದಲ್ಲಿ ಜನಗಳ ನೀತಿಯುಮಟ್ಟ ಕೆಳಕ್ಕಿಳಿಯುತ್ತಿದೆ. ಈ ದಿವಸ ನಾವು ನಮ್ಮ ಮಕ್ಕಳಿಗೆ ಮಾರಲ್ ಎಜುಕೇಷನ್ನನ್ನು ಕೊಡದೇ ಹೋದರೆ ಇದಕ್ಕೆ ಸರ್ಕಾರ ಸೂಕ್ತ ಏರ್ಪಾಡನ್ನು ಮಾಡದಿದ್ದರೆ ನಾಳೆ ದೇಶದ ಪ್ರಜೆಗಳಾಗತಕ್ಕ ಇಂದಿನ ನಮ್ಮ ಮಕ್ಕಳು, ಇಂದಿನ ಈ ಪೀಳಿಗೆ ಕೆಲಸಕ್ಕೆ ಬಾರದಂತಾಗುತ್ತದೆಂದು ಹೇಳುತ್ತೇನೆ. ಇದರಿಂದ ನಾಳೆ ಒಂದು ದೊಡ್ಡ ಪ್ರಳಯವೇ ಆಗಬಹುದು. ಇನ್ನು ಈ ದಿವಸ ಲಕ್ಷಾಂತರ ಹುಡುಗರು ಎಸ್. ಎಸ್. ಎಲ್. ಸಿ. ಪರೀಕ್ಷೆಗೆ ಕುಳಿತುಕೊಳ್ಳುತ್ತಿದ್ದಾರೆ. ಅವರಲ್ಲಿ ನಾಲ್ಕನೇ ಒಂದು ಭಾಗವಾದರೂ ಕಾಲೇಜು ವಿದ್ಯಾಭ್ಯಾಸಕ್ಕೆ ಹೋದೇ ಹೋಗುತ್ತಾರೆ. ಆದ್ದರಿಂದ ಇದು ಅರ್ಥವಿಲ್ಲದ ಓದು. ಏಕೆಂದರೆ ಈಗಾಗಲೇ ದೇಶದಲ್ಲಿ ನಿರುದ್ಯೋಗ ಸಮಸ್ಯೆ ತಾಂಡವವಾಡುತ್ತಿದೆ. ನಾವು ಇದೇ ಹಾದಿಯಲ್ಲಿ ಹೋಗುತ್ತಿದ್ದರೆ ಮುಂದೆ ಈ ಸಮಸ್ಯೆ ಇನ್ನೂ ದೊಡ್ಡದಾಗುವುದಿಲ್ಲವೇ ?

ಆದ್ದರಿಂದ ಒಂದು ಗೊತ್ತಾದ ಮಟ್ಟದವರೆಗೆ ಅಂದರೆ—ಎಸ್. ಎಸ್. ಎಲ್. ಸಿ. ಪರೀಕ್ಷೆ ಅಥವಾ ಆ ಒಂದು ಕೇಂಬ್ರಿಡ್ಜ್ ಪರೀಕ್ಷೆಗಳಲ್ಲಿ ಉತ್ತೀರ್ಣರಾಗುವಂತೆ ಮಾಡಿ ಈ ಕೆಲಸಗಳಿಗೆ ಸೇರತಕ್ಕ ಒಂದು ಅರ್ಹತೆ ಬರುವ ಮಟ್ಟಿಗೆ ವಿದ್ಯಾಭ್ಯಾಸಮಾಡಿಸಿದರೆ ಸಾಕು ಎಂದು ಹೇಳುತ್ತೇನೆ. ಅಷ್ಟು ಮಾಡಿ ಆ ಮಟ್ಟದ ವಿದ್ಯೆಯನ್ನು ದೇಶದಲ್ಲಿರತಕ್ಕ ಮಕ್ಕಳಿಗೆಲ್ಲಾ ಉಚಿತವಾಗಿ ಒದಗಿಸಲು ಸರ್ಕಾರದವರು ಪ್ರಯತ್ನಮಾಡಬೇಕೆಂದು ಹೇಳುತ್ತೇನೆ. ಇನ್ನು ಮುಂದಕ್ಕೆ ಉಳಿದ ಟೆಕ್ನಿಕಲ್ ಮತ್ತು ಯೂನಿವರ್ಸಿಟಿಯ ವಿದ್ಯಾಭ್ಯಾಸವನ್ನು ದೇಶಕ್ಕೆಷ್ಟು ಅಗತ್ಯವಿದೆಯೋ ಅಷ್ಟನ್ನು ಪೂರೈಸುವ ಮಟ್ಟಿಗೆ ಇಟ್ಟುಕೊಂಡರೆ ಸಾಕೆಂದು ನಾನು ಹೇಳುತ್ತೇನೆ. ಇದರಿಂದ ದೇಶಕ್ಕೂ ಅನುಕೂಲವಾಗುತ್ತದೆ. ಈ ದಿವಸ ಈಗಾಗಲೇ ಅನೇಕ ಕಡೆಗಳಲ್ಲಿ ಮೆಡಿಕಲ್ ಮತ್ತು ಇಂಜಿನಿಯರಿಂಗ್ ಕಾಲೇಜುಗಳು ನಾಯಿಬಾಲದಹಾಗೆ ಬೆಳೆದು ಬರುತ್ತಿವೆ. ಇನ್ನು ಮುಂದಕ್ಕೆ ಈ ವಿದ್ಯಾಭ್ಯಾಸ ಪಡೆದ ಮಕ್ಕಳಿಗೂ ಕೆಲಸ ಸಿಕ್ಕದೆ ಅವರು ತೊಂದರೆಪಡಬೇಕಾದ ಪ್ರಮೇಯ ಬರುತ್ತದೆ. ಇನ್ನಾದರೂ ಹೀಗೆ ವಿವೇಚನೆಯಿಲ್ಲದೆ ಈ ಕಾಲೇಜುಗಳನ್ನು ತೆರೆಯದಂತೆ ಮಾಡಬೇಕೆಂದು ಹೇಳುತ್ತೇನೆ. ನಮಗೆಷ್ಟು ಅಗತ್ಯವೋ ಅಷ್ಟನ್ನು ನಡೆಸಿದರೆ ಸಾಕೆಂದು ಹೇಳುತ್ತೇನೆ. ಇನ್ನು ಹಳ್ಳಿಗಾಡಿನಲ್ಲಿ ಕೆಲವು ಉರ್ದು ಶಾಲೆಗಳಿರುತ್ತವೆ. ಅವುಗಳ ಇನ್‌ಸ್ಪೆಕ್ಷನ್ನು ಆ ಉರ್ದು ಇನ್‌ಸ್ಪೆಕ್ಟರುಗಳೇ ಮಾಡಬೇಕಂತೆ. ಆದರೆ ಅವರು 4–5 ತಾಲ್ಲೂಕಿಗೆ ಒಬ್ಬರು ಇದ್ದಾರೆ. ಅವರು ಬರುವುದು ಯಾವಾಗಲೋ. ಇದು ಯಾರಿಗೂ ಗೊತ್ತಾಗುವುದಿಲ್ಲ. ಇವು ಸರಿಯಾಗಿಯೂ ಕೆಲಸಮಾಡುವುದಿಲ್ಲ. ಈ ಶಾಲೆಗಳನ್ನು ತಾಲ್ಲೂಕಿನಲ್ಲಿ ಇರತಕ್ಕ ಬೇರೆ ಇನ್‌ಸ್ಪೆಕ್ಟರ್ ಇನ್‌ಸ್ಪೆಕ್ಷನ್ ಮಾಡಬಹುದೆಂದು ಒಂದು ಆಜ್ಞೆಯನ್ನು ಮಾಡುವುದು ಉತ್ತಮವಾದ್ದೆಂದು ನಾನು ಸಲಹೆ ಮಾಡುತ್ತೇನೆ. ಈಗ ತಾಲ್ಲೂಕ್‌ಬೋರ್ಡ್ ಹೈಸ್ಕೂಲುಗಳನ್ನು ಎಲ್ಲ ಕಡೆಗಳಲ್ಲಿಯೂ ಪ್ರಾರಂಭಮಾಡಿದ್ದಾರೆ, ಇದಕ್ಕೆ ಸರ್ಕಾರದವರು ಅನುಮತಿಯನ್ನೂ ಕೊಟ್ಟಿದ್ದಾರೆ. ಆದರೆ ನಾನು ಕೇಳಿರತಕ್ಕ 7 ಕಡೆಗಳಲ್ಲಿರತಕ್ಕ ಹೈಸ್ಕೂಲಿನವರು ಸರ್ಕಾರದವರು ನೇಮಕ ಮಾಡಿದ ಉಪಾಧ್ಯಾಯರನ್ನು ಕೆಲಸಕ್ಕೆ ತೆಗೆದು ಕೊಳ್ಳದೆ ಅವರು ಅವರಿಗೆ ಬೇಕಾದ ಅವರ ಸಂಬಂಧೀಕರನ್ನು ಕೆಲಸಕ್ಕೆ ನೇಮಕಮಾಡಿಕೊಂಡಿರುತ್ತಾರೆ. ಆ ಶಾಲೆಗಳಿಗೆ ಉಪಾಧ್ಯಾಯರನ್ನು ನೇಮಿಸತಕ್ಕ ಹಕ್ಕು ಸರ್ಕಾರಕ್ಕಿಲ್ಲವೆಂಬುದಾಗಿ ಅವರು ವಾದಮಾಡುತ್ತಿದ್ದಾರಂತೆ. ಇಂಥಾದ್ದಕ್ಕೆ ಅವಕಾಶ ಕೊಡಬಾರದೆಂದು ಹೇಳುತ್ತೇನೆ. ಇದರಿಂದ ಮಕ್ಕಳ ವಿದ್ಯಾಭ್ಯಾಸಕ್ಕೆ ತೊಂದರೆ ಬರುತ್ತದೆ. ಯಾರಿಗೆ ಶಾಲೆಗಳನ್ನು ತೆರೆಯಲು ಅವಕಾಶಕೊಡಲಾಗುತ್ತದೆಯೋ ಅಂಥವರಿಗೆ ಮೊದಲೇ ಅವರು ಆ ಶಾಲೆಗೆ ಸರಿಯಾಗಿ ನುರಿತ ಮತ್ತು ಶಿಕ್ಷಣಪಡೆದ ಉಪಾಧ್ಯಾಯರನ್ನು ನೇಮಕ ಮಾಡಿಕೊಳ್ಳಬೇಕೆಂಬ ಕಂಡೀಷನ್ನನ್ನು ಹಾಕಿ ಶಾಲೆಯನ್ನು ಮಂಜೂರು ಮಾಡಬೇಕೆಂದು ಹೇಳುತ್ತೇನೆ. ಈಗ ಕೆಲವು ಕಡೆಗಳಲ್ಲಿ ನನಗೆ ತಿಳಿದುಬಂದಿರುವಹಾಗೆ ಅಲ್ಲಿ ವಿದ್ಯಾಇಲಾಖೆಯ ಡೈರೆಕ್ಟರವರು ಮಾಡಿರತಕ್ಕ ಆಜ್ಞೆಯನ್ನು ನಿರಾಕರಿಸಿ ಅವರ ಬಂಧುಗಳಿಗೆ ಅಲ್ಲಿ ಕೆಲಸಗಳನ್ನು ಕೊಟ್ಟಿದ್ದಾರೆಂದು ಕೇಳುತ್ತಿದ್ದೇನೆ. ಸರ್ಕಾರದವರು ಈ ವಿಚಾರಕ್ಕೆ ಕೂಡಲೆ ನಿಗಾಕೊಡಬೇಕೆಂದು ಹೇಳುತ್ತೇನೆ. ಇನ್ನು ನಮ್ಮ ಟೆಕ್ನಿಕ್ ಎಜುಕೇಷನ್ನಿನಲ್ಲಿ ಸರಿಯಾದ ಕರಿಕುಲಂ ಪ್ರಕಾರ ಪಾಠಗಳನ್ನು ಹೇಳಿಕೊಡುತ್ತಿಲ್ಲವೆಂದು ಈಗ ನಮ್ಮ ಜನರಿಗೆ ಎಚ್. ಎಂ. ಟಿ ಮತ್ತು ಎಚ್. ಎ. ಎಲ್. ಈ ಎರಡು ಕಡೆಗಳಲ್ಲೂ ಕೆಲಸ ಸಿಗುತ್ತಿಲ್ಲವಂತೆ. ಆದ್ದರಿಂದ ಅಲ್ಲಿ ಕೆಲಸ ಸಿಗಬೇಕಾದರೆ ಯಾವ ಕರಿಕುಲಂ ಇರಬೇಕೋ ಅದನ್ನು ಇಲ್ಲಿ ಜಾರಿಗೆ ತಂದು ಮುಂದೆ ಅಲ್ಲಿ ನಮ್ಮವರಿಗೆ ಕೆಲಸಗಳು ಸಿಗುವಂತೆ ಮಾಡಬೇಕೆಂದು ಹೇಳುತ್ತೇನೆ. ಇನ್ನು ಕೆಲವುಕಡೆಗಳಲ್ಲಿ ವಯಸ್ಕರ ವಿದ್ಯಾಭ್ಯಾಸದ ಒಂದು ಸಮಿತಿ ಇತ್ತು. ಇದು ನಮ್ಮಲ್ಲಿ ಸುಮಾರು 30-32 ವರ್ಷಗಳಿಂದ ಕೆಲಸಮಾಡುತ್ತಿದೆ. ಆದರೆ ಇದರಬಗ್ಗೆ ಅನೇಕ ದೂರುಗಳಿದ್ದುವೆ ಇದಕ್ಕೆ ಕೆಲವು ನಿದರ್ಶನಗಳೂ ಇವೆ. ಇದರಲ್ಲಿ ತಾಲೂಕುಮಟ್ಟದವರೆಗೆ 220 ಜನ ಡಿ. ಇ. ಓ. ಗ್ರೇಡಿನ ಅಧಿಕಾರಿಗಳಿದ್ದಾರೆ. ಇವರಿಗೆ ಇಗಾಗಲೇ 20-25 ವರ್ಷ

(ಶ್ರೀ ಟಿ. ಎನ್. ಮಾದಪ್ಪಗೌಡ)

ಸರ್ವಿಸ್ಸಾಗಿದೆ. ಇವರಿಗೆ ಮುಂದೆ ಯಾವ ಕುಂದುಕವೂ ಬರದಹಾಗೆ ಕೆಲಸವಾಡಬೇಕೆಂದು ಹೇಳುತ್ತೇನೆ. ಈ ಅಕ್ಷರಪ್ರಚಾರಸಮಿತಿಗೆ ಸರಿಯಾಗಿ ಗ್ರ್ಯಾಂಟನ್ನು ಕೊಡಬೇಕೆಂದು ಹೇಳುತ್ತೇನೆ. ಇನ್ನು ನಮ್ಮಲ್ಲಿ ನಮ್ಮ ವಿದ್ಯಾವಟ್ಟವನ್ನು ಕೇಳುವಹಾಗೇ ಇಲ್ಲ. ನಮ್ಮ ಕಾಲದಲ್ಲಿ ಪಾಠಹೇಳುತ್ತಿದ್ದ ಉಪಾಧ್ಯಾಯರು ಬಹಳ ಚೆನ್ನಾಗಿ ಪಾಠಗಳನ್ನು ಹೇಳುತ್ತಿದ್ದರು. ಈಗಿರತಕ್ಕ ಉಪಾಧ್ಯಾಯರು ಕಚ್ಚೆ ಸಹಾ ಕಟ್ಟುವುದಿಲ್ಲ. ಗುರುಗಳ ಮಟ್ಟವೂ ಹಾಗೇ ಇದೆ. ಹಾಗಿರುವಾಗ ಇನ್ನು ನಾವು ಶಿಷ್ಯರ ಮಟ್ಟವನ್ನೇಕೆ ಕೇಳಬೇಕು? ಪರೀಕ್ಷೆಯ ಪ್ರಶ್ನೆಪತ್ರಿಕೆಗಳನ್ನು ನೋಡುವಾಗ ಸ್ಟಾಂಡರ್ಡಿಗೆ ಹೆಚ್ಚು ಬೆಲೆಯನ್ನು ಕೊಡಬೇಕು. ಪ್ರೈವೇಟಿನಲ್ಲಿ ಪಾಠಹೇಳುವುದನ್ನು ನಿಲ್ಲಿಸಬೇಕು.

ಬುದ್ಧಿಯನ್ನು ಹೆಚ್ಚಿಸಿ ಶಿಕ್ಷಣಕ್ರಮದಲ್ಲಿರತಕ್ಕ ನ್ಯೂನತೆಯನ್ನು ತಪ್ಪಿಸಬೇಕು. ಇನ್ನು ಮೊನ್ನೆ ಮೊನ್ನೆ ತಾನೆ ನಮ್ಮ ವಿದ್ಯಾಮಂತ್ರಿಗಳು ನಮ್ಮ ಎಲ್ಲಾ ಸಂಶಯಗಳಿಗೂ ಕಾರಣರಾಗಿದ್ದಾರೆ. ಈ ಮಹಾಶಯರೇ ಹೊಸಮೈಸೂರಿನ ವಿಶ್ವವಿದ್ಯಾನಿಲಯ ಮತ್ತು ಹಳೇಮೈಸೂರಿನ ವಿಶ್ವವಿದ್ಯಾನಿಲಯ ಎಂಬುದಾಗಿ ಎರಡು ವಿಭಾಗ ಮಾಡಿ ಒಂದು ದೊಡ್ಡಗೊಂದಲವನ್ನೆಬ್ಬಿಸಿದ್ದಾರೆ, ಈ ಕಾರಣದಿಂದ ನಮ್ಮ ಮೈಸೂರು ಮೈಸೂರಾಗೆ ಉಳಿಯಬೇಕು ಎಂದು ಹೇಳುತ್ತೇನೆ. ಶ್ರೀಮಾನ್ ದೊಡ್ಡಮೇಟಿಯವರೆಷ್ಟು ಈ ವಿಚಾರದಲ್ಲಿ ಖಚಿತವಾಗಿದ್ದಾರೋ ಹಳೇ ಮೈಸೂರಿನ ವಿಚಾರದಲ್ಲಿ ನಾವೂ ಅಷ್ಟೇ ಖಚಿತವಾಗಿದ್ದೇವೆ. ನಮಗೆ ನಮ್ಮ ಹಳೇ ಮೈಸೂರು ಆಗದಿದ್ದರೆ ನಮ್ಮ ಏಳಿಗೆ ಸಾಧ್ಯವಿಲ್ಲ, ನನಗೆ ಇಷ್ಟು ಮಾತನಾಡಲು ಅವಕಾಶ ಮಾಡಿಕೊಟ್ಟ ಅಧ್ಯಕ್ಷರಿಗೆ ನನ್ನ ವಂದನೆಗಳನ್ನರ್ಪಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಗೋಪಾಲ ಸಾಲೆನ್ನ (ಮೂಡಬಿದಿರೆ).—ಅಧ್ಯಕ್ಷರೇ, ವಿದ್ಯಾಭ್ಯಾಸ ವಿಚಾರದಲ್ಲಿ ಅನೇಕರು ತಮ್ಮ ತಮ್ಮ ಅಭಿಪ್ರಾಯವನ್ನು ಕೊಟ್ಟಿರುವಾಗ ಕೆಲವು ಅಂಶಗಳನ್ನು ನಾನೂ ಸಹ ಇಲ್ಲಿ ಕೊಡಬೇಕಾಗಿದೆ. ಈಗ ಈ ವಿದ್ಯಾಭ್ಯಾಸ ಇಲಾಖೆ ಬಹಳ ಗೊಂದಲಕ್ಕೆ ಕಾರಣವಾದಂಥ ಸಮಸ್ಯೆಗಳನ್ನು ಉಂಟುಮಾಡಿದಂತೆ ಅನೇಕರಿಗೆ ಭಾಸವಾಗುತ್ತಿದೆ. ಇದೇ ಸಂದರ್ಭದಲ್ಲಿ ಹಿಂದೆ ಪಿ.ಡಬ್ಲ್ಯು.ಡಿ. ಬಡ್ಜೆಟ್ ವಿಷಯ ಮಾತನಾಡುವಾಗ ಕೆಲವು ಇತರ ವಿಷಯಗಳು ಬಂದುವು. ಹಳೆಯ ಮೈಸೂರು ಮತ್ತು ಹೊಸ ಮೈಸೂರು ಎಂಬುದಾಗಿ ವಿಭಾಗ ಮಾಡತಕ್ಕ ಒಂದು ವಿಷಬೀಜವನ್ನು ಬಿತ್ತುವುದಾಗಿ ಕೂಡ ಮಾತು ಬಂತು. ಇದು ಎಲ್ಲಾ ಇಲಾಖೆಗಳ ಮೇಲೆ ಈ ಅಭಿಪ್ರಾಯ ಬರಬಹುದು ಎಂಬುದಾಗಿ ನನಗೆ ಭಾಸವಾಗುತ್ತದೆ. ಏಕೆ ಈ ಸರ್ಕಾರ ಇಂಥಾದ್ದಕ್ಕೆಲ್ಲಾ ಅವಕಾಶವನ್ನು ಕೊಡುತ್ತಿದ್ದಾರೋ ಎಂದು ರಾಜ್ಯದ ಜನತೆ ಕಾದುನೋಡುತ್ತಿದ್ದಾರೆ. ವಿದ್ಯಾಖಾತೆಯ ಬಗ್ಗೆ ಇದರಿಂದ ಯಾವುದೋ ಒಂದು ರೀತಿಯ ಕಳವಳವನ್ನುಂಟುಮಾಡತಕ್ಕ ಒಂದು ಅವಕಾಶ ಕಂಡು ಬರುತ್ತಾ ಇದೆ. 22 ಕೋಟಿ ರೂಪಾಯಿಗಳನ್ನು ಖರ್ಚುಮಾಡತಕ್ಕ ಅಂದಾಜು ಹಣದಲ್ಲಿ ನಮ್ಮ ಉತ್ಪಾದನೆ ವಿಭಾಗದಿಂದ ಹೆಚ್ಚಿನ ಹಣ ಸಾಧಾರಣವಾಗಿ ಹೊರಗಿನ ಕರ್ಣಾಟಕಕ್ಕೆ ಹೋಗುತ್ತದೆಂಬ ಅಭಿಪ್ರಾಯವನ್ನು ಹಳೆಯ ಮೈಸೂರಿನವರೆಂದು ಹೇಳಿಸಿಕೊಳ್ಳುವವರು ಹೇಳುತ್ತಾ ಇದ್ದಾರೆ. ಅದನ್ನು ನಾನು ಒಪ್ಪುವವನಲ್ಲ ಅಥವಾ ಯಾರೂ ಒಪ್ಪತಕ್ಕ ವಿಷಯವಲ್ಲ. ನಾನು ಹೊಸ ಮೈಸೂರಿನಿಂದ ಬಂದಿರುವವನು. ನಮ್ಮಲ್ಲಿ ಉತ್ತರ ಕರ್ಣಾಟಕ, ಹುಬ್ಬಳ್ಳಿ, ಬೆಳಗಾಂ, ಮತ್ತು ಬಿಜಾಪುರಗಳನ್ನು ತೆಗೆದುಕೊಂಡರೆ ಅಲ್ಲೆಲ್ಲಾ ಟೆಕ್ನಿಕಲ್ ಹೈಸ್ಕೂಲ್ ಯೋಜನೆಗಳೇ ಇವೆ. ಆದರೆ ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಾಗಲಿ ಕೊಡಗಿನಲ್ಲಾಗಲೀ ಮಾದರಿ ಟೆಕ್ನಿಕಲ್ ಹೈಸ್ಕೂಲುಗಳೇ ಇಲ್ಲ ಎಂಬುದು ಸ್ಪಷ್ಟವಾಗಿದೆ. ಇನ್ನು ಹಳೆಯ ಮೈಸೂರನ್ನು ತೆಗೆದುಕೊಂಡರೆ ಅಲ್ಲಿ ಅಡಲ್ಟ್ ಎಜುಕೇಷನ್ ಯೋಜನೆಯೊಂದಿದೆ. ಸೌತ್ ಕೆನರಾ, ಮತ್ತು ಕೂರ್ಗಿಗೆ ಇಂತಹ ಯಾವ ಯೋಜನೆಗಳೂ ಈತನಕ ಕಾರ್ಯಗತವಾಗಿಲ್ಲ ಬಡ್ಜೆಟ್ಟಿನಲ್ಲಿಯೂ, ಕೂಡ ಕಾಣುವುದಿಲ್ಲ. ಹಾಗೆಯೇ ಹಳೆ ಮೈಸೂರಿನಲ್ಲಿ ನರ್ಸರಿ ಸ್ಕೂಲುಗಳ ಯೋಜನೆ ಬೇರೆ ಇದೆ. ಆದರೆ ನಾವು ಹೊಸದಾಗಿ ಸೇರಿದಂತಹವರಾದ್ದರಿಂದ ನಮ್ಮ ವಿಭಾಗಕ್ಕೆ ಅನೇಕ ಆ ಸೌಕರ್ಯವಿಲ್ಲ. ಇದರಿಂದ ಕೆಲವು ಭಾಗಗಳಿಗೆ ಇರುವ ಅನೇಕ ಯೋಜನೆಗಳು ಮತ್ತೆ ಕೆಲವು ಭಾಗಗಳಿಗೆ ಅಂತಹವು ಇಲ್ಲ. ವಿದ್ಯಾರಂಗದಲ್ಲಿ ಇಂತಹ ವ್ಯತ್ಯಾಸಗಳಿಗೆ ಈ ಸರ್ಕಾರ ಅವಕಾಶ ಕೊಟ್ಟಂತೆ ಸ್ಪಷ್ಟವಾಗಿರುತ್ತೆ. ಇದರಿಂದ ಎಷ್ಟರ ಮಟ್ಟಿಗೆ ನಮ್ಮ ರಾಜ್ಯದ ಜನತೆಯಲ್ಲಿ ಕರ್ಣಾಟಕ ರಾಜ್ಯವನ್ನು ವಿಭಜಿಸುವ ವಿಷಬೀಜ ಹುಟ್ಟಲಿಕ್ಕೆ ಕಾರಣವಾಯಿತೆಂಬುದನ್ನು ತಿಳಿಯಬಹುದು. ಇಂತಹ ವಾದ ವಿವಾದಕ್ಕೆ ಒಂದು ಮೂಲ ಕಾರಣವನ್ನು ಹಾಕಿಕೊಂಡಿರತಕ್ಕ ಈಗಿನ ಆಡಳಿತ ಸರ್ಕಾರ ಇದರ ಸವಿವರ ವಿಷಯವನ್ನು ಅವರೇ ತಿಳಿಸಬೇಕಾಗಿದೆ. ಇದನ್ನು ಜನತೆ ಖಂಡಿತವಾಗಿ ಸಹಿಸುವುದಿಲ್ಲ. ಇವತ್ತು ಹಳೆಯ ಮೈಸೂರಾಗಲಿ ಅಥವಾ ಹೊಸ ಮೈಸೂರಾಗಲಿ ಉತ್ತಮ ಅಧಿಕಾರದ ಮೇಲೆ ಅಲ್ಲಿನ ಸಣ್ಣ ಅಧಿಕಾರಿಗಳ ಕಣ್ಣು ಬಿದ್ದ ಹಾಗೆ ಕಾಣುತ್ತಿದೆ. ಯಾವುದೋ ಒಂದು ತಳಹದಿಯಮೇಲೆ ತಮ್ಮ ಅಧಿಕಾರಗಳನ್ನು ಪಟ್ಟ ಭದ್ರ

ಮಾಡಿಕೊಂಡು ರಾಜ್ಯದ ಸಂಪತ್ತನ್ನು ಒಂದೊಂದು ವಿಭಾಗಕ್ಕೆ ಹಂಚಿ ಏನೋ ಒಂದು ಉದ್ದೇಶ ವನ್ನು ಇಟ್ಟುಕೊಂಡು ಹೋಗುತ್ತಿದ್ದಾರೆ. ಈಗಾಗಲೇ ಜನರು ಸಂದೇಹ ಪಡುವಂತೆ ರಾಜಧಾನಿಯನ್ನು ಸಹ ಇನ್ನೊಂದು ಕಡೆ ಬದಲಾಯಿಸುವ ಒಂದು ಯೋಜನೆಯನ್ನು ಹಲವು ಅಧಿಕಾರದಲ್ಲಿರುವ ಪಕ್ಷ ನಾಯಕರು ಇಟ್ಟುಕೊಂಡು ಕೋಟ್ಯಾಂತರ ರೂಪಾಯಿಗಳನ್ನು ಖರ್ಚುಮಾಡಿ ವಿಧಾನ ಸೌಧದ ಕ್ಕಿಂತಲೂ ಹೆಚ್ಚಿನ ಖರ್ಚಿನ ದೊಡ್ಡ ದೊಡ್ಡ ಕಟ್ಟಡಗಳನ್ನು ಕಟ್ಟುವ ಯೋಜನೆಗಳನ್ನು ಹಾಕಿಕೊಂಡಿ ದ್ದಾರೆ. ಈ ದೃಷ್ಟಿಯಿಂದ ಹಳೆಯ ಮೈಸೂರು, ಮತ್ತು ಹೊಸ ಮೈಸೂರು ಎಂಬ ಭಾವನೆಗೆ ಕಾರಣವಾಗಿದೆ. ಈ ಸರ್ಕಾರ ಅಂಥಾದ್ದಕ್ಕೆಲ್ಲಾ ಅವಕಾಶವನ್ನು ಕೊಡಬಾರದು. ಈ ವಿಚಾರ ವನ್ನು ಬಹಳ ಸ್ಪಷ್ಟವಾಗಿ ಮತ್ತು ಗಂಭೀರವಾಗಿ ಯೋಚನೆ ಮಾಡಬೇಕಾಗಿದೆ. ಈ ವಿದ್ಯಾ ಯೋಜನೆ ಒಂದು ಮಹಾ ಸಮಸ್ಯೆಯಾದುದು ಆಗಿದೆ. ಇದು ಬಡವರಿಗೆ ಬೇಕಾದಂಥ ವಿದ್ಯಾ ಸವಲತ್ತನ್ನು ಒದಗಿಸುವ ಯಾವ ಒಂದು ಸಂಪಾದನೆ ಮಾಡಿಕೊಳ್ಳಬೇಕೋ ಅಂತಹ ಅವಕಾಶ ಏನೊಂದೂ ಈ ಯೋಜನೆಯಲ್ಲಿಲ್ಲ. ಮದ್ರಾಸಿನಲ್ಲಿ ಧರ್ಮಾರ್ಥವಾಗಿ ಹೈಸ್ಕೂಲು ಎಜುಕೇಷನ್ ಕೊಡುತ್ತಿದ್ದಾರೆಂದು ವಿದ್ಯಾ ಸಚಿವರು ಎಲ್ಲೋ ಒಂದು ಕಡೆ ಭಾಷಣಮಾಡಿದಾಗ ಅದರ ವರದಿ ಬಂದಿದೆ. ಅವರಲ್ಲಿ ಹಿಂದಿನಿಂದಲೇ ಸೇಲ್ಸ್ ಟ್ಯಾಕ್ಸ್ ಎಷ್ಟು ಇದೆಯೋ ಅದಕ್ಕಿಂತ ಕಡಿಮೆ ನಮ್ಮಲ್ಲಿ ಇದೆ ಹಾಗಾಗಿ ಹಣ ಜಾಸ್ತಿ ಸಂಪಾದನೆಯಿದೆ. ಸಚಿವರ ಈ ಹೇಳಿಕೆ ಸರಿಯಲ್ಲ, ಆದ್ದರಿಂದ ಇಲ್ಲಿಯೂ ಹೈಸ್ಕೂಲ್ ಎಜುಕೇಷನ್ನನ್ನು ಉಚಿತವಾಗಿ ಪೂರ್ತಿ ಏಕೆ ಕೊಡಬಾರದು? ಇದಕ್ಕಾಗಿ ಇನ್ನು ಹೆಚ್ಚುಕಡಿಮೆ 26 ಲಕ್ಷ ರೂಪಾಯಿಗಳು ಹೆಚ್ಚಿಗೆ ಬೇಕು. ನಾವು ದುರ್ವಿನಿಯೋಗ ಮಾಡುವಂತಹ ಲಕ್ಷಾಂತರ ರೂಪಾಯಿಗಳನ್ನು ಉಳಿಸಿ ಮದ್ರಾಸಿನಂತೆಯೇ ಅವಶ್ಯವಿರುವುದಕ್ಕಿಂತ ಜಾಸ್ತಿ ಮಂತ್ರಿಗಳ ಸಂಖ್ಯೆ ಕಡಿಮೆ ಮಾಡಿದರೆ ದೊಡ್ಡ ದೊಡ್ಡ ಅರಮನೆಗಳಂಥ ಕಟ್ಟಡಗಳಿಗೆ ಹಾಕುವ ಹಣ ವನ್ನು ಕಡಿಮೆ ಮಾಡಿ ಉಳಿಸಿ ಈಗ ಅವಶ್ಯಕವಾಗಿ ಬೇಕಾದಂಥ ವಿದ್ಯಾ ಸೌಕರ್ಯಗಳನ್ನು ಜನತೆಗೆ ಕೊಟ್ಟು ಆ ಮೂಲಕ ಎಸ್.ಎಸ್.ಎಲ್.ಸಿ. ತನಕ ಎಲ್ಲ ವಿದ್ಯಾರ್ಥಿಗಳಿಗೂ ಧರ್ಮಾರ್ಥವಾಗಿಯೇ ನಮ್ಮ ಸರ್ಕಾರದವರು ಏಕೆ ವಿದ್ಯಾಭ್ಯಾಸ ವಿಸ್ತರಣೆಮಾಡಬಾರದು ಎಂಬುದಾಗಿ ಕೇಳುತ್ತೇನೆ. ಮತ್ತೊಬ್ಬರು ಅವರ ರಾಜ್ಯದಲ್ಲಿ ಉತ್ತಮವಾಗಿ ಮಾಡಿದ್ದಾರೆ, ನಮಗೆ ಹಾಗೆ ಅವಕಾಶವಿಲ್ಲವೆಂದು ಹೇಳಬಾರದು. ಅದು ನಮ್ಮ ಅಶಕ್ತತೆಯನ್ನು ವ್ಯಕ್ತಪಡಿಸುತ್ತದೆ. ಈ ಬಗ್ಗೆ ಸರ್ಕಾರದ ಹೊಣೆ ಎಷ್ಟರಮಟ್ಟಿಗೆ ಇದೆಯೆ ಬುದನ್ನು ಸರ್ಕಾರ ಏತಕ್ಕೆ ಮರೆತಿದ್ದಾರೆಯೋ ಎಂಬುದನ್ನು ಸರ್ಕಾರ ದವರು ಇನ್ನಾದರೂ ತಿಳಿಯಬೇಕು. ಇವತ್ತಿನ ದಿವಸ ಸಾಮಾನ್ಯ ಜನರೆಂದರೆ ರೈತರು ಕೂಲಿ ಗಾರರೂ ಕೆಳದರ್ಜೆಯ ನೌಕರರು, ದಲಿತ ವರ್ಗದವರು, ಅವರಿಗೆ ಸಾಕಷ್ಟು ಉತ್ಪಾದನೆ ಇಲ್ಲ. ಅವರೇ ಸುಮಾರು ಶೇಕಡ 90 ರಷ್ಟು ಇದ್ದಾರೆಂದು ಹೇಳಬಹುದು. ನಮ್ಮ ಕಡೆ ಅನೇಕ ವರ್ಷ ಗಳಿಂದ ಈ ವರ್ಗದವರಲ್ಲಿ ಸಾಕಷ್ಟು ಉತ್ಪಾದನೆ ಇಲ್ಲ. ನಮ್ಮ ಕಡೆ ಇಂಥ ಟೆಕ್ನಿಕಲ್ ಮತ್ತು ಹೈಸ್ಕೂಲು ವಿದ್ಯಾಭ್ಯಾಸವನ್ನು ಪ್ರಾರಂಭಿಸಿದರೆ ಅದರಿಂದ ಅನೇಕರಿಗೆ ಹೆಚ್ಚಿನ ಪ್ರಯೋಜನ ವಾದೀತು. ಅದರ ಬಗ್ಗೆ ಸರ್ಕಾರದವರು ವಿಚಾರವಿನಿಮಯ ಮಾಡಬೇಕು. ಕೆಲವು ಕಡೆಗಳಲ್ಲಿ ಮುಖ್ಯವಾಗಿ ಬೆಂಗಳೂರು ಮತ್ತು ಹುಬ್ಬಳ್ಳಿ ಬೆಳಗಾಂಗಳಲ್ಲಿ ಆ ರೀತಿ ಸೌಲಭ್ಯವನ್ನು ಹೊಂದಲು ಅನುಕೂಲವಾಗಿದೆ. ಮತ್ತೆ ಕೆಲವು ಕಡೆಗಳಲ್ಲಿ ಕೇವಲ ಬಡವರೇ ಜಾಸ್ತಿಯಿರುವುದರಿಂದ ಹೈಸ್ಕೂಲು ಗಳನ್ನು ಕೊಡುವುದಕ್ಕೆ ಬಹಳ ತೊಂದರೆ ಇದೆ. ಹೈಸ್ಕೂಲುಗಳನ್ನು ಪ್ರಾರಂಭಿಸುವುದಕ್ಕೆ ಪ್ರಥಮ ರೂ. 5,000 ಸಂಗ್ರಹಿಸುವುದೂ ಕಷ್ಟವಿದೆ. ಕೆಲವೆಡೆ ಪರ್ಮಿಷನ್ ಕೊಟ್ಟಿದ್ದರೂ ರೆಕಗ್ನಿಷನ್ ಮಾರ್ಚಿ ತಿಂಗಳಲ್ಲಿಯೂ ಕೊಡುವುದಿಲ್ಲ, ಅಂದಮೇಲೆ ಇಂಥ ತೊಂದರೆಗಳನ್ನು ನಿವಾರಿಸಿ ಹೇಗೆ ಹೈಸ್ಕೂಲುಗಳನ್ನು ಪ್ರಾರಂಭಿಸುವುದು? ಕೆಲವೆಡೆ ಶಾಲೆಗೇನೋ ಮಂಜೂರಾತಿ ಇರುತ್ತದೆ. ಒಂದುವೇಳೆ ಗ್ರಾಂಟ್-ಇನ್-ಏಡ್ ಆರ್ಡರ್ ಬರುವುದು ನಿಧಾನವಾದರೆ ಅಂತಹ ಸಂದರ್ಭಗಳಲ್ಲಿ ಮೂರು ವರ್ಷಗಳಾದರೂ ಗ್ರಾಂಟು ಕೊಡುವುದಿಲ್ಲವೆಂದು ಹೇಳುತ್ತಾರೆ. ಆದ್ದರಿಂದ ಪ್ರತಿ ಹೈಸ್ಕೂಲು ಗಳಲ್ಲಿ ಪ್ರತಿ ವಿದ್ಯಾರ್ಥಿಯಿಂದ ವರ್ಷಕ್ಕೆ ಸಾಧಾರಣವಾಗಿ 40 ರೂಪಾಯಿಗಳನ್ನು ತೆಗೆದುಕೊಳ್ಳು ತ್ತಾರೆ. ಮೆಡಿಕಲ್, ಇಂಜನಿಯರಿಂಗ್ ಕಾಲೇಜುಗಳಲ್ಲಿ ವ್ಯಾಸಂಗ ಮಾಡುವುದರಿಂದ ಸುಮಾರು 10-15 ಸಾವಿರ ರೂಪಾಯಿಗಳನ್ನು ಪ್ರವೇಶ ಪಗಡಿ ತೆಗೆದುಕೊಳ್ಳುತ್ತಾರೆ. ಅದರ ವಿಷಯದಲ್ಲಿ ಜನರು ತಮ್ಮ ಮಕ್ಕಳ ವಿದ್ಯಾಭ್ಯಾಸದ ತಡೆಯ ಹೇಳಿಕೆಗಳು ಇದ್ದೇ ಇರುತ್ತವೆ. ಹೀಗಿದ್ದರೆ ಸಾಧಾರಣವಾಗಿ ಬಡವರ ಮಕ್ಕಳು ಹೆಚ್ಚಿನ ವಿದ್ಯಾಭ್ಯಾಸ ಪಡೆಯಲಿಕ್ಕೆ ಅವಕಾಶವಿರುತ್ತದೆಯೇ? ಇನ್ನು ಕಂಪಲ್ಸರಿ ಎಜುಕೇಷನ್ ಜಾರಿಗೆ ತಂದಿದ್ದೇವೆ ಎಂದು ಹೇಳುತ್ತಾರೆ. ನಮ್ಮಲ್ಲಿ ಒಂದು ವೆಲ್‌ಫೇರ್ ಶಾಲೆ ಇದೆ. ಅದರಲ್ಲಿ ಶಾಲಾ ಸ್ಥಳವೆಂದರೆ 54 ಮಕ್ಕಳನ್ನು ಅಲ್ಲಿ ಕೂಡಿಸಬಹುದು. ಆದರೆ ಅಲ್ಲಿ 150 ಮಕ್ಕಳನ್ನು ಪ್ರಾಣಿಗಳಂತೆ ತುಳ್ಳಿರಿಸಿದ್ದಾರೆ. ನಿತ್ಯ ಅಭಿವೃದ್ಧಿ ಹೊಂದುವ ಮಂಗಳೂರಿನ ಒಂದು ತಾಲ್ಲೂಕಿನ ಹೆಡ್‌ಕ್ವಾರ್ಟರ್ ನಗರದಲ್ಲಿರುವ ಒಂದು ಸ್ಕೂಲಿನಲ್ಲಿ ಮಕ್ಕಳನ್ನು ಈ ರೀತಿ ಪ್ರಾಣಿಗಳಂತೆ ತುಳ್ಳಿರಿಸಿದ್ದಾರೆ; ಅಲ್ಲದೆ ನಮ್ಮಲ್ಲಿ ಎಲಿಮೆಂಟರಿ ಸ್ಕೂಲು, ಕಮ್ಯೂನಿಟಿ

(ಶ್ರೀ ಗೋಪಾಲ ಸಾಲೆನ್ನ)

ಪ್ರಾಜೆಕ್ಟ್‌ಗೆ ಸಂಬಂಧಪಟ್ಟ ಸ್ಕೂಲುಗಳು—ಬೇಸಿಕ್ ಇತ್ಯಾದಿಶಾಲೆಗಳಿವೆ. ಆದರೆ ಇಂಥ ಒಂದೇ ಒಂದು ಬೇಸಿಕ್ ಸ್ಕೂಲು ಮಂಗಳೂರು ನಗರದ ವಶದಲ್ಲಿ ಇದೆ. ಆದರ ಮಟ್ಟ ನೋಡಿದರೆ ನನಗೆ ಬಹಳ ವ್ಯಥೆಯಾಗುತ್ತದೆ. ಏಕೆಂದರೆ ಅದಕ್ಕೆ ಬೇಕಾದ ಸೌಕರ್ಯ ಸೌಲತ್ತುಗಳೂ ಒಂದೂ ಇಲ್ಲ. ಇಲ್ಲಿ ಸಾಮಾನ್ಯ ಜನಗಳಿಗೆ ಕಣ್ಣಿಗೆ ಮಣ್ಣು ಹಾಕುವ ರೀತಿಯಲ್ಲಿ ಬೇಸಿಕ್ ಸ್ಕೂಲು ಎಂದು ತೋರಿಸಿ ಹೈಸ್ಕೂಲು ಎಜುಕೇಷನ್ನಿಗೆ ಹೋಗುವಂಥ ಅವಕಾಶವನ್ನು ತಡೆಯಾಗುವಂತೆ ಮಾಡಿಕೊಂಡು ಹೋಗುತ್ತಿದ್ದಾರೆ. ಈ ಎಲ್ಲಾ ಶಾಲೆಗಳಲ್ಲಿ ಕಟ್ಟಡಗಳಿಗೆ ಬೇಕಾದ ವ್ಯವಸ್ಥೆಯಿಲ್ಲ ಇಂಪ್ಲಿಮೆಂಟ್ಸ್ ಸರಿಯಾಗಿಲ್ಲ. ಈ ರೀತಿಯ ಕಡ್ಡಾಯ ವಿದ್ಯಾಭ್ಯಾಸ ಇದು ಎಂತಹ ದುಃಖಕರ ? ಮುಂದೆ ಮಕ್ಕಳನ್ನು ಯಾವ ರೀತಿಯಲ್ಲಿ ವಿದ್ಯಾವಂತರನ್ನಾಗಿ ಮಾಡುತ್ತಾರೋ ಗೊತ್ತಿಲ್ಲ. ಇದರಿಂದ ಇಂದಿನ ಚಿಕ್ಕ ಮಕ್ಕಳ ಬಾಲ್ಯ ಕಾಲವನ್ನು ನಷ್ಟಪಡಿಸಿ ಅವರೆಲ್ಲರ ವಿದ್ಯಾಭವಿಷ್ಯವನ್ನು ಕೆಡಿಸುವಂತಾಗಿದೆ.

ಸಂಜೀವನಾಥ್ ಐಕಳ.—ಬೆಂಗಳೂರು ಪಟ್ಟಣದಲ್ಲಿಯೇ ಬಚ್ಚಲುಮನೆಗಳ ಹತ್ತಿರ ಎಷ್ಟೋ ಕಡೆಗಳಲ್ಲಿ ತರಗತಿಗಳು ನಡೆಯುತ್ತವೆ.

ಶ್ರೀ ಗೋಪಾಲ ಸಾಲೆನ್ನ.—ಹೀಗಾಗಿ ಈ ಸರಕಾರದ ಕಂಪಲ್ಸರಿ ಸಬ್ಜೆಕ್ಟ್ ಎನ್ನುವುದು ಒಂದು ಫಾರ್ಸ್ ಆಗಿದೆ. ಅದು ಎಲ್ಲಿಯೂ ಪರಿಣಾಮಕಾರಿಯಾಗಿಲ್ಲ. ಆ ಬಗ್ಗೆ ರಚಿಸಲಾದ ಸ್ಕೂಲ್ ಕಮಿಟಿಗಳು ಚೆನ್ನಾಗಿ ಕೆಲಸಮಾಡುತ್ತಿವೆ ಎಂಬುದನ್ನೂ ಸಹ ನೋಡುವ ಹಾಗೆ ಇಲ್ಲ ವರ್ಷಗಟ್ಲೆ ಸಭೆ ಸೇರುವುದೇ ಇಲ್ಲ ಇದರ ಕಡೆಗೆ ಅಧಿಕಾರಿಗಳ ಲಕ್ಷವೇ ಇಲ್ಲ. ನಾನು ಇನ್ನೂ ಅನೇಕ ವಿಷಯಗಳನ್ನು ಹೇಳಬೇಕೆಂದಿದ್ದೆ. ಸಾಕಷ್ಟು ಸಮಯ ಅವಕಾಶ ಸಿಗಲಿಲ್ಲ.

ಇನ್ನೊಂದು ವಿಚಾರ. ಈ ಬಗ್ಗೆ ಚಿಕ್ಕಪುಟ್ಟಶಾಲೆಗಳ ಆಡಳಿತೆಯ ಸರಿಯಾದ ಸ್ಕ್ರೀನಿಂಗ್ ಕಮಿಟಿ ಮಾಡಿ ಎಲ್ಲೆಲ್ಲಿ ಲೋಪದೋಷಗಳಿವೆಯೋ ಅವನ್ನು ಒಂದು ಉತ್ತಮ ರೂಪದಲ್ಲಿ ತರಬೇಕೆಂದು ಹೇಳುತ್ತೇನೆ. ಆ ಒಂದು ಸ್ಕ್ರೀನಿಂಗ್ ಕಮಿಟಿಯೊಳಗೆ ಉತ್ತಮ ಪ್ರಜ್ಞರೂ ವಿದ್ಯಾಭಿಮಾನಿಗಳೂ ಸದಸ್ಯರು ಕೆಲವರು ಸೇರಿರಬೇಕು. ಅಂತಹ ಒಂದು ಕಮಿಟಿಯನ್ನು ಎಕ್ಸ್‌ಪರ್ಟ್ ಕಮಿಟಿಯನ್ನಾಗಿ ರಚನೆ ಮಾಡುವುದು ಅಗತ್ಯವೆಂದೂ ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

‡ಶ್ರೀ ಎಸ್. ಆರ್. ಕಂಠಿ.—ಸನ್ಮಾನ್ಯ ಅಧ್ಯಕ್ಷರೆ, ಇಷ್ಟು ಕಾಲದವರೆಗೆ ಸನ್ಮಾನ್ಯ ಸದಸ್ಯರು ತಂತಮ್ಮ ವಿಚಾರಗಳನ್ನು ಮತ್ತು ತಂತಮ್ಮ ಭಾವನೆಗಳನ್ನು ಈ ಸಭೆಯಲ್ಲಿ ವಿವರಿಸಿದ್ದಾರೆ. ಹಲವರು ಸೂಚನೆಗಳನ್ನು ಕೊಟ್ಟಿದ್ದಾರೆ. ಹಲವರು ಸೂಚನೆಗಳ ಜೊತೆಯಲ್ಲಿ ಭಾವನಾ ಪರವಶರಾಗಿ ಹೇಳಿದುದಲ್ಲದೆ ಹಲ್ಲಿ ನುಂಗಿದಹಾಗೆ ಸಂಶಯ ಪಟ್ಟುಕೊಂಡು ಮಾತನಾಡಿದ್ದಾರೆ. ಹಲ್ಲಿ ನುಂಗಿದವರು ಸಂಶಯ ಹೇಗೆ ಪಡುತ್ತಾರೋ ಹಾಗೆ ಕೆಲವರಿಗೆ ಆಗಿದೆ. ಇವೆಲ್ಲಕ್ಕೂ ನನಗೆ ಉತ್ತರ ಕೊಡುವುದಕ್ಕಾಗುವುದಿಲ್ಲ. ಆದರೆ ಮಾನ್ಯ ಸದಸ್ಯರು ಮಾತನಾಡುವಾಗ ಹೇಳಿದಂತಹ ಕೆಲವು ಸಲಹೆಗಳನ್ನು ಇಲ್ಲಿ ಬರೆದುಕೊಂಡಿದ್ದೇನೆ. ಅವುಗಳ ಬಗ್ಗೆವಿವರವಾಗಿ ಉತ್ತರ ಕೊಡಬೇಕೆಂದು ಯೋಚನೆ ಮಾಡಿದ್ದೇನೆ.

ಇದರಲ್ಲಿ ಮೊದಲನೆಯದು ಎಂದರೆ ಬಹಳಜನ ಹೈಸ್ಕೂಲು ಶಿಕ್ಷಣವನ್ನು ಮದ್ರಾಸಿನಲ್ಲಿ ಸಂಪೂರ್ಣವಾಗಿ ಮುಫತ್ತಾಗಿ ಮಾಡಿದ್ದಾರೆ. ಆದ್ದರಿಂದ ನಮ್ಮ ರಾಜ್ಯದಲ್ಲಿಯೂ ಹಾಗೆಯೇ ಮಾಡಿ ಎಂದು ಸೂಚನೆ ಮಾಡಿದ್ದಾರೆ.

ಇನ್ನು ಎರಡನೆಯದು ಏನೆಂದರೆ ನಮ್ಮ ಮೈಸೂರು ರಾಜ್ಯದಲ್ಲಿ ಶಾಲಾ ಕಟ್ಟಡಗಳ ಅಭಾವ ಬಹಳ ಇದೆ. ಇದು ಚೆನ್ನಾಗಿಲ್ಲ. ಇವುಗಳ ಕಡೆಗೆ ಗಮನ ಕೊಡಬೇಕು ಎಂದು ಹೇಳಿದ್ದಾರೆ.

ಮೂರನೆಯದು ಪ್ರಾಥಮಿಕ ವಿದ್ಯಾಭ್ಯಾಸದಲ್ಲಿ ಎನ್‌ರೋಲ್‌ಮೆಂಟ್ ಅಟೆಂಡೆನ್ಸ್ ಇಳಿದಿದೆ ಎನ್ನುವ ವಾದವನ್ನು ಹೇಳಿದ್ದಾರೆ. ಅದರ ಜೊತೆಯಲ್ಲಿ ವೇಸ್ಟೇಜ್ ಆಗುತ್ತಿದೆ ಎನ್ನುವ ಮಾತನ್ನು ಹೇಳಿದ್ದಾರೆ, ಸ್ಟ್ಯಾಗ್ನೇಷನ್ ಆಗುತ್ತಿದೆ ಎನ್ನುವ ಮಾತನ್ನೂ ಹೇಳಿದ್ದಾರೆ. ಹೈಸ್ಕೂಲು ವಿದ್ಯಾಭ್ಯಾಸದಲ್ಲಿ 11ನೇ ಸ್ಟ್ಯಾಂಡರ್ಡ್ ಮಾಡುತ್ತಿದ್ದೀರಿ, ಇದನ್ನು ಸ್ವಲ್ಪ ವಿಚಾರಮಾಡಿ ಮಾಡಿ. ಇದರಿಂದ ಮಕ್ಕಳಿಗೆ ಧಕ್ಕೆ ಆಗದಂತೆ ಮಾಡಿ ಎಂದು ಕೆಲವರು ಹೇಳಿದ್ದಾರೆ.

ಇನ್ನು ಬೆಂಗಳೂರಿನಲ್ಲಿ ಹೊಸದಾಗಿ ಸ್ಥಾಪನೆ ಮಾಡಬೇಕೆಂದಿರುವ ಯೂನಿವರ್ಸಿಟಿಯ ವಿಷಯವನ್ನು ಕೆಲವರು ಸ್ವಾಗತ ಮಾಡಿದ್ದಾರೆ. ಮತ್ತೆ ಕೆಲವರು ಆ ಬಗ್ಗೆ ಒಂದು ಬಿಲ್ಲನ್ನು ಈ ಸಭೆಯಲ್ಲಿ ತರಲಿಲ್ಲ, ಒಂದು ರಿಪೋರ್ಟನ್ನು ಈ ಸಭೆಯಮುಂದೆ ಇಡಲಿಲ್ಲ ಎನ್ನುವ ವಾದವನ್ನು ಹೇಳಿದ್ದಾರೆ.

ಇನ್ನು ಟೆಂಪರರಿಯಾಗಿ ಯೂನಿವರ್ಸಿಟಿಯಲ್ಲಿ ಕೆಲಸ ಮಾಡುತ್ತಿರುವ ಲೆಕ್ಚರರುಗಳ ವಿಚಾರ ಬಂತು. ಈ ವಿಚಾರದಲ್ಲಿ ಕೆಲವು ಮಾನ್ಯ ಸದಸ್ಯರು ಬಹಳಮಟ್ಟಿಗೆ ಟೀಕೆಯನ್ನು ಮಾಡಿದ್ದಾರೆ. ಈ ವಿಷಯದಲ್ಲಿ ಇನ್ನು ಮುಂದೆ ಸುಪ್ರೀಮ್ ಕೋರ್ಟಿಗೆ ಹೋಗಬೇಡಿ ಎಂದು ಕೆಲವು ಮಾನ್ಯ ಸದಸ್ಯರು ಹೇಳಿದ್ದಾರೆ. ನಮ್ಮ ಹಿಂದಿನ ಮಾಜೀ ವಿದ್ಯಾಮಂತ್ರಿಗಳಾದ ಶ್ರೀಮಾನ್ ಅಣ್ಣಾರಾವ

ಗಣಮುಖಿಯವರು ಹೇಳಿದ್ದನ್ನು ನಾನು ಅತ್ಯಂತ ಲಕ್ಷ್ಯಪೂರ್ವಕವಾಗಿ ಕೇಳಿದ್ದೇನೆ. ಅವರು ಬಹಳ ಒಳ್ಳೆಯ ವಿಚಾರಗಳನ್ನು ಪ್ರತಿಪಾದನೆ ಮಾಡಿದ್ದಾರೆ. ಅವರು ಕೆಲವು ತಪ್ಪುಗಳನ್ನು ತೋರಿಸಿದ್ದಾರೆ ಹಾಗೂ ಆ ತಪ್ಪುಗಳನ್ನು ಯಾವ ರೀತಿ ತಿದ್ದಿಕೊಳ್ಳಬೇಕು ಎನ್ನುವ ವಿಷಯವನ್ನೂ ಹೇಳಿದ್ದಾರೆ. ಆಲ್ ಇಂಡಿಯಾ ಎಜುಕೇಷನ್ನಿಗೆ ಸೇರಬೇಡಿ ಎಂದು ಹೇಳಿದ್ದಾರೆ. ಟೆಕ್ಸ್ಟ್ ಬುಕ್‌ಗಳ ನ್ಯಾಷನಲೇಜೇಷನ್ ವಿಚಾರವನ್ನು ಹೇಳಿದ್ದಾರೆ.

ಆಮೇಲೆ ಶ್ರೀಮಾನ್ ಎಸ್. ಎಂ. ಕೃಷ್ಣ ಅವರು ಬೆಟರ್‌ಮೆಂಟ್ ಕಮಿಟಿಯ ವಿಚಾರವನ್ನು ಹೇಳಿದ್ದಾರೆ. ಈ ನಾನಾ ತರಹ ವಿಚಾರಗಳನ್ನು ನಾನು ಈಗ ತಮ್ಮ ಮುಂದೆ ವಿವರಿಸಬೇಕಾಗಿದೆ. ಅವುಗಳನ್ನು ವಿವರಿಸುವುದಕ್ಕೆ ಮುಂಚೆ ಮೂರನೇ ಪಂಚವಾರ್ಷಿಕ ಯೋಜನೆಯಲ್ಲಿ 3ನೇ ವರ್ಷಗಳ ಕಾಲದಲ್ಲಿ ಯಾವ ಯಾವ ಕೆಲಸಗಳು ಆಗಿವೆ ಮತ್ತು ಟಾರ್ಗೆಟ್ ಅಚೀವ್‌ಮೆಂಟ್ ಏನು ಎನ್ನುವ ವಿಷಯದಲ್ಲಿ ಪ್ರೈಮರಿ ಸ್ಕೂಲು ಮಟ್ಟಿಗೆ ನಾನು ಹೇಳುತ್ತೇನೆ. ಈಗ ಮೂರನೆಯ ಪಂಚವಾರ್ಷಿಕ ಯೋಜನೆಯಲ್ಲಿ 1961 ನೇ ಇಸವಿಯಿಂದ 1966 ರ ವರೆಗೆ 16 ಸಾವಿರ ಜನ ಶಿಕ್ಷಕರನ್ನು ನೇಮಿಸಬೇಕೆಂದು ಗೊತ್ತುಮಾಡಿದ್ದೇವೆ. ಮೊದಲನೆಯ ವರ್ಷ 1961-62 ನೇ ಇಸವಿಯಲ್ಲಿ 4,537 ಶಿಕ್ಷಕರನ್ನು ನೇಮಿಸಿಕೊಂಡಿದ್ದೇವೆ. 1962-63 ರಲ್ಲಿ ಎರಡು ಸಾವಿರ ಜನ ಉಪಾಧ್ಯಾಯರನ್ನು ತೆಗೆದುಕೊಂಡಿದ್ದೇವೆ. ಈ ವರ್ಷ 4,350 ಜನ ಶಿಕ್ಷಕರನ್ನು ತೆಗೆದುಕೊಂಡಿದ್ದೇವೆ. ಈಗ ಒಟ್ಟು 3 ವರ್ಷಗಳಿಂದ 10,887 ಜನ ಶಿಕ್ಷಕರನ್ನು ತೆಗೆದುಕೊಂಡಿದ್ದೇವೆ. ಇನ್ನು ಎರಡು ವರ್ಷಗಳಲ್ಲಿ 6 ಸಾವಿರ ಜನ ಶಿಕ್ಷಕರನ್ನು ತೆಗೆದುಕೊಳ್ಳಬೇಕಾಗಿದೆ. ಅದರಲ್ಲಿ ಹೊಸದಾಗಿ ಎರಡು ಸಾವಿರ ಸ್ಕೂಲ್ಸ್ ಓಪನ್ ಮಾಡಬೇಕೆಂದು ಟಾರ್ಗೆಟ್ ಇಟ್ಟುಕೊಂಡಿದ್ದೆವು. ಫಿಜಿಕಲ್ ಟಾರ್ಗೆಟ್ ಮೊದಲನೆಯ ವರ್ಷ 1,741 ಸ್ಕೂಲುಗಳು, ಎರಡನೆಯ ವರ್ಷ 500 ಸ್ಕೂಲುಗಳು, ಈ ವರ್ಷ 450 ಸ್ಕೂಲುಗಳು. ಈ ರೀತಿ ಸ್ಕೂಲುಗಳನ್ನು ತೆರೆಯಬೇಕೆಂದು ಟಾರ್ಗೆಟ್ ಇಟ್ಟುಕೊಂಡಿದ್ದೆವು. ಈಗ ನಾವು ಒಟ್ಟು 2,691 ಸ್ಕೂಲುಗಳನ್ನು ತೆರೆದಿದ್ದೇವೆ. ಮೂರನೆಯ ಪಂಚವಾರ್ಷಿಕ ಯೋಜನೆಯಲ್ಲಿ ಒಂದೊಂದು ವರ್ಷ ಎನ್‌ರೋಲ್‌ಮೆಂಟ್ ಎಷ್ಟು ಇತ್ತು ಎನ್ನುವುದನ್ನು ಲೆಕ್ಕ ಹಾಕಿದ್ದೇವೆ. 1961ನೇ ಇಸವಿಯಿಂದ 1966 ನೇ ಇಸವಿಯವರೆಗೆ 2.44 ಲಕ್ಷ ಜನ ಗಂಡು ಹುಡುಗರು ಟಾರ್ಗೆಟ್ ಮುಟ್ಟಬೇಕೆಂದು ಇತ್ತು. ಅದರಲ್ಲಿ 1961-62 ನೇ ಸಾಲಿನಲ್ಲಿ 1.84 ಲಕ್ಷ ಆಗಿದೆ. 1962-63 ರಲ್ಲಿ ಒಂದು ಲಕ್ಷ ಆಗಿದೆ. 1963-64 ರಲ್ಲಿ ಒಂದು ಲಕ್ಷ ಆಗಿದೆ. ಒಟ್ಟು 3 ವರ್ಷಗಳಲ್ಲಿ 3.84 ಲಕ್ಷ ಜನ ಗಂಡು ಹುಡುಗರು ಟಾರ್ಗೆಟ್ ಮುಟ್ಟಿದ್ದಾರೆ. ಇನ್ನು ಹೆಣ್ಣುಮಕ್ಕಳನ್ನು 7.56 ಲಕ್ಷ ಜನರನ್ನು ಶಾಲೆಗೆ ಕಳುಹಿಸಬೇಕೆಂದು ಮಾಡಿದ್ದೆವು. ಅದರಲ್ಲಿ ಮೊದಲನೆಯ ವರ್ಷ ಒಂದು ಲಕ್ಷ 99 ಸಾವಿರ ಜನ ಹೆಣ್ಣುಮಕ್ಕಳು ಶಾಲೆಗೆ ಸೇರಿದ್ದಾರೆ. ಎರಡನೆಯ ವರ್ಷ ಒಂದು ಲಕ್ಷ ಜನ ಸೇರಿದ್ದಾರೆ. ಮೂರನೆಯ ವರ್ಷ ಒಂದು ಲಕ್ಷ ಜನ ಸೇರಿದ್ದಾರೆ. ಒಟ್ಟು 3 ವರ್ಷಗಳಲ್ಲಿ 3.99 ಲಕ್ಷ ಜನ ಸ್ಕೂಲಿಗೆ ಸೇರಿದ್ದಾರೆ. ನಾವು ಒಟ್ಟು 10 ಲಕ್ಷ ಜನ ವಿದ್ಯಾರ್ಥಿಗಳನ್ನು ಸ್ಕೂಲಿಗೆ ಸೇರಿಸಬೇಕೆಂದು ಒಂದು ಗುರಿಯನ್ನು ಹಾಕಿಕೊಂಡಿದ್ದೆವು. ಈಗ ಅದರಲ್ಲಿ 7.83 ಲಕ್ಷ ಜನ ಹುಡುಗರು ಮತ್ತು ಹುಡುಗಿಯರನ್ನು ಎನ್‌ರೋಲ್ ಮಾಡಿದ್ದೇವೆ.

ಆಮೇಲೆ ಸೀನಿಯರ್ ಪ್ರೈಮರಿ ಸ್ಕೂಲುಮಟ್ಟಿಗೆ ಈ ಯೋಜನೆಯಲ್ಲಿ 4 ಸಾವಿರ ಜನ ಉಪಾಧ್ಯಾಯರನ್ನು ತೆಗೆದುಕೊಳ್ಳಬೇಕೆಂದು ಮಾಡಿದ್ದೆವು. ಅದರಲ್ಲಿ ಮೊದಲನೆಯ ವರ್ಷ 1,153 ಜನ ಉಪಾಧ್ಯಾಯರನ್ನೂ, ಎರಡನೆಯ ವರ್ಷ 800 ಜನ ಉಪಾಧ್ಯಾಯರನ್ನೂ ತೆಗೆದುಕೊಂಡಿದ್ದೇವೆ. ಈ ವರ್ಷ ಯಾರನ್ನೂ ತೆಗೆದುಕೊಂಡಿಲ್ಲ. ಈಗ ಒಟ್ಟು 3 ವರ್ಷಗಳಲ್ಲಿ 1,953 ಜನ ಉಪಾಧ್ಯಾಯರನ್ನು ತೆಗೆದುಕೊಂಡಿದ್ದೇವೆ. 1,700 ಶಾಲೆಗಳನ್ನು ಅಪ್‌ಗ್ರೇಡ್ ಮಾಡಬೇಕೆಂದಿದ್ದೆವು. ಅದರಲ್ಲಿ ಮೊದಲನೆಯ ವರ್ಷ 584 ಸ್ಕೂಲುಗಳನ್ನು ಅಪ್‌ಗ್ರೇಡ್ ಮಾಡಿದ್ದೇವೆ. ಎರಡನೆಯ ವರ್ಷ 797 ಸ್ಕೂಲುಗಳನ್ನು ಅಪ್‌ಗ್ರೇಡ್ ಮಾಡಿದ್ದೇವೆ. ಮೂರನೆಯ ವರ್ಷ ಯಾವುದೂ ಮಾಡಿಲ್ಲ. ಅಂತೂ ಒಟ್ಟು 3 ವರ್ಷಗಳಲ್ಲಿ 845 ಸ್ಕೂಲುಗಳನ್ನು ಅಪ್‌ಗ್ರೇಡ್ ಮಾಡಿದ್ದೇವೆ.

ಸೀನಿಯರ್ ಪ್ರೈಮರಿ ಸ್ಕೂಲುಗಳಲ್ಲಿ ನಮ್ಮ ಗುರಿ ಹುಡುಗರು ಒಂದು ಲಕ್ಷ, ಹುಡುಗಿಯರು ಒಂದು ಲಕ್ಷ, ಒಟ್ಟು ಎರಡು ಲಕ್ಷ ಇದ್ದುದರಲ್ಲಿ ಈಗಾಗಲೇ 1,40,000 ಮಾಡಿದ್ದೇವೆ. ಇನ್ನು 60,000 ಮಾಡಿದರೆ ನಮ್ಮ ಪ್ಲಾನ್ ಟಾರ್ಗೆಟ್ ಮುಟ್ಟಿದ ಹಾಗೆ ಆಗುತ್ತದೆ.

ಬೇಸಿಕ್ ಎಜುಕೇಷನ್‌ನಲ್ಲಿ ಮಾತ್ರ ನಾವು ಬಹಳ ಹಿಂದೆ ಇದ್ದೇವೆ. ಬೇಸಿಕ್ ಮಾದರಿ ಶಾಲೆಗಳನ್ನು 2,500 ಮಾಡಬೇಕಾಗಿತ್ತು. ಅದರಲ್ಲಿ ನಾವು ಕೇವಲ 500 ಮಾಡಿದ್ದೇವೆ. ಉಳಿದುದನ್ನು ಮಾಡುವುದಕ್ಕೆ ಆಗಿಲ್ಲ.

ಓರಿಯೆಂಟೇಷನ್ ಟ್ರೈನಿಂಗ್ ಸೆಂಟರ್ಸ್ ಐದು ಮಾಡಬೇಕೆಂದಿದ್ದೆವು. ಅದರ ಪೈಕಿ ಎರಡನ್ನು ಮಾಡಿದ್ದೇವೆ, ಮೂರು ಮಾಡಬೇಕಾದ್ದು ಇದೆ. ಮುಂದಿನ ಎರಡು ವರ್ಷಗಳಲ್ಲಿ ಮಾಡುತ್ತೇವೆ.

(ಶ್ರೀ ಎಸ್. ಆರ್. ಕಂಠಿ)

ಟೀಚರ್ಸ್ ಟ್ರೈನಿಂಗ್ ಇನ್‌ಸ್ಟಿಟ್ಯೂಷನ್ಸ್ ನಾಲ್ಕು ಮಾಡಬೇಕೆಂದಿದ್ದೆವು. ನಾಲ್ಕೂ ಪೂರ್ತಿಯಾಗಿವೆ. ಮೂರನೆಯ ಯೋಜನೆಯಲ್ಲಿ ಇನ್ನು ಹೆಚ್ಚಿಗೆ ಮಾಡುವುದಕ್ಕಾಗುವುದಿಲ್ಲ. ಇಂಡಿಯಾ ಸರ್ಕಾರದವರು ನಾಲ್ಕನೆಯ ಯೋಜನೆಯಲ್ಲಿ 12 ಟೀಚರ್ಸ್ ಟ್ರೈನಿಂಗ್ ಕಾಲೇಜುಗಳನ್ನು ಕೊಡುವವರಿದ್ದಾರೆ. ಅದರಲ್ಲಿ ನಾವು ಪ್ರಿಲಿಮಿನರಿಯಾಗಿ ಎಂದು ತಿಳಿದು ಮುಂದಿನ ವರ್ಷ 12 ಕಾಲೇಜುಗಳನ್ನು ಪ್ರಾರಂಭ ಮಾಡುತ್ತೇವೆ. ಅವುಗಳಲ್ಲಿ 8 ಹಳೆಯ ಮೈಸೂರಿನಲ್ಲಿಯೂ, ನಾಲ್ಕು ವಿಲೀನಗೊಂಡ ಪ್ರದೇಶದಲ್ಲಿಯೂ ಮಾಡುತ್ತೇವೆ ಎಂದು ತಿಳಿಯಪಡಿಸುತ್ತೇನೆ. ಇವೆಲ್ಲ ಸರ್ಕಾರದಿಂದ ನಡೆಸಲ್ಪಡುತ್ತವೆ. ಕೇಂದ್ರ ಸರ್ಕಾರದವರು ಶೇಕಡ ನೂರರಷ್ಟು ಗ್ರ್ಯಾಂಟ್ ಕೊಡುತ್ತಾರೆ.

ಈ ಮನೆಯಲ್ಲಿ, ರಾಜ್ಯದ ಯಾವ ಯಾವ ಭಾಗದಲ್ಲಿ ಎಷ್ಟು ಹೈಸ್ಕೂಲುಗಳಿವೆ ಎಂದು ಕೇಳಿದರು. ರಾಜ್ಯದಲ್ಲಿರುವಂಥ ಒಟ್ಟು 1,250 ಹೈಸ್ಕೂಲುಗಳಲ್ಲಿ 550 ಗ್ರಾಮಾಂತರ ಪ್ರದೇಶಗಳಲ್ಲಿವೆ, ಸುಮಾರು 700 ಪಟ್ಟಣಗಳಲ್ಲಿವೆ. ಯಾವ ಯಾವ ಭಾಗದಲ್ಲಿ ಎಷ್ಟು ಎಂದು ಕೇಳಿದ್ದಾರೆ ಅದನ್ನೂ ಹೇಳುತ್ತೇನೆ. ಹಳೇ ಮೈಸೂರಿನಲ್ಲಿ 700 ಇವೆ ಮತ್ತು ವಿಲೀನವಾದ ಭಾಗಗಳಲ್ಲಿ 550 ಇವೆ. ಈಗಿನ ಯೋಜನೆಯಲ್ಲಿ ಇಂಡಿಯಾ ಸರ್ಕಾರದವರು 10 ಸರ್ಕಾರಿ ಹೈಸ್ಕೂಲುಗಳನ್ನು ಪ್ರಾರಂಭ ಮಾಡುವುದಕ್ಕೆ ಅವಕಾಶ ಕೊಟ್ಟಿದ್ದಾರೆ. ಅದರಲ್ಲಿ ಈಗಾಗಲೇ 7 ಹೈಸ್ಕೂಲುಗಳನ್ನು ಪ್ರಾರಂಭ ಮಾಡಿದ್ದೇವೆ ; ಐದು ಹಳೆ ಮೈಸೂರಿನಲ್ಲಿ, ಒಂದು ಮುಂಬೈ ಕರ್ಣಾಟಕದಲ್ಲಿ, ಒಂದು ಹೈದರಾಬಾದು ಕರ್ಣಾಟಕದಲ್ಲಿ ಹೀಗೆ ಮಾಡಿದ್ದೇವೆ. ಇನ್ನು ಮೂರನ್ನು ಪ್ರಾರಂಭ ಮಾಡಬೇಕಾಗಿದೆ, ಮಾಡುತ್ತೇವೆ.

ಶ್ರೀ ಎಸ್. ಗೋಪಾಲ ಗೌಡ.—ಮಾನ್ಯ ವಿದ್ಯಾ ಸಚಿವರು ಅಂಕಿ ಸಂಖ್ಯೆಗಳನ್ನು ಕೊಡುವಾಗ ಹಳೆ ಮೈಸೂರು, ಹೊಸ ಮೈಸೂರು ಎಂದು ಹೇಳುತ್ತಿದ್ದಾರೆ. ಈ ದೇಶದಲ್ಲಿ ಅಭಿಪ್ರಾಯವಿರುವುದು ಹಳೆ ಮೈಸೂರು, ಹೊಸ ಮೈಸೂರು ಎನ್ನುವ ಒಡಕು ಧ್ವನಿಯನ್ನು ಬಿತ್ತಿದವರು ಶ್ರೀಮಾನ್ ಕಂಠಿಯವರು ಎಂದು. ಅಂಕಿ ಸಂಖ್ಯೆಗಳನ್ನು ಬೇಕಾದರೆ ಜಿಲ್ಲಾವಾರು ಕೊಡಲಿ. ಹಳೆ ಮೈಸೂರು, ಹೊಸ ಮೈಸೂರು ಎಂದು ಹೇಳುವುದು ಬೇಡ.

ಶ್ರೀ ಎಸ್. ಆರ್. ಕಂಠಿ.—ಅದನ್ನು ಬಿತ್ತಿದವನು ನಾನಲ್ಲ. ವಿರೋಧಪಕ್ಷದಲ್ಲಿರುವ ನೀವೇ ಬಿತ್ತಿದ್ದೀರಿ.

ಶ್ರೀ ಎ. ಕೃಷ್ಣ ಶೆಟ್ಟಿ.—ಮಂತ್ರಿಗಳು ಆ ರೀತಿ ದೂರಲು ಸಾಧ್ಯವಿಲ್ಲ ಸ್ವಾಮಿ.

ಶ್ರೀ ಎಸ್. ಆರ್. ಕಂಠಿ.—ಹಳೇ ಮೈಸೂರಿನವರು ಬಿತ್ತಿದ್ದಾರೆ. ಅದಕ್ಕಾಗಿ ನಾನು ಹೇಳಬೇಕಾಗಿದೆ.

ಶ್ರೀ ಎಸ್. ಗೋಪಾಲ ಗೌಡ.—ತಾವೇ ಬಿತ್ತಿದವರು ಎನ್ನುವ ಭಾವನೆ ಬಂದಿದೆ.

ಶ್ರೀ ಎಸ್. ಆರ್. ಕಂಠಿ.—ನಾನು ಎಲ್ಲವನ್ನೂ ಹೇಳುತ್ತೇನೆ. ಅದರಲ್ಲಿ ತಪ್ಪುಗಳಿದ್ದರೆ ತೋರಿಸಿಕೊಡಲಿ. ತಪ್ಪು ಇದ್ದರೆ ಅದಕ್ಕೆ ನಾನು ವಿವರಣೆ ಕೊಡುತ್ತೇನೆ.

ಯಾವರೀತಿ ನೋಡಿದರೂ ಕೂಡ ಹಳೇ ಮೈಸೂರಿಗೆ ಅನ್ಯಾಯವಾಗಿದೆ ಹಾಗಾಗಿದೆ, ಹೀಗಾಗಿದೆ ಎಂದು ಹೇಳುವುದು ಬಹಳ ತಪ್ಪು. ಕೆಲವರು............

ಶ್ರೀ ಎಸ್. ಗೋಪಾಲ ಗೌಡ.—ಮತ್ತೆ ಹಳೇ ಮೈಸೂರು ಎನ್ನುವ ರಾಗ ಹಾಡುತ್ತಾರಲ್ಲ ಸ್ವಾಮಿ ಇವರು. ಆ ರೀತಿಯ ಮಾತು ಎತ್ತುವುದು ನಿಲ್ಲಬೇಕು,

Sri S. R. KANTHI.—I am not yielding, Sir. ಗ್ರ್ಯಾಂಟ್ ಇನ್ ಎಡ್ ಕೂಡ ಎಲ್ಲ ಕಡೆಗೂ ಒಂದೇ ರೀತಿ ಇದೆ. ಮೈಸೂರಿಗೆ ಅನ್ಯಾಯವಾಗಿದೆ ಎಂದು ಮಾನ್ಯ ಸದಸ್ಯರು ಹೇಳುವುದು ತಪ್ಪು.

ಶ್ರೀ ಎಸ್. ಗೋಪಾಲ ಗೌಡ.—10% ಏಕೆ ಖೋತಾ ಮಾಡಿದಿರಿ ?

Sri S. SIVAPPA.—How is the grant-in-aid given to Primary Schools in Bombay area.

Sri S. R. KANTHI.—I will come to that.

ಶ್ರೀ ಎಸ್. ಗೋಪಾಲ ಗೌಡ.—ಗ್ರ್ಯಾಂಟನ್ನು ಕೊಡುವುದರಲ್ಲಿ ನೂರಕ್ಕೆ 10 ರಂತೆ ಖೋತಾ ಮಾಡಿದ್ದಾರೆ. ಇದಕ್ಕೆ ಕಮಿಟಿಯನ್ನೇನಾದರೂ ಮಾಡಿದ್ದರೆ, ಯಾವರೀತಿ ಖೋತಾ ಮಾಡಿದರು ?

Mr. SPEAKER.—Order, order.

**Sri S. R. KANTHI.**—Sir, let me have my say. If the Hon'ble Members feel any doubt, they may ask questions at the end I will answer. What I am saying is, during the last two years, if anybody proves that old Mysore has suffered and the integrated areas have gained. I am willing to convince them.

**Sri S. SIVAPPA.**—Sir, there seems to be a plot on the part of the Ministry to divide Mysore. Yesterday, the Public Works Minister supplied figures dividing the State and to-day the Education Minister is also giving figures on the same basis. I highly object. They are spliting the answer and spliting the State

**Sri S. R. KANTHI.**—Sir, Sri Narayana Gowda and Sri Madappa Gowda also raised that point.

ಶ್ರೀ ಎಸ್. ಗೋಪಾಲ ಗೌಡ.—ಸ್ವಾಮಿ, ನಾನು ತಮ್ಮ ಮೂಲಕ ಮಾನ್ಯ ಸಚಿವರಿಗೆ, ಈ ಮಾನ್ಯ ಸಭೆಯ ಪರವಾಗಿ ಒಂದು ನಮ್ರ ಸಲಹೆಯನ್ನು ಕೊಡಬಯಸುತ್ತೇನೆ. ಏನೆಂದರೆ ಹಳೇ ಮೈಸೂರು, ಹೊಸ ಮೈಸೂರು ಎನ್ನುವ ಬಗ್ಗೆ ತಪಾಸಣೆ ಮಾಡುವುದಾದರೆ ತಾವೂ ಮತ್ತು ಶ್ರೀಮಾನ್ ನಿಜಲಿಂಗಪ್ಪನವರೂ ಸೇರಿ ಒಂದು ಜವಾಬ್ದಾರಿಯುತವಾದ ಸಮಿತಿಯನ್ನು ರಚನೆ ಮಾಡಿ ಅದು ಎಲ್ಲ ಇಲಾಖೆಗಳಿಗೆ ಸಂಬಂಧಪಟ್ಟ ಹಾಗೆ ಇನ್‌ವೆಸ್ಟಿಗೇಟ್ ಮಾಡಿ ತೋರಿಸಿ ಕೊಡಲಿ. ಆದರೆ ಪ್ರತಿಯೊಬ್ಬ ಮಂತ್ರಿಗಳೂ ಪ್ರತಿ ಮಾತಿಗೂ ಹಳೇ ಮೈಸೂರು ಭಾಗದಲ್ಲಿ ಹೀಗೆ ಮಾಡಿದ್ದೇವೆ. ಬೇರೆ ಭಾಗದಲ್ಲಿ ಹೀಗೆ ಮಾಡಿದ್ದೇವೆ ಎಂದು ಹೇಳುವುದಾದರೆ ಅದು ಈ ಸಭೆಗೆ ಶೋಭೆಯನು ತರುವುದಿಲ್ಲ, ಇದರಿಂದ ಕಿರಿಕಿರಿಯಾಗುತ್ತದೆ. ಆದುದರಿಂದ ಈ ಒಡಕು ಧ್ವನಿಯನ್ನು ಆದಷ್ಟು ಕಡಮೆ ಮಾಡಬೇಕೆಂದು ಹೇಳುತ್ತೇನೆ. ಅಂಕಿ ಸಂಖ್ಯೆಗಳನ್ನು ಕೊಡುವಾಗ ಜಿಲ್ಲಾವಾರು ಹೇಳಲ್ಲಿ

ಶ್ರೀ ಎ. ಜೆ. ದೊಡ್ಡಮೇಟಿ (ರೋಣ್).—ಸ್ವಾಮಿ, ಮಾನ್ಯ ಗೋಪಾಲ ಗೌಡರು ಹೇಳಿದ್ದು ಸರಿ ಎಂದು ನನ್ನ ಅಭಿಪ್ರಾಯ. ಆ ರೀತಿಯಲ್ಲಿ ಎರಡೂ ಕಡೆ ಜನರೂ ಮಾತನಾಡಬಾರದು. ಎಲ್ಲರಲ್ಲಿಯೂ ಒಳ್ಳೆಯ ಭಾವನೆ ಬರಬೇಕು ಎನ್ನುವ ಕಾರಣಕ್ಕಾಗಿ ಶ್ರೀಮಾನ್ ಗೋಪಾಲ ಗೌಡರು ಹೇಳಿದ ಹಾಗೆ ಎರಡು ಭಾಗದವರೂ ರಾಜ್ಯದ ವಿಭಜನೆಯ ವಿಚಾರ ಹೇಳಬಾರದೆಂದು ವಿನಂತಿ ಮಾಡಿಕೊಳ್ಳಬೇಕೆಂದು ಹೇಳುತ್ತೇನೆ.

ಶ್ರೀ ಎಸ್. ಆರ್. ಕಂಠಿ.—ರಾಜ್ಯದ ಯಾವ ಭಾಗಕ್ಕಾದರೂ ಈಗಿರುವ ಸೆಕೆಂಡರಿ ಎಜುಕೇಷನ್ ಕೋಡ್ ನಿಂದ ಅನ್ಯಾಯ ಮಾಡುವುದಕ್ಕಾಗುವುದಿಲ್ಲ. ಎಲ್ಲರಿಗೂ ಸಮಾನವಾಗಿರುತ್ತದೆ. ಒಬ್ಬರಿಗೆ ಮುಂಗಡವಾಗಿ ಗ್ರಾಂಟನ್ನು ಕೊಡುವಂಥ ಪ್ರಶ್ನೆ ಬರುವುದೇ ಇಲ್ಲ. ಹೊಸ ಕೋಡ್ ಪ್ರಕಾರ ಮೂರು ತಿಂಗಳಿಗೆ ಗ್ರಾಂಟ್ ಕೊಡಬೇಕು. ಪ್ರತಿಯೊಬ್ಬರಿಗೂ ಅಡ್ವಾನ್ಸಾಗಿ ಗ್ರಾಂಟ್ ಮತ್ತು ಫೀ ಕಾಂಪೆನಸೇಷನ್ ಎರಡನ್ನೂ ಲೆಕ್ಕ ಪತ್ರ ನೋಡಿಕೊಂಡು ಕೊಡುತ್ತೇವೆ. ಇದರಲ್ಲಿ ಯಾರಿಗಾದರೂ ಸಂಶಯವಿದ್ದರೆ ಅದು ಶುದ್ಧ ತಪ್ಪು.

ಶಾಲಾ ಕಟ್ಟಡಗಳನ್ನು ಇಲ್ಲಿಯೂ ಕಟ್ಟಿಲ್ಲ, ಎಲ್ಲಿಯೂ ಕಟಿಲ್ಲ. ಸರ್ಕಾರದಲ್ಲಿ ದುಡ್ಡಿಲ್ಲದಕ್ಕೆ ಎಲ್ಲಿಯೂ ಶಾಲಾ ಕಟ್ಟಡಗಳನ್ನು ಕಟ್ಟಿಲ್ಲ. ಈ ಬಗ್ಗೆ ಕೇಂದ್ರ ಸರ್ಕಾರಕ್ಕೆ ಬರೆದು ಶಾಲಾ ಕಟ್ಟಡಗಳಿಗಾಗಿ ಸಾಲದ ರೂಪದಲ್ಲಿ ದುಡ್ಡು ಕೊಡದೆ ಇದ್ದರೆ ನಿಮ್ಮ ಸ್ಕೂಲ್ ಬಿಲ್ಡಿಂಗ್ ಪ್ರೋಗ್ರಾಂ ಬಿದ್ದು ಹೋಗುತ್ತದೆ ಎಂದು ತಿಳಿಸಿ ಸಾಲ ಕೊಡಬೇಕೆಂದು ಕೇಳಿಕೊಂಡಿದ್ದೇನೆ. ಅವರು ಕೊಡುವುದಕ್ಕೆ ಮುಂದೆ ಬಂದಿದ್ದಾರೆ. ಆ ಹಣ ಬಂದ ಮೇಲೆ ಅದನ್ನು ಹಂಚಬೇಕು ಎಂದು ಹೇಳುತ್ತೇನೆ.

ಪ್ರಾಥಮಿಕ ವಿದ್ಯಾಭ್ಯಾಸವೇದರೇನೆಂದು ಕೇಳಿದರು. ಇದು ಒಂದೊಂದು ಕಡೆ ಒಂದೊಂದು ರೀತಿ ಇದೆ. ದಕ್ಷಿಣ ಕನ್ನಡದಲ್ಲಿ ಟೀಚಿಂಗ್ ಗ್ರಾಂಟ್ ಶೇಕಡ 100 ರಷ್ಟು ಕೊಡುತ್ತಾರೆ, ಮೇಂಟಿನೆನ್ಸ್ ಗ್ರಾಂಟ್ ಸಿಕ್ಕಿಲ್ಲ ಎಂದು ಹೇಳಿದರು. ಅದನ್ನು ಕೊಡಬೇಕೆಂದು ನಾವು ನೆನ್ನೆಯ ದಿವಸ ನಿರ್ಣಯ ತೆಗೆದುಕೊಂಡಿದ್ದೇವೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಶೇಕಡ ನೂರರಷ್ಟು ಗ್ರಾಂಟ್ ಏಕೆ ಎಂದು ಕೇಳಿದಾಗ, ನಾವೂ ಬಳ್ಳಾರಿಯವರೂ ಎಜುಕೇಷನ್ ಸೆಸ್ ಕೊಡುತ್ತೇವೆ ಅದರಿಂದ ನಮಗೆ ತೆಗೆದುಕೊಳ್ಳಲು ಅಧಿಕಾರವಿದೆ ಎಂದು ಹೇಳಿದರು, ಹಳೆಯ ಮೈಸೂರು ಪ್ರದೇಶದಲ್ಲಿ ಈ ಸೆಸ್ ಕೊಡುವುದಿಲ್ಲ ಆದುದರಿಂದ ಇಷ್ಟು ತೆಗೆದುಕೊಳ್ಳುವುದಿಲ್ಲ ಎಂದು ಹೇಳಿದರು. ದಕ್ಷಿಣ ಕನ್ನಡದವರು ಒಂದು ರೂಪಾಯಿಗೆ 3 ಆಣೆ ಎಜುಕೇಷನ್ ಸೆಸ್ ಕೊಡುತ್ತಿದ್ದೇವೆ ಎಂದು ಹೇಳಿದರು.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ನಮ್ಮ ಪಟ್ಟೆ ಬರೆದು ಕೊಡುವಾಗ, ಅದರಲ್ಲಿ ಲೋಕಲ್ ಸೆಸ್, ಎಜುಕೇಷನ್ ಸೆಸ್, ಎಂದು ಬರೆಯುತ್ತಾರೆ.

ಶ್ರೀ ಎಸ್. ಆರ್. ಕಂಠಿ.—ಹಾಗಲ್ಲ, ಅದು ಬೇರೆ. ಡಿಸ್ಟ್ರಿಕ್ಟ್ ಬೋರ್ಡ್‌ನವರು ಶಾಲೆಗಳನ್ನು ನಡೆಸುತ್ತಿದ್ದರು, ಆಗ ಶೇಕಡ 96 ರಷ್ಟು ಕೊಡುತ್ತಿದ್ದೆವು, ಅವರು ಲೋಕಲ್ ಸೆಸ್ ತೆಗೆದುಕೊಂಡು ತಮ್ಮ ಶಾಲೆಗಳನ್ನು ನಡೆಸಲೆಂದು ಕೊಡುತ್ತಿದ್ದೆವು. ಬೊಂಬಾಯಿ ಕರ್ಣಾಟಕ, ದಕ್ಷಿಣ ಕನ್ನಡ, ಬಳ್ಳಾರಿ ಇಲ್ಲಿರುವ ಕಾನೂನಿನ ಪ್ರಕಾರ ಅಲ್ಲಿನ ಪ್ರೈಮರಿ ಸ್ಕೂಲುಗಳನ್ನು ಅಲ್ಲಿನ ಮುನಿಸಿಪಾಲಿಟಿಗಳೇ ನಡೆಸಬೇಕಾಗಿದೆ. ಅಲ್ಲಿ ಶೇಕಡ 50 ರಷ್ಟು ಕೊಡುತ್ತಾರೆ. ಉಡುಪಿ, ಕಾರ್ಕಳ, ಬಿಜಾಪುರ ಅಲ್ಲೆಲ್ಲ ಹೀಗೆಯೇ ಕೊಡುತ್ತಿದ್ದಾರೆ. ಇನ್ನು 50 ರಷ್ಟು ಅವರು ಹಾಕಿ ನಡೆಸಬೇಕು. 6 ಲಕ್ಷ ರೂಪಾಯಿ ಖರ್ಚು ಮಾಡುತ್ತಿದ್ದಾರೆ. ಹೀಗೆ ಬೇರೆಬೇರೆ ಇರುವುದನ್ನು ಒಂದೇ ರೀತಿ ಮಾಡಬೇಕೆಂದು ಇಚ್ಛೆ ಇರುವುದರಿಂದ ಈ ದಿಶೆಯಲ್ಲಿ ಪ್ರಯತ್ನ ಮಾಡುತ್ತಿದ್ದೇವೆ. ಕೊಂಡಜ್ಜಿ ಬಸಪ್ಪ ಸಮಿತಿಯ ವರದಿ ಬಂದಿದೆ. ನಾವು ಶಕ್ಯವಿರುವುದನ್ನು ಮಾಡಿದ್ದೇವೆ. ಕೆಲವು ರೂಲ್ಸ್ ಬದಲಾವಣೆ ಮಾಡಿ ಒಂದೇ ರೀತಿ ಗ್ರಾಂಟು ಕೊಡಬೇಕೆಂದು ಯೋಚನೆ ಮಾಡಿದ್ದೇವೆ. ಹೀಗೆ ಅಡಚಣೆಗಳನ್ನು ಸಾವಕಾಶವಾಗಿ ಯೋಚನೆ ಮಾಡಿ ನಿವಾರಣೆ ಮಾಡಬೇಕಾಗುತ್ತದೆ. ದಕ್ಷಿಣ ಕನ್ನಡ ಮತ್ತು ಬೊಂಬಾಯಿ ಕರ್ಣಾಟಕ ಪ್ರದೇಶದಲ್ಲಿ ಪ್ರಾವಿಡೆಂಟ್ ಫಂಡ್ ವ್ಯವಸ್ಥೆ ಇದೆ, ಪೆನ್ಷನ್ ಇಲ್ಲ; ಆದುದರಿಂದ ಟ್ರಿಪ್ಪಲ್ ಬೆನಿಫಿಟ್ ಯೋಜನೆ ಮಾಡಿದ್ದೇವೆ. ಯಾವ ಭಾಗದಲ್ಲಿರಲಿ ಎಲ್ಲರಿಗೂ ಈ ಸೌಲಭ್ಯ ದೊರಕಬೇಕೆಂದು ಇದನ್ನು ಒಪ್ಪಿಕೊಂಡಿದ್ದೇವೆ.

ಶ್ರೀ ಸಂಜೀವನಾಥ ಐಕಳ.—ನಮ್ಮ ದಕ್ಷಿಣ ಕನ್ನಡದಲ್ಲಿ ಕಾಲೇಜು ಫೀ ಎರಡರಷ್ಟಿದೆ.

ಶ್ರೀ ಎಸ್. ಆರ್. ಕಂಠಿ.—ಮಾನ್ಯ ಸದಸ್ಯರು ಜೂನಿಯರ್ ಮತ್ತು ಸೀನಿಯರ್ ಪ್ರೈಮರಿ ಸ್ಕೂಲುಗಳು ಮತ್ತು ಬೇಸಿಕ್ ಸ್ಕೂಲುಗಳು ಎಷ್ಟಿವೆ ಎಂದು ಕೇಳಿದರು, ಅದನ್ನು ಹೇಳುತ್ತೇನೆ.

| | |
|---|---|
| Total number of Junior Primary Schools ... | 19,890 |
| Number of schools in Rural areas ... ... | 17,151 |
| Percentage of Rural area schools ... ... | 85.8 |
| Schools in Own buildings ... ... ... | 7,733 |
| ,, Rented buildings ... ... ... | 1,802 |
| ,, Rent-free buildings ... ... ... | 9,253 |
| ,, Gift buildings ... ... ... | 493 |
| ,, Hired buildings ... ... ... | 609 |
| Total number of Senior Primary Schools ... | 6,171 |
| Number of schools in Rural areas .. ... | 4,963 |
| Percentage of Rural area schools ... ... | 80.4 |
| Schools in Own buildings ... ... ... | 3,741 |
| ,, Rented buildings ... ... ... | 1,417 |
| ,, Rent-free buildings ... ... ... | 786 |
| ,, Gift buildings ... ... ... | 101 |
| ,, Shift buildings ... ... ... | 66 |
| Total number of Basic Schools ... ... | 3,313 |
| Number of schools in Rural areas ... ... | 2,615 |
| Percentage of Rural area schools ... ... | 78.9 |
| Schools in Own buildings ... ... ... | 2,194 |
| ,, Rented buildings ... ... ... | 622 |
| ,, Rent-free buildings ... ... ... | 407 |
| ,, Gift buildings ... ... ... | 90 |
| No shift buildings. | |
| Total number of Primary Schools in the State including pre-primary schools ... ... | 29,374 |
| Number of schools in Rural areas ... ... | 24,721 |
| Percentage of Rural area schools ... ... | 84.2 |

| | | | | |
|---|---|---|---|---|
| Schools in Own buildings | ... | ... | ... | 13,668 |
| ,, Rented buildings | ... | ... | ... | 3,441 |
| ,, Rent-free buildings | ... | ... | ... | 10,446 |
| ,, Gift buildings | ... | ... | ... | 444 |
| ,, held in shifts | ... | ... | ... | 675 |

ಈ ಅಂಕಿ ಅಂಶಗಳನ್ನು ನೋಡಿದರೆ ನಾವು ಗ್ರಾಮಾಂತರ ಪ್ರದೇಶವನ್ನು ನಿರ್ಲಕ್ಷಿಸಿಲ್ಲವೆಂಬುದು ಸ್ಪಷ್ಟವಾಗುತ್ತದೆ.

ಟೆಂಪೊರರಿ ಲೆಕ್ಚರರುಗಳ ವಿಷಯ ಬಂತು. ಶ್ರೀ ಎಸ್. ಎಂ. ಕೃಷ್ಣ ಅವರು ಮಾತನಾಡುವಾಗ ಸರಕಾರಕ್ಕೆ ಅವರಿಗಿಂತ ಯಾವ ರೀತಿಯಿಂದಲೂ ಸಹಾನುಭೂತಿ ಕಡಮೆ ಇಲ್ಲವೆಂದು ಹೇಳಿದೆ. ದುರ್ದೈವದಿಂದ ಯಾವ ಪತ್ರಿಕೆಯಲ್ಲಿಯೂ ಈ ವಿಷಯ ಪ್ರಕಟವಾಗಲಿಲ್ಲ. ಸರಕಾರದ ನಿಲುವೆಯನ್ನು ಹೇಳುವ ಕಾಲಕ್ಕೆ, ಮುಖ್ಯ ವಿಷಯವನ್ನು ಬಿಟ್ಟು ಸರಕಾರದ ಧೋರಣೆ ತಿಳಿಯದೇಯಿರುವ ಹಾಗೆ ಪತ್ರಿಕೆಗಳು ಪ್ರಕಟ ಮಾಡಿದರೆ ಕಷ್ಟವಾಗುತ್ತದೆ. ತಾವು ಈ ವಿಷಯವನ್ನು ಪತ್ರಿಕೆಗಳವರಿಗೆ ಹೇಳಬೇಕೆಂದು ಪ್ರಾರ್ಥಿಸುತ್ತೇನೆ. ಏಕೆಂದರೆ ಈ ಸಭೆಯಲ್ಲಿ ಏನು ನಡೆಯುತ್ತದೆಯೋ ಅದು ಸಂಪೂರ್ಣವಾಗಿ ಪತ್ರಿಕೆಗಳಲ್ಲಿ ಬರಬೇಕು ಸಂಪೂರ್ಣ ಚಿತ್ರ ಬರಬೇಕು. ಹಾಗಿಲ್ಲದೆ, ಪೂರ್ಣವಾಗಿ ಹಾಕದೆ ಏನೋ ನಾಲ್ಕು ಮಾತುಗಳನ್ನು ಹಾಕಿದರೆ ಸರಕಾರದ ಧೋರಣೆ ಜನರಿಗೆ ಗೊತ್ತಾಗುವುದಿಲ್ಲ. ಆದುದರಿಂದ ಇಂತಹ ಪ್ರಶ್ನೆ ಬಂದಾಗ ಈ ಸಮಸ್ಯೆಯನ್ನು ಬಿಡಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಸ್. ಗೋಪಾಲಗೌಡ.—ಸ್ವಾಮಿ, ಒಂದು ಕ್ರಿಯಾಲೋಪವನ್ನು ಸೂಚಿಸಬಯಸುತ್ತೇನೆ. ತಮ್ಮ ಮೂಲಕ ಅಥವಾ ಸಭೆಯ ಮೂಲಕ ಟ್ರೆಜರಿ ಬೆಂಚಿನವರು ಅಥವಾ ಮುಖ್ಯ ಮಂತ್ರಿಗಳು ನಾಲ್ಕನೆಯ ಎಸ್ಟೇಟ್ ಆದ ಪತ್ರಿಕೆಗಳಿಗೆ ಅಥವಾ ಪ್ರೆಸ್‌ಗೆ ಸಲಹೆ ಮಾಡಬಹುದೆ ? ಅವರು ಬೇರೆ ವಿಷಯಗಳಲ್ಲಿ ಪತ್ರಿಕೆಗಳನ್ನು ಕೇಳಿಕೊಳ್ಳಬಹುದು. ತನ್ನ ವಿಷಯವನ್ನು, ತನ್ನ ಮಾತನ್ನು ಹೀಗೆ ಹೇಳಿ ಎಂದು ಹೇಳಬಹುದು. ಅದು ಬಿಟ್ಟು, ಏಕೆ ಹೀಗೆ ಹಾಕಿದರು ಎಂದು ತಮ್ಮ ಮೂಲಕ ಈ ಸಭೆಯ ಮಾತನ್ನು, ಈ ಸಭೆಯ ಸುದ್ದಿಯನ್ನು ಪತ್ರಿಕೆಗಳವರಿಗೆ ಹೇಳುವುದು ಸಮಂಜಸವಾಗಲಾರದು. ತಮ್ಮ ಅಧಿಕಾರ ವ್ಯಾಪ್ತಿಯನ್ನು ಮೀರಿ ಬೇರೆಯವರಿಗೆ ಬುದ್ಧಿಯನ್ನು ಹೇಳುವುದು ಉಚಿತವಲ್ಲವೆಂದು ನನ್ನ ಭಾವನೆ.

6-00 P.M.

ಶ್ರೀ ಎಸ್. ಆರ್. ಕಂಠಿ.—ಶ್ರೀಮಾನ್ ಗೋಪಾಲಗೌಡರ ವಿಚಿತ್ರ ಬುದ್ಧಿಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ. ನಾನು ಹೇಳಿದ್ದು ಇಷ್ಟೇ. ಸರಕಾರದ ನಿಲುವೆ ಏನು ಇದೆ ಎಂಬುದನ್ನು ಪ್ರಕಟಿಸುವಾಗ್ಗೆ ಸಂಪೂರ್ಣ ಸಬ್‌ಸ್ಟೆನ್ಸ್ ಬರುವ ಹಾಗೆ ಪತ್ರಿಕೆಗಳಲ್ಲಿ ಹಾಕಬೇಕು.

**Mr. SPEAKER.**—Whatever is reported should be faithful and full. Even if it is a gist, or substance, it should be faithful.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಸ್ವಾಮಿ, ಇವರು ಗಂಟೆಗೆ ಒಂದು ಸ್ಟೇಟ್‌ಮೆಂಟು ದಿನಾಲು ಕೊಟ್ಟರೆ ಏನು ಮಾಡಬೇಕು ? ಸ್ವಾಮಿ, ಇವರ ಕೈಯಲ್ಲಿ ವಿದ್ಯಾ ಇಲಾಖೆ ಹಾಳಾಗಿ ಹೋಗುತ್ತಿದೆ. ದಯವಿಟ್ಟು ಅದನ್ನು ಟ್ರಾನ್ಸ್‌ಫರ್ ಮಾಡಿ ನೀವು ತೆಗೆದುಕೊಳ್ಳಿ ಮತ್ತು ಅವರನ್ನು ನಿಮ್ಮ ಸ್ಥಾನಕ್ಕೆ ಏತಕ್ಕೆ ಹಾಕಬಾರದು ? ಇದನ್ನು ನಾನು ತಮಗೆ ಅಪೀಲು ಮಾಡಿಕೊಳ್ಳುತ್ತೇನೆ.

**Mr. SPEAKER.**—Not to be made on the floor of the House.

ಶ್ರೀ ಎಸ್. ಆರ್. ಕಂಠಿ.—ಈ ಹೌಸ್‌ನಲ್ಲಿಯ ಪ್ರೊಸೀಡಿಂಗ್ಸ್ ಫೇಥ್‌ಫುಲ್ಲಾಗಿ ರಿಪೋರ್ಟ್ ಆಗಬೇಕು. ಇಲ್ಲಿ ನಡೆಯುವುದು ವಿಪರ್ಯಾಸವಾಗಿ ಪತ್ರಿಕೆಗಳಲ್ಲಿ ಬರುವ ಹಾಗೆ ಆಗಬಾರದು.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಹಾಗಾದರೆ ಸರಕಾರದ ಇನ್‌ಫರ್ಮೇಶನ್ ಡಿಪಾರ್ಟ್‌ಮೆಂಟ್ ಇದೆ. ಎಲ್ಲವನ್ನೂ ನೀವೇ ಪ್ರಿಂಟ್ ಮಾಡಿ ಹಂಚಬಹುದಲ್ಲವೇ ?

**Mr. SPEAKER.**—How many persons have criticised him ? He is a single soul tryi g to reply.

**Sri C. J. MUCKANNAPPA.**—22 crores of rupees are going to be given to him. We are not giving you a pie.

**Mr. SPEAKER.**—No more jokes, please. There is no time.

ಶ್ರೀ ಎಸ್. ಆರ್. ಕಂಠಿ.—ಟೆಂಪೊರರಿ ಲೆಕ್ಚರರ್ಸ್ ವಿಚಾರ ನಾನು ಹೇಳುತ್ತಿದ್ದೆನು. ಕಾಲೇಜುಗಳು ಯೂನಿವರ್ಸಿಟಿಗೆ ಬಂದುದು 1960ರಲ್ಲಿ. ಅಗ್ಗೆ ಲೆಕ್ಚರರ್ಸ್ ಸಹ ಬಂದದ್ದು. ಅಲೋಕೇಶನ್ ಮೊದಲು ಮಾಡಬೇಕಾಗಿದೆ. ಇದಕ್ಕಾಗಿ ಕಮಿಟಿ ನೇಮಕ ಮಾಡಿದೆ. ಅವರು ಕೆಲಸ ಮಾಡಿದ್ದಾರೆ. ಸರಕಾರ ವಿಚಾರ ಮಾಡಿ ಫೈನಲ್ಲಾಗಿ ಒಂದು ಆರ್ಡರ್ ಮಾಡಿದ್ದಾರೆ. ಯಾವ ಲೆಕ್ಚರರ್ ಎಲ್ಲಿ ಉಳಿಯುತ್ತಾನೋ ಅಲ್ಲಿ ಇದು ಅನ್ವಯಿಸಲಾಗುತ್ತದೆ.

Sri S. SIVAPPA.—Are you going to allocate the temporary lecturers to lower cadre ?

Mr. SPEAKER.—I am not allowing these questions.

Sri S. R. KANTHI.—There are not merely temporary lecturers appointed by the Government, but there are temporary lecturers appointed by the University. They have come here as a legacy. When we got 16 colleges we also got these lecturers, readers and temporary lecturers. They are temporary even in the university as well. We also appointed temporary lecturers.

ನಾನು ಮುಖ್ಯ ಮಂತ್ರಿಯಾಗಿದ್ದಾಗ್ಗೆ ಈ ವಿಚಾರ ಪರಿಶೀಲನೆಗೆ ಬಂದಿತ್ತು. ಹಿಂದಿನ ಕ್ಯಾಬಿನೆಟ್ಟು ಒಂದು ನಿರ್ಣಯ ಮಾಡಿದ್ದರು. ಕ್ಲಾಸ್ ಟೂ ಬಗ್ಗೆ ಇಂಪ್ಲಿಮೆಂಟ್ ಮಾಡಿದರೆ ಎಲ್ಲ ಲೆಕ್ಚರರ್ಸ್ ಔಟ್ ಆಫ್ ಜಾಬ್ ಆಗುತ್ತಾರೆ, ಇದಲ್ಲದೆ ಎಲ್ಲರೂ ಪಿ. ಎಸ್. ಸಿ. ಮುಂದೆ ಮತ್ತೆ ಹೋಗಬೇಕಾಗುತ್ತದೆ ಆದುದರಿಂದ ಈ ಕೆಲಸ ಮಾಡದೆ ಮಿಥೋಲ್ಡ್ ಮಾಡಬೇಕೆಂದು ಹೇಳಿದರು. ಇದಲ್ಲದೆ ಪಿ. ಎಸ್. ಸಿ. ಯವರಿಗೆ ರೆಗ್ಯುಲರೈಜ್ ಮಾಡಲು ರಿಕ್ವೆಸ್ಟ್ ಮಾಡಿದೆವು. ಕೇಡರ್ ರೂಲ್ಸ್ ಮಾಡದೆ ರೆಗ್ಯುಲರೈಜ್ ಮಾಡಲು ಆಗುವುದಿಲ್ಲ ಎಂದು ಅವರು ಹೇಳಿದರು. ನಾವು ಹೇಗಾದರೂ ಮಾಡಿ ಕೇಡರ್ ರೂಲ್ಸ್ ಮಾಡಿ ಪಿ ಎಸ್. ಸಿ.ಗೆ ಕಳಿಸಿದ್ದೇವೆ. ಈಗ ಅದು ಫೈನಲೈಜ್ ಆಗಿದೆ. ಕ್ಯಾಬಿನೆಟ್ ಮುಂದೆ ಡಿಸ್ಕಶನ್‌ಗೆ ಹೋಗುತ್ತದೆ. ಅದು ಆದಮೇಲೆ ಲೆಕ್ಚರರ್ಸ್ ವಿಚಾರದಲ್ಲಿ ರೆಗ್ಯುಲರೈಜ್ ಮಾಡಬೇಕಾಗುತ್ತದೆ. ಇಷ್ಟರಲ್ಲಿ ಹೈ ಕೋರ್ಟಿನಿಂದ ಒಂದು ಆರ್ಡರ್ ತೆಗೆದುಕೊಂಡು ಬಂದರು. ಆ ಆರ್ಡರ್ ಇಂಪ್ಲಿಮೆಂಟ್ ಮಾಡಬೇಕೆಂದು ಸದಸ್ಯರು ಹೇಳಿದರು. ಯಾವ ಆರ್ಡರ್ ಆಗಲಿ ಇಂಪ್ಲಿಮೆಂಟ್ ಮಾಡಬೇಕಾದರೆ ಅದಕ್ಕೆ ಒಂದು ಪ್ರೊಸೀಜರ್ ಇದೆ. ಮೊದಲು ಅದು ಲಾ ಡಿಪಾರ್ಟ್‌ಮೆಂಟಿಗೆ ಹೋಗಬೇಕು, ಅಡ್ವೋಕೇಟ್ ಜನರಲ್ ಅವರ ಅಭಿಪ್ರಾಯ ಕೇಳಬೇಕು. ಅವರಿಬ್ಬರೂ ಇಂಪ್ಲಿಮೆಂಟ್ ಮಾಡಿ ಎಂದು ಹೇಳಿದರೆ ಇಂಪ್ಲಿಮೆಂಟ್ ಮಾಡಬೇಕಾಗುತ್ತದೆ. ಇಲ್ಲವಿದ್ದರೆ ಹೈ ಕೋರ್ಟ್ ನಿರ್ಣಯದಮೇಲೆ ಸುಪ್ರೀಂ ಕೋರ್ಟಿಗೆ ಅಪೀಲು ಹೋಗುವುದಕ್ಕೆ ಅವಕಾಶ ಇದೆ ಎಂದು ಅವರು ಅಭಿಪ್ರಾಯ ಪಟ್ಟರೆ ಸರಕಾರ ಸುಪ್ರೀಂ ಕೋರ್ಟಿಗೆ ಅಪೀಲು ಹೋಗಬೇಕಾಗುತ್ತದೆ. ಇನ್ನೂ ಸುಪ್ರೀಂ ಕೋರ್ಟಿಗೆ ಹೋಗಿಲ್ಲ. ಸುಪ್ರೀಂ ಕೋರ್ಟಿಗೆ ಅಪೀಲು ಹೋಗುವುದಕ್ಕೆ ಹೈ ಕೋರ್ಟಿನಲ್ಲಿ ಪರ್ಮಿಶನ್ ಕೇಳಿದ್ದೇವೆ. ಈ ವಿಚಾರ ಮತ್ತು ಲೆಕ್ಚರರ್ಸ್ ಪ್ರಶ್ನೆ ಇದಕ್ಕೂ ಅದಕ್ಕೂ ಏನೂ ಸಂಬಂಧವಿಲ್ಲ. ಈ ಮಾತನ್ನು ಅವರು ನನ್ನ ಹತ್ತಿರ ಬಂದಾಗ್ಗೆ ಕೂಡ ಅವರಿಗೆ ಹೇಳಿದ್ದೇನೆ. That involves a principle. The Education Department every year employs thousands of teachers on temporary basis and if we agree to the decision of High Court, it will involve the Government in crores of rupees expenditure.

Sri C. J. MUCKANNAPPA.—If the Supreme Court also gives the same decision, what will you do ?

ಶ್ರೀ ಎಸ್. ಆರ್. ಕಂಠಿ.—ದೇವರು ಮರಣ ತಂದರೆ ಸಾಯಬೇಕಾಗುತ್ತದೆ. ಬರೀ ಕಾಯಿಲೆ ಬಂದರೆ ನಾವು ಔಷಧ ತೆಗೆದುಕೊಳ್ಳುವುದು ಬೇಡವೇ ?

Sri S. SIVAPPA.—Does the Government want to reduce senior lecturers to lower cadre ?

ಶ್ರೀ ಎಸ್. ಆರ್. ಕಂಠಿ.—ನೀವು ಬರೀ ಮಾತನಾಡಿ ಸಿಂಪಥೀ ತೋರಿಸಬೇಡಿ. ಸುಮ್ಮನೆ ಏನಾದರೂ ಹೇಳಬಾರದು. ಈ ವಿಚಾರದಲ್ಲಿ ಸರಕಾರ ಧೈರ್ಯದಿಂದ ಕೆಲಸ ಮಾಡುತ್ತದೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ನನಗೆ ಅನಿಸುತ್ತದೆ ನಿಮಗೆ ಒಳ್ಳೆಯದು ಹೇಳುವವರು ಯಾರೂ ಇಲ್ಲವೇ ?

ಶ್ರೀ ಎಸ್. ಗೋಪಾಲಗೌಡ.—ಅವರು ಈ ಸಭೆಯ ಅಧ್ಯಕ್ಷರಾಗಿದ್ದರು. ಅನುಭವ ಇದೆ. ಇದಲ್ಲದೆ ವಯಸ್ಸೂ ಆಗಿದೆ.

ಅಧ್ಯಕ್ಷರು.—ಅವರಿಗೆ ಈಗ ಯೌವನ ಬಂದಿದೆ.

Sri S. R. KANTHI.—We have to be led by the Law Department and the Advocate General. I have also told him that so far as the question of regularisation is concerned, Government is sympathetic and it has not got anything to do with going to the Supreme Court or the High Court. Government will do something after the Cadre and Recruitment Rules are finalised.

ಇಷ್ಟು ಹೇಳಿದರೂ ಕೂಡ ಎಜುಕೇಷನ್ ಮಿನಿಸ್ಟರ್ ಅಡಮೆಂಟ್ ಅಂತ ಹೇಳುತ್ತಾರೆ ಏನೂ ಅಡಮೆಂಟ್ ಇಲ್ಲ.

Education has to be made free in all secondary school ಅಂತ ಹೇಳಿದ್ದಾರೆ. ಹೀಗೆ ಮಾಡಬೇಕೆಂದು ನಮಗೆ ಎಷ್ಟೇ ಮನಸಿದ್ದರೂ ಕೂಡ ದುಡ್ಡಿನ ಪ್ರಶ್ನೆ ಇದೆ; ಆ ಬಗ್ಗೆ ಯೋಚನೆ ಮಾಡೋಣ. ಈ ಮಾನ್ಯ ಸಭೆಯಲ್ಲಿ ಎಲ್ಲರೂ ಅವನ್ನು ಹೇಳಿದರೂ ಸರಕಾರಕ್ಕೆ ನಾನಾ ತರಹ ತೊಂದರೆ ಇರುವುದರಿಂದ ಇದು ಆದೀತು ಎನ್ನುವ ಧೈರ್ಯ ನನಗಿಲ್ಲ. ನೀವು ಹೇಳಿದ ಮಾತನ್ನು ಸರಕಾರ ಗಮನದಲ್ಲಿ ಇಟ್ಟು ಕೊಳ್ಳುತ್ತದೆ.

ಬೆಂಗಳೂರು ಯೂನಿವರ್ಸಿಟಿ ವಿಚಾರವಾಗಿ ಒಂದು ರಿಪೋರ್ಟು ಕೊಟ್ಟಿದೆ. ಏನೇ ಒಂದು ಕಾರಣದಿಂದ ಅದು ಇಲ್ಲಿ ಡಿಸ್‌ಕಸ್ ಆಗಿಲ್ಲ. ಬಿಲ್ಲು ಸಭೆಯ ಮುಂದೆ ಬರುತ್ತದೆ. ಆವಾಗ ತಮಗೂ ಒಂದು ಆಪರ್ಚುನಿಟಿ ಸಿಗುತ್ತದೆ. ವಾದಗ್ರಸ್ತ ಅಂತ ತಿಳಿದುಕೊಂಡಿದ್ದೀರ ದುಡ್ಡು ಇದಕ್ಕೆ ಎಲ್ಲಿಂದ ತರುತ್ತೀರ ಅಂತ ಹೇಳಬಹುದು. ದುಡ್ಡು ಇದಕ್ಕೆ ಬಹಳ ಬೇಕಾಗಿಲ್ಲ. ನಾನು ದೇಹಲಿಯಿಂದ ಬಂದಿದ್ದೇನೆ, ದೇಹಲಿಯಲ್ಲಿ ಒಳ್ಳೆಯ ವಾತಾವರಣ ಬೆಂಗಳೂರು ಯೂನಿವರ್ಸಿಟಿ ಬಗ್ಗೆ ಇದೆಯೆಂದು ನಾನು ಭಾವಿಸುತ್ತೇನೆ.

ಇನ್ನು text bookಗಳ ವಿಚಾರವಾಗಿ ಬಹಳ ಮಾತನಾಡಿದರು. ಬಹಳ ಅಕ್ರಮ ನ್ಯಾಷನಲೈಸ್ ಮಾಡಿರುವುದರಿಂದ ನಡೆಯುತ್ತಿದೆ ಎಂದು ಹೇಳಿದರು. ಜನಗಳೂ ಹಾಗೆಯೇ ಹೇಳುತ್ತಾ ಇದ್ದಾರೆ. ಆದರೆ ಅಕ್ರಮದ ಸೇವನ್ನು ಕಡಿಮೆ ಮಾಡಬೇಕೆಂದು ನ್ಯಾಷನಲೈಸ್ ಮಾಡಿಬಿಟ್ಟರೆ ಸವಿಯಾಗುತ್ತದೆ ಮತ್ತು ಎಲ್ಲಾ ಕಡೆಗೂ ಸುಲಭವಾಗಿ ಸಿಗುತ್ತದೆಂಬ ಉದ್ದೇಶದಿಂದ ಮಾಡಿದ್ದೇವೆ. ಶ್ರೀ ಅಣ್ಣಾರಾವ್‌ರವರು ಎಜುಕೇಷನ್ ಮಿನಿಸ್ಟರ್ ಆಗಿದ್ದಾಗ 55 ಪುಸ್ತಕಗಳನ್ನು ಮಾಡಿದ್ದಾರೆ; ಅದನ್ನು ನಾವು ಈಗ 105 ಮಾಡಬೇಕೆಂದಿದ್ದೇವೆ. ಅವರು ನಮಗೆ ಇದರಲ್ಲಿ ಬಹಳ ದೂರ ಹೋಗಬೇಡಿ ಎಂದು ಕಾಷನ್ ಕೊಟ್ಟಿದ್ದಾರೆ. ಅವರು ಅಂದ ಮಾತಿನಲ್ಲಿ ಅರ್ಥವಿದೆ. ಇದರಿಂದ ಕೆಲವರು ಅನ್ ಎಂಪ್ಲಾಯ್ ಆಗುತ್ತಾರೆಂದು ಹೇಳಿದರು. ಅವರನ್ನು ಅನ್‌ಎಂಪ್ಲಾಯ್ ಮಾಡಬೇಕೆಂದಿಲ್ಲ. ಅದಕ್ಕೆ ಬೇರೆ ಯೋಜನೆ ಮಾಡಬೇಕು ಎಂದು ಸರಕಾರಕ್ಕೆ ಉದ್ದೇಶವಿದೆ. ಸರ್ಕಾರದವರು ಪ್ರೈಮರಿಶಾಲೆಗಳ ಮಕ್ಕಳಿಗೆ ಮುಫತ್ತಾಗಿ ಹೋದ ವರ್ಷ 25 ಪರ್ಸೆಂಟ್ ಟೆಕ್ಸ್ಟ್ ಬುಕ್ಕುಗಳನ್ನು ಕೊಟ್ಟಿದ್ದಾರೆ. ಈ ವರ್ಷ 15 ಪರ್ಸೆಂಟ್ ಕೊಡುತ್ತೇವೆ. ಪುಸ್ತಕಗಳು ವಾಪಸ್ಸು ಬರುತ್ತಲೆ 105 ಪುಸ್ತಕಗಳಲ್ಲಿಯೂ 25 ಪರ್ಸೆಂಟ್ ಕೊಡಬೇಕು ಅಂತ ಸರ್ಕಾರದ ಇಚ್ಛೆ ಇದೆ. ಶಾಲೆಗೆ ಹೋಗುವ ಮಕ್ಕಳಿಗೆ ಪುಸ್ತಕ ಇಲ್ಲ ಅಂತ ಆಗಬಾರದು. ಇದನ್ನು ವಿಚಾರ ಮಾಡುತ್ತಾ ಇದ್ದೇವೆ.

ಇನ್ನು ಅಣ್ಣಾರಾವ್‌ರವರು ಮೂಲಭೂತವಾದ ಪ್ರಶ್ನೆಯನ್ನು ಹೇಳುತ್ತಾರೆ Enrolment ಆಗಿದೆ, what about attendance ಅಂತ ಅವರು ಕೇಳಿದ್ದು ಯಥಾ ಯೋಗ್ಯವಾದುದ್ದು. ಶ್ರೀ ಸುಂಥಣಕರ್‌ರೂ ಅದನ್ನೇ ಹೇಳಿದ್ದಾರೆ. ಆ ಮಾತು ಬಹಳ ಮಹತ್ವವಾದುದ್ದು ನಮ್ಮ ಶಾಲೆಗಳಲ್ಲಿ ಹಾಜರಾತಿ (attendance) ಸರಿಯಾಗಿಲ್ಲ ಅನ್ನತಕ್ಕಂತ ಮಾತನ್ನು ಹೇಳಿದರು, ಅದನ್ನು ಒಪ್ಪಿಕೊಳ್ಳುತ್ತೇನೆ. ಹಾಜರಾತಿ ಸರಿಯಾಗಿ ಮಾಡಬೇಕಾದರೆ ಕೆಲವು ಕ್ರಮಗಳನ್ನು ತೆಗೆದುಕೊಳ್ಳಬೇಕು Average attendence 30-40 ಇದೆ. ಬರೀ ಎನ್‌ರೋಲ್‌ಮೆಂಟ್ ಮೇಲೆ ಶಿಕ್ಷಕರನ್ನು ತೆಗೆದುಕೊಂಡರೆ, ಅದು 1:40, 1:30, 1:25 ಬರುತ್ತಾ ಇದೆ. ಆದ್ದರಿಂದ ಮಕ್ಕಳು ಶಾಲೆಗೆ ಹೋಗಲೇ ಬೇಕೆಂದು ಒಂದು ಕಾನೂನು ಮಾಡಿದ್ದೇವೆ, ಅವರನ್ನು ಒತ್ತಾಯವಾಗಿ ಕಳುಹಿಸಬೇಕು. ತಂದೆ ತಾಯಿಗಳು ಮಕ್ಕಳನ್ನು ಶಾಲೆಗೆ ಕಳುಹಿಸದಿದ್ದರೆ ಕೇಸು ಹಾಕುತ್ತೇವೆ. ಕೇಸಿನಲ್ಲಿ 8 ಆಣೆ ದಂಡ ಹಾಕುತ್ತಾರೆ. ಆದರೆ 8 ಆಣೆ ಕೊಟ್ಟುಬಿಡಲು ಸಿದ್ಧರಾದರೆ, ಮಕ್ಕಳನ್ನು ಶಾಲೆಗೆ ಕಳುಹಿಸುವುದಿಲ್ಲ. ಇಂಥ ಪರಿಸ್ಥಿತಿ ಇದೆ ಆದ್ದರಿಂದ ಕಾನೂನು ಮಾಡಿದರೆ ಇದು ಆಗುವುದಿಲ್ಲ. ಜನಗಳ ಮನಒಲಿಸಿ ಅವರು ಶಾಲೆಗೆ ಕಳುಹಿಸುವಂತೆ ಮಾಡಬೇಕು ಮಕ್ಕಳಿಗೆ ಶಾಲೆಗಳಲ್ಲಿ ಬೇಕಾದ ಸೌಕರ್ಯಗಳನ್ನು ಮಾಡಿಕೊಡಬೇಕು ಅವರಿಗೆ

(ಶ್ರೀ ಎಸ್. ಗೋಪಾಲ ಗೌಡ)

ಮಿಡ್ ಡೇ ಮೀಲ್ಸ್ ಕೊಡುತ್ತಾ ಇದ್ದೇವೆ, ಆಮೇಲೆ 25 ಪರ್ಸೆಂಟು ಟೆಕ್ಸ್ಟ್ ಬುಕ್ ಫ್ರೀ ಆಗಿ ಕೊಡುತ್ತ ಇದ್ದೇವೆ. ನಮ್ಮ ಆಫೀಸರಿಂದ ಈಗ ತಾನೇ ಇನ್‌ಫರ್ಮೇಷನ್ ಬಂದಿದೆ. ಅಟೆಂಡೆನ್ಸ್ 50 to 60 percent ಇದೆ ಅಂತ ಆದರೂ ಎಷ್ಟು ಬೇಕೋ ಅಷ್ಟು ಇಲ್ಲ. ಏನೇನು ಅನುಕೂಲತೆಗಳನ್ನು ಮಾಡಿ ಕೊಡಬೇಕೋ ಅವುಗಳನ್ನು ಮಾಡಿಕೊಡುತ್ತಿದ್ದೇವೆ. ಡ್ರೆಸ್ ಕೊಡುತ್ತಾ ಇದ್ದೇವೆ. ಸಪ್ತಾಹ ಅವನ್ನು ಮಾಡಿ ತಂದೆತಾಯಿಗಳನ್ನು ಮಕ್ಕಳನ್ನು ಶಾಲೆಗೆ ಕಳುಹಿಸಿ ಎಂದು ಕೇಳಿಕೊಳ್ಳುತ್ತಾ ಇದ್ದೇವೆ. ಬೆಟರ್‌ಮೆಂಟ್ ಕಮಿಟಿಗಳಿಗೂ ಹೇಳುತ್ತಾ ಇದ್ದೇವೆ: ಅವು ಇರುವುದು ಬರೀ ದುಡ್ಡು ಕಲೆಕ್ಟ್ ಮಾಡು ವುದಕ್ಕಲ್ಲ, ಮಕ್ಕಳನ್ನು ಶಾಲೆಗೆ ಕಳುಹಿಸಲು ಪ್ರಯತ್ನ ಮಾಡಬೇಕು. ಮತ್ತು ಶಿಕ್ಷಕರು ಸರಿಯಾಗಿ ನಡೆದುಕೊಳ್ಳುತ್ತಿದ್ದಾರೆಯೋ ಅನ್ನುವುದನ್ನು ನೋಡಬೇಕು ಎಂದು ಈ ಬಗ್ಗೆ ಪಂಚಾಯತಿ ಕಮಿಟಿ ಗಳನ್ನು ರಿಕ್ವೆಸ್ಟ್ ಮಾಡುತ್ತಾ ಇದ್ದೇವೆ. ಲೋಕಲ್ ಲೀಡರುಗಳಿಗೂ ಹೇಳುತ್ತಾ ಇದ್ದೇವೆ. ಈ ಮನೆಯ ಮತ್ತು ಮೇಲ್ಮನೆಯ ಸದಸ್ಯರನ್ನು ಅತ್ಯಂತ ವಿನಯದಿಂದ ಕೇಳಿಕೊಳ್ಳುತ್ತೇನೆ; ಇದನ್ನು ರಾಜಕೀಯ ಪ್ರಶ್ನೆಯಾಗಿ ಮಾಡಬೇಡಿ, ತಾವೆಲ್ಲರೂ ಸಹಾಯ ಮಾಡಿ, ನಾವೂ ನೀವೂ ಜೊತೆಗೆ ಹೋಗಿ ಶಾಲೆಗೆ ಮಕ್ಕಳನ್ನು ಕಳುಹಿಸಿ ಎಂದು ಹೇಳೋಣ, ತಾಯಿತಂದೆಗಳನ್ನು ಬೇಡಿಕೊಳ್ಳೋಣ. ಮುಕ್ಕಣ್ಣಪ್ಪನವರು ನಗುತ್ತಿದ್ದಾರೆ. ಅವರಿಗೆ ಬರೀ ಕ್ರಿಟಿಸೈಸ್ ಮಾಡುವುದಕ್ಕೆ ಬರುತ್ತದೆ, ಇದ ಕ್ಕಿಂತ ಪುಣ್ಯವಾದ ಕೆಲಸ ಬೇರೆ ಇಲ್ಲ. ಮಕ್ಕಳಿಗೆ ಶಿಕ್ಷಣ ಕೊಡುವಂಥ ಕೆಲಸ ಬಹಳ ಪುಣ್ಯದ ಕೆಲಸ. ಶಿಕ್ಷಕರುಕೂಡ ಇದರ ಕಡೆ ಮನಸನ್ನು ಹಾಕಬೇಕು. ಅವರೂ ಮಕ್ಕಳನ್ನು ಶಾಲೆಗೆ ಅಟ್ರ್ಯಾಕ್ಟ್ ಮಾಡ ಬೇಕು. ಮಕ್ಕಳನ್ನು ಶಾಲೆಗೆ ಎಳೆಯುವ ಶಕ್ತಿ ಅವರಲ್ಲಿದೆ. ಈಗ ನಾವು ಇನ್‌ಸ್ಪೆಕ್ಟರೇಟ್ ಕೂಡ ಸ್ಟ್ರೆಂಗ್‌ತನ್ ಮಾಡುತ್ತೇವೆ. ಅವರಿಗೆ ಆಫೀಸ್ ಕೆಲಸದ ಬರ್ಡನ್ ಬಹಳ ಇದೆ. ಆದ್ದರಿಂದ ನ್ಯಾಷ ನಲೈಸ್ ಮಾಡಿ, ಅವರನ್ನು strengthen ಮಾಡೋಣ ಆ ಕೆಲಸವೂ ಇದೆ.

ವೇಸ್ಟೇಜ್ ವಿಚಾರವಾಗಿ ಶ್ರೀಯುತರುಗಳಾದ ಅಣ್ಣಾರಾವ್‌ರವರೂ, ಸುಂಠಣಕರ್‌ರವರೂ ಹೇಳಿದರು. ನಾವೂ ನೀವು ಸ್ವಯಂ ನೋಡಿದ್ದೇವೆ ಸಾಧಾರಣವಾಗಿ ಮೊದಲನೇ ಕ್ಲಾಸಿನಲ್ಲಿ 500 ಹುಡುಗರಿದ್ದರೆ 7ನೇ ಕ್ಲಾಸಿಗೆ ಬರುವ ಹೊತ್ತಿಗೆ 100 ಇರುತ್ತಾರೆ. Poverty failure, dis-couragement ಆಗಿ ಬಿಟ್ಟು ಹೋಗಿರುತ್ತಾರೆ.

ಅಂಥಾದ್ದನ್ನು ತಡೆ ಹಾಕಬೇಕು ಆದಷ್ಟು ಸೌಲತ್ತನ್ನು ಕೊಡಬೇಕೆಂಬ ದೃಷ್ಟಿಯಿಂದ ಪ್ರಯತ್ನ ಮಾಡುತ್ತಾ ಇದ್ದೇವೆ. 7ನೇ ಕ್ಲಾಸಿನವರೆಗೂ ಹೋಗಿ ಫೇಲ್ ಆಗುತ್ತಾರೆ, 8ನೇ ಕ್ಲಾಸಿಗೆ ಹೋಗುವ ಹಾಗೆ ಇರುವುದಿಲ್ಲ, 7ನೇ ಕ್ಲಾಸ್‌ನಲ್ಲಿ ಮತ್ತೆ ಓದುವುದಕ್ಕಾಗುವುದಿಲ್ಲ. ಇದನ್ನು ನಿವಾರಣೆ ಮಾಡುವ ಸಲುವಾಗಿ ಯುನೆಸ್ಕೊ ಅವರ ಸಹಾಯದಿಂದ ನಮ್ಮ ರಾಜ್ಯದಲ್ಲಿ 5 ವೊಕೇಷನಲ್ ಟ್ರೈನಿಂಗ್ ಇನ್ ಸ್ಟಿಟೂಷನ್‌ಗಳನ್ನು ಮಾಡಬೇಕೆಂದಿದ್ದೇವೆ. 64-65ರಲ್ಲಿ ಹಳೇ ಮೈಸೂರಿಗೆ ಒಂದು ಸೌತ್ ಕೆನರಾ ನಲ್ಲಿ ಒಂದು ಮಾಡಬೇಕೆಂದು ಇದ್ದೇವೆ, 65ರಲ್ಲಿ ಬೇರೆ ಇತರ ಕಡೆಗಳಲ್ಲಿ ಇನ್ನು ಮೂರನ್ನು ತೆರೆಯ ಬೇಕೆಂದು ಮಾಡಿಕೊಂಡಿದ್ದೇವೆ. ವೊಕೇಷನಲ್ ಸ್ಕೂಲಿಗೆ ಅವರು ಸಹಾಯ ಕೊಡುತ್ತಾರೆ. ಜೂನಿ ಯರ್ ಟೆಕ್ನಿಕಲ್ ಸ್ಕೂಲ್ಸ್‌ನಲ್ಲಿ 7ನೇ ಕ್ಲಾಸ್ ಮಾಡಿರುವವರನ್ನು ಸೇರಿಸಿಕೊಳ್ಳುತ್ತಾರೆ. ಅವರು 3 ವರ್ಷ ಅಲ್ಲಿಯೇ ಇರುತ್ತಾರೆ. ಜೂನಿಯರ್ ಟೆಕ್ನಿಕಲ್ ಸ್ಕೂಲ್‌ನಲ್ಲಿ ಇದ್ದವರು ಮುಂದೆ ಬೇಕಾದರೆ ಪಾಲಿಟೆಕ್ನಿಕ್‌ಗೆ ಹೋಗ ಬಹುದು ಎಂದು ಇದೆ. ವೊಕೇಷನಲ್ ಸ್ಕೂಲ್‌ನಲ್ಲಿ ಇರುವವರಿಗೆ ಕೈ ಕೆಲಸ ಮಾತ್ರ ಇರುತ್ತದೆ. ಈ ರೀತಿ ಜೂನಿಯರ್ ಟೆಕ್ನಿಕಲ್ ಸ್ಕೂಲ್ಸ್, ಫೈನ್ ಆರ್ಟ್ ಸ್ಕೂಲ್ಸ್ ಮತ್ತು ಮ್ಯೂಸಿಕ್ ಅಂಡ್ ಡಾನ್ಸ್ ಸ್ಕೂಲ್ಸ್ ಇವುಗಳನ್ನೆಲ್ಲಾ ತೆರೆಯ ಬೇಕಂದು ಇದ್ದೇವೆ.

ಶ್ರೀ ಸಿ. ಜೆ ಮುಕ್ಕಣ್ಣಪ್ಪ —ಇದಕ್ಕೆಲ್ಲಾ ಹಣ ಇದೆಯೇ?

ಶ್ರೀ ಎಸ್. ಆರ್. ಕಂಠಿ. ಇವುಗಳೆಲ್ಲಾ ಪ್ಲಾನ್‌ನಲ್ಲಿ ಇವೆ, ನಮ್ಮ ರಾಜ್ಯದಲ್ಲಿ 29 ಪಾಲಿ ಟೆಕ್ನಿಕ್ ಳು ಇವೆ, 20ರಲ್ಲಿ 2 ಹೆಣ್ಣು ಮಕ್ಕಳಿಗಾಗಿ ಇವೆ. ಒಂದು ಬೆಂಗಳೂರಿನಲ್ಲಿ ಇದೆ, ಇನ್ನೊಂದು ಹುಬ್ಬಳ್ಳಿಯಲ್ಲಿ ಇದೆ. ಹುಬ್ಬಳಿಯಲ್ಲಿ ಈ ವರ್ಷ ಪ್ರಾರಂಭವಾಗಿದೆ. 29 ರಲ್ಲಿ 19 ಹಳೇ ಮೈಸೂರಿ ನಲ್ಲಿ ಇವೆ, ಇನ್ನು ಉಳಿದವು 10 ಇಂಟೆಗ್ರೇಟೆಡ್ ಏರಿಯಾದಲ್ಲಿ ಇವೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ. —ಈ ಪಾಲಿಟೆಕ್ನಿಕ್‌ಗಳಲ್ಲಿ ಕೆಲಸ ಮಾಡುವವರಿಗೆ ಸಂಬಳ ಏಕೆ ಸರಿ ಯಾಗಿ ಕೊಟ್ಟಿಲ್ಲ? 1959ರ ಆರ್ಡರ್ ನೋಡಿದ್ದೀರಾ?

ಶ್ರೀ ಎಸ್ ಆರ್. ಕಂಠಿ.—ಗೌರ್ನಮೆಂಟ್ ಆಫ್ ಇಂಡಿಯಾದವರು ನಮಗೆ ನೀವೂ ಸಂಬಳ ವನ್ನು ಜಾಸ್ತಿ ಮಾಡಿ ಎಂದು ಹೇಳಿದರು, ನಮ್ಮ ಸರ್ಕಾರದ ಪೇ ಸ್ಕೇಲ್ಸ್‌ನ್ನು ಗವರ್ನಮೆಂಟ್ ಆಫ್ ಇಂಡಿಯಾದವರಿಗೆ ಪ್ರಪೋಸ್ ಮಾಡಿದ್ದೇವೆ ಆದಕ್ಕಿಂತ ಜಾಸ್ತಿ ಮಾಡುವುದಕ್ಕೆ ಸಾಧ್ಯವೇ ಎಂದು ಕೇಳಿದ್ದರು, ಅದಕ್ಕೆ ದುಡ್ಡು ಹೆಚ್ಚಾಗಿ ಬೇಕಾಗುತ್ತದೆ ಎಂದು ಹೇಳಿದ್ದಕ್ಕೆ ಯಾವ ತಾರೀಖಿನಿಂದ ಕೊಡುತ್ತೀರೋ ಆ ತಾರೀಖಿನಿಂದ 5 ವರ್ಷಗಳು ಮಾತ್ರ ನಾವು ನೀವು ಕೇಳುವಷ್ಟು ಹಣವನ್ನು

ಕೊಡುತ್ತೇವೆ ಎಂದು ಹೇಳಿದರು. ಅನಂತರ ಏನು ಮಾಡಬೇಕು ಎಂಬ ಪ್ರಶ್ನೆ ಬರುತ್ತದೆ. ಈಗ ಕೆಲವೊಂದು ಪೇ ಸ್ಕೇಲ್ಸ್ ಅಫ್ ಗ್ರೇಡ್ ಮಾಡಿ ಪ್ರಿನ್ಸಿಪಾಲ್ಸ್ ಮತ್ತು ಪ್ರೊಫೆಸರ್ಸ್ ಅಲ್ಲದೇ ಟೆಕ್ನಿಕಲ್ ಹ್ಯಾಂಡ್ಸ್‌ಗೆ ಯಾವರೀತಿ ಪೇಸ್ಕೇಲ್ಸ್ ಇರಬೇಕೆಂಬುದನ್ನು ಗವರ್ನಮೆಂಟ್ ಆಫ್ ಇಂಡಿಯಾದವರಿಗೆ ಕೇಳುಹಿಸಿದ್ದೇ ಅವರ ಮತ್ತು ನಮ್ಮ ನಡುವೆ ಭೇಧ ಬಂದಿದೆ. ಅದನ್ನು ಬಗೆಹರಿಸಿಕೊಳ್ಳುವುದಕ್ಕೆ ಸಾಧ್ಯ ಎಂದು ಹೇಳುತ್ತಾ ಇದ್ದೇನೆ.

**Sri C. J. MUCKANNAPPA.**—I will read from the latter of the Central Government; "The Central Government have also decided to bear any additional expenditure involved in the adoption of the above revised scales of salary by the State Government and non-Government institutions, excluding the University institutions, for a period of 5 years". This letter was sent in 1959 and even after 5 years, they say they are still considering it.

**Sri S. R. KANTHI.**—We are telling the Government of India as to what we should do after five years. Where is the guarantee that the grant would continue? They ask us to give Rs, 1300 or 1400 to an officer who is in the scale 600-1000, After five years, who will bear the cost?

ಶ್ರೀ ಅಣ್ಣಾರಾವ್ ಗಣಮುಖಿ.—5 ವರ್ಷದ ಮಟ್ಟಿಗೆ ಮಾತ್ರ ಕೊಟ್ಟು ಅಲ್ಲಿಂದ ಮುಂದೆ ನಿಮ್ಮ ಸ್ಕೇಲನ್ನೇ ಕೊಡಬಹುದಲ್ಲಾ.

ಶ್ರೀ ಎಸ್. ಆರ್. ಕಂಠಿ.—ಆ ರೀತಿ ಮಾಡಿದರೆ ಏನಾಗುತ್ತದೆ ಎಂಬುದು ತಮಗೂ ಗೊತ್ತಿದೆ. ಹಾಗೆ ಮಾಡುವುದಕ್ಕೆ ಆಗುವುದಿಲ್ಲ, ತಾವು ಮಾಡಿಲ್ಲ, ನನಗೂ ಮಾಡುವುದಕ್ಕಾಗುವುದಿಲ್ಲ.

ಬೆಟರ್‌ಮೆಂಟ್ ಕಮಿಟಿ ವಿಚಾರದಲ್ಲಿ ಒಂದು ಮಾತನ್ನು ಇಲ್ಲಿ ಪ್ರಸ್ತಾಪ ಮಾಡಿದ್ದಾರೆ, ಬೆಟರ್ ಮೆಂಟ್ ಕಮಿಟಿಗಳವರು ಚೆನ್ನಾಗಿ ಕೆಲಸ ಮಾಡಿದ್ದಾರೆ. ಎಲ್ಲಾ ಕಡೆಯೂ ಅದು ಫೇಲ್ ಆಗಿದೆ ಎಂದು ಹೇಳುವ ಮಾತು ಸರಿಯಲ್ಲ. 1961–62ರಲ್ಲಿ 44ಲಕ್ಷ ರೂಪಾಯಿಗಳನ್ನು ಒದಗಿಸಿದ್ದಾರೆ, 62–63ರಲ್ಲಿ ಎಂದರೆ ಹೋದ ವರ್ಷ ಅಕೆಡಮಿಕ್ ಇಯರ್‌ನಲ್ಲಿ 60 ಲಕ್ಷರೂಪಾಯಿಗಳನ್ನು ಒದಗಿಸಿದ್ದಾರೆ. ಈ ವರ್ಷ ಇನ್ನೂ ಲೆಕ್ಕ ಬಂದಿಲ್ಲ 22 ಲಕ್ಷ ರೂಪಾಯಿಗಳನ್ನು ಒದಗಿಸಿದ್ದಾರೆ. ಕೆಲಸ ಚೆನ್ನಾಗಿ ಮಾಡಿದ್ದಾರೆ ಆದ್ದರಿಂದ ಅವು ಏನೂ ಕೆಲಸ ಮಾಡಿಲ್ಲ ಎಂಬ ಮಾತನ್ನು ಒಪ್ಪುವುದಕ್ಕಾಗುವುದಿಲ್ಲ.

ಇನ್ನು 11ನೇ ಕ್ಲಾಸ್ ವಿಚಾರದಲ್ಲಿ ಬಹಳವಾಗಿ ಜಿಜ್ಞಾಸೆ ನಡೆದಿದೆ. ಅದೇನೋ ಇಲ್ಲಿ ಮೈಸೂರಿನಲ್ಲಿ ಎಜ್ಯುಕೇಷನ್ ಮಿನಿಸ್ಟರು ಅವರ ತಲೆಗೆ ಬಂದಂತೆ ಮಾಡುತ್ತಾ ಇದ್ದಾರೆ ಎಂಬ ಮಾತನ್ನು ಆಡಿದ್ದಾರೆ. ಆದರೆ ವಾಸ್ತವಾಂಶ ಇರುವುದೇ ಬೇರೆ, ನನ್ನ ಮನಸ್ಸಿಗೆ ಬಂದಂತೆ ನಾನು ಯಾವುದನ್ನೂ ಕೂಡ ಮಾಡುತ್ತಿಲ್ಲ, ಕೇಂದ್ರ ಸರಕಾರದ ಎಜ್ಯುಕೇಷನ್ ಮಿನಿಸ್ಟರ್ ಕಾನ್‌ಫರೆನ್ಸ್‌ನಲ್ಲಿ 11ನೇ ಸ್ಟ್ಯಾಂಡರ್ಡನ್ನು ಯಾವ ಪ್ರಕಾರ ಮಾಡಬೇಕೆಂಬುದನ್ನು ತಿಳಿಸಿದ್ದಾರೆ. ಶ್ರೀಮಾನ್ ಅಣ್ಣಾರಾಯರು ಹೇಳಿದ ಹಾಗೆ 400 ಹೈಸ್ಕೂಲುಗಳಲ್ಲಿ ಟೆಸ್ಟ್‌ಟ್ಯೂಬ್ ಎಂದರೆ ಏನು ಅಂತ ಗೊತ್ತಿಲ್ಲ.

**Sri C. J. MUCKANNAPPA.**—The children does not know what a test-tube is and the Education Minister wants to introduce PUC in schools.

**Sri S. R. KANTHI.**—I will convey Sri Muckannappa's feelings to Sri Chagla. I am sure such ideas are going to stop the progress. ಮೊನ್ನೆ ದಿವಸ ಪಾರ್ಲಿಮೆಂಟಿನಲ್ಲಿ ಒಂದು ಪ್ರಶ್ನೆ ಕೇಳಿದಾಗ 11ನೇ ಸ್ಟಾಂಡರ್ಡ್ ಮಾಡಬೇಕೆಂದು ಶ್ರೀ ಚಾಗ್ಲಾ ಅವರು ಹೇಳಿದ್ದಾರೆ. ಎಂದಮೇಲೆ ಈ 11ನೇ ಸ್ಟಾಂಡರ್ ವಿಷಯದಲ್ಲಿ ವಾದವಿವಾದ ಬೇಡ. 11ನೇ ಸ್ಟಾಂಡರ್ಡ್ ಮಾಡಿ ಕೆಡಿಸಬೇಡಿರಿ ಎಂದು ಹೇಳುತ್ತಾ ಇದ್ದಾರೆ, ಅದು ಕೆಡಲಾರದಂತೆ ನೋಡಿಕೊಳ್ಳುವುದು ನಮ್ಮೆಲ್ಲರ ಕೆಲಸ.

**Sri G. V. GOWDA.**—How can it be a success?

**Sri S. R. KANTHI.**—Sri Gowda who is against it now will come to me to ask for 11th Standard. I will make a personal appeal to Sri Venkate Gowda. Let him improve standards in the High Schools.

(SRI S. R. KANTHI)

6-30 P.M.

11ನೆಯ ತರಗತಿಯನ್ನು 45 ಹೈಸ್ಕೂಲುಗಳಲ್ಲಿ ತೆರೆಯಬೇಕೆಂದಿದ್ದೇವೆ, ಅದಕ್ಕೆ ಇಂಡಿಯಾ ಸರ್ಕಾರ ಹಣ ಕೊಡುತ್ತದೆ. ಈಗ ಕಾಲೇಜುಗಳಿಗೆ ಬಹಳ ರಿಯಾಯಿತಿಯಿದೆ. ಈ ವರ್ಷ 80 ಸಾವಿರ ಮಂದಿ ಎಸ್. ಎಸ್. ಎಲ್. ಸಿ. ಪರೀಕ್ಷೆಗೆ ಕೂತರೆ 40 ಸಾವಿರ ಜನ ಪಾಸಾದರೆ, ಅದರಲ್ಲಿ 25 ಸಾವಿರ ಜನ ಕಾಲೇಜಿಗೆ ಹೋಗಲು ಸಾಧ್ಯವಿಲ್ಲ. ಆದುದರಿಂದ ಅವರಿಗೆ ಉತ್ತಮ ಅಭ್ಯಾಸಕ್ಕೆ ಅವಕಾಶ ಮಾಡಲು ನಾವು 11ನೆಯ ಸ್ಟ್ಯಾಂಡರ್ಡ್ ಮಾಡುತ್ತೇವೆ.

ಇನ್ನು ಹೆಚ್ಚು ಗ್ರ್ಯಾಂಟು ಕೊಡುವ ವಿಚಾರ ಹೇಳಿದರು, ಅದು ಸಾಧ್ಯವಿಲ್ಲ. ಮೊದಲೇ ಅದನ್ನು ಹೇಳಿದ್ದೇನೆ. ಆದರೂ ಕೂಡ ಹೊಸದಾಗಿ ಪ್ರಾರಂಭವಾದ ಹೈಸ್ಕೂಲುಗಳಿಗೆ ಎಕ್ವಿಪ್‌ಮೆಂಟ್ ಗ್ರ್ಯಾಂಟ್ ಕೊಡಲಾಗಿದೆ.

ಪಠ್ಯಪುಸ್ತಕಗಳ ಬಗ್ಗೆ ಒಂದು ಮಾತು. ಹೈಪವರ್ ಕಮಿಟಿ ಮಾಡಬೇಕೆಂದು ಹೇಳಿದ್ದಾರೆ, ಅದು ಶಕ್ಯವಿಲ್ಲ. ಕೇಂದ್ರಸರ್ಕಾರ ಮಾಡಲ್ ಬುಕ್ಸ್ ಕಳುಹಿಸುವುದರಿಂದ ಹೈಪವರ್ ಕಮಿಟಿಗೆ ಆವಶ್ಯಕತೆ ಇಲ್ಲ.

ಕಡ್ಡಾಯ ಶಿಕ್ಷಣದ ವಿಚಾರ ಹೇಳಿದರು; ಹಳ್ಳಿಗಳಿಗೆ ಅಥವಾ ಪಟ್ಟಣಕ್ಕೋ? ಎಂದು ಕೇಳಿದರು. ಅದು ಹಳ್ಳಿಗಳಲ್ಲಿ ಇದೆಯೆಂದು ಸ್ಪಷ್ಟವಾಗುತ್ತದೆ.

40 ರೂಪಾಯಿಗಳವರೆಗೆ ಫೀಜನ್ನು ತೆಗೆದುಕೊಳ್ಳುತ್ತಿದ್ದಾರೆಂದು ಶ್ರೀ ಸುಂತಣಕರ್‌ರವರು ಹೇಳಿದರು. ಅದು ಸತ್ಯವಲ್ಲ. 9 ರೂಪಾಯಿ ಮಾತ್ರ ತೆಗೆದುಕೊಳ್ಳುವುದು. ಬೆಟರ್‌ಮೆಂಟ್ ಫೀ ಕೂಡಿ 19 ರೂಪಾಯಿ ಆಗುತ್ತದೆ. ಒಂದರಿಂದ ನಾಲ್ಕನೆಯ ಕ್ಲಾಸುಗಳವರೆಗೆ ಫೀಜಿಲ್ಲ. 5ನೆಯ ಸ್ಟ್ಯಾಂಡರ್ಡ್‌ಗೆ ಸ್ಪೋರ್ಟ್ಸ್ ಫೀ 2 ರೂಪಾಯಿ, ಆರ್. ಆರ್. ಫಿ 1 ರೂಪಾಯಿ, ಮೆಡಿಕಲ್ ಫೀ 50 ನ. ಪೈ. ಇದೆ; ವಿಷುಯಲ್ ಎಜುಕೇಷನ್ ಫೀ 4-25 ರೂಪಾಯಿ, 7ನೆಯ ಮತ್ತು 6ನೆಯ ಸ್ಟ್ಯಾಂಡರ್ಡಿಗೂ ವಿಷುಯಲ್ ಎಜುಕೇಷನ್ ಫೀ 4-25 ರೂಪಾಯಿ. 8ನೆಯ ಸ್ಟ್ಯಾಂಡರ್ಡ್‌ಗೆ ಸ್ಪೋರ್ಟ್ಸ್ ಫೀ 3 ರೂಪಾಯಿ, ಆರ್. ಆರ್. 2 ರೂಪಾಯಿ, ಲ್ಯಾಬೊರೇಟರಿ ಫೀ 2 ರೂಪಾಯಿ, ಮೆಡಿಕಲ್ ಫೀ 1 ರೂಪಾಯಿ, ಒಟ್ಟು 9 ರೂಪಾಯಿ ವಿಷುಯಲ್ ಎಜುಕೇಷನ್ ಫೀ 1 ರೂಪಾಯಿ ಸೇರಿ ಆಗುತ್ತದೆ. 9 ಮತ್ತು 10ನೆಯ ಸ್ಟ್ಯಾಂಡರ್ಡ್‌ಗಳಿಗೂ ತಲಾ 9 ರೂಪಾಯಿ ಬೀಳುತ್ತದೆ. ಬೆಟರ್‌ಮೆಂಟ್ ಫೀ ಕೂಡಿಸಿದರೆ 19 ರೂಪಾಯಿ ಆಗುತ್ತದೆ; 40 ರೂಪಾಯಿ ಆಗುವುದಿಲ್ಲ.

ಬೆಳ್ಗಾವಿ ಹೈಸ್ಕೂಲಿನಲ್ಲಿ ಸಿಬ್ಬಂದಿ ಸಾಕಷ್ಟಿಲ್ಲವೆಂದು ಹೇಳಿದರು. ನಾನು ಇಲಾಖೆಯವರನ್ನು ವಿಚಾರಿಸಿದೆ, ಸಿಬ್ಬಂದಿ ಬೇಕೆಂದು ಅಲ್ಲಿನವರು ಕೇಳಿಲ್ಲವೆಂದು ಹೇಳಿದರು; ಮತ್ತೆ ವಿಚಾರ ಮಾಡುತ್ತೇನೆ. ಕಡಿಮೆಯಿದ್ದರೆ ಜಾಸ್ತಿಮಾಡಲು ಪ್ರಯತ್ನಮಾಡುತ್ತೇನೆ.

ಇನ್ನು ಟ್ರೈನಿಂಗ್ ವಿಚಾರ ಕೆಲವರು ಹೇಳಿದರು. ಇಡೀ ಇಂಡಿಯಾದ ಸರಾಸರಿ ತೆಗೆದುಕೊಂಡರೆ ಮೂರನೆಯ ಪಂಚವಾರ್ಷಿಕ ಯೋಜನೆಯ ಕೊನೆಗೆ ಶೇಕಡ 75ರಷ್ಟು ಆಗುತ್ತದೆ. ಮದ್ರಾಸಿನಲ್ಲಿ ಸ್ವಲ್ಪ ಹೆಚ್ಚು ಕಡಿಮೆ ಶೇಕಡ ನೂರರಷ್ಟಿದೆ. ಕೆಲವು ಕಡೆ ಟ್ರೈಂಗ್ ಆದವರ ಸಂಖ್ಯೆ ಕಡಿಮೆ ಇದೆ. ಪ್ರೈಮರಿ ವಿದ್ಯಾಭ್ಯಾಸಕ್ಕೆ ಸಂಬಂಧಪಟ್ಟಹಾಗೆ ಇಡೀ ಇಂಡಿಯಾದಲ್ಲಿ ಟ್ರೈನಿಂಗ್ ಆದವರ ಸಂಖ್ಯೆ ಶೇಕಡ 75 ಸರಾಸರಿ ಆದರೆ ಮೈಸೂರಿನಲ್ಲಿ ನೂರಕ್ಕೆ 50 ಆಗುತ್ತದೆ; ಶೇಕಡ 25 ರಷ್ಟು ಕಡಿಮೆ ಇದೆ. ಟ್ರೈನಿಂಗ್ ಕೊಡಲು ಈಗ 75 ಕಾಲೇಜುಗಳಿದ್ದು ಜೂನ್‌ನಿಂದ 82 ಆಗುತ್ತದೆ. ಟ್ರೈನಿಂಗ್ ಆದವರಿಗೆ ಕೆಲವರಿಗೆ ಏಳೂವರೆ ರೂಪಾಯಿ, ಕೆಲವರಿಗೆ 15 ರೂಪಾಯಿ ಕೊಡಲಾಗುತ್ತಿದೆ, ಹೀಗೆ ಎರಡು ರೀತಿ ಇದೆ. ಕೆಲವರು ಇನ್ ದಿ ಪ್ಲಾನ್ ಇದ್ದಾರೆ, ಮತ್ತೆ ಕೆಲವರು ಔಟ್‌ಸೈಡ್ ದಿ ಪ್ಲಾನ್ ಇದ್ದಾರೆ. ಔಟ್‌ಸೈಡ್ ದಿ ಪ್ಲಾನ್ ಇರುವವರಿಗೆ ಏಳೂವರೆ ರೂಪಾಯಿ ಇದೆ. ಇನ್ ದಿ ಪ್ಲಾನ್ ಇರುವವರಿಗೆ ಇಂಡಿಯಾ ಸರ್ಕಾರದವರು ಕೊಡುವುದು, ಆದುದರಿಂದ 15 ರೂಪಾಯಿನಂತೆ ಅಂದರೆ ಹೆಚ್ಚಾಗಿ ಕೊಡುತ್ತಿದೆ.

ಆಮೇಲೆ ಹಿಂದಿ ಶಿಕ್ಷಕರ ವಿಚಾರದಲ್ಲಿ ಒಂದು ಮಾತು ಬಂತು. ಅವರಿಗೆ ಪ್ರೈಮರಿ ಸ್ಕೂಲಿನಲ್ಲಿ ಇತರ ಉಪಾಧ್ಯಾಯರಿಗೆ ಕೊಡುವಂತೆ ರೂ. 80-150ರ ಸ್ಕೇಲಿದೆ. ಮ್ಯೂಸಿಕ್ ಟೀಚರ್‌ಗೂ ಪೂರ್ತಿಕಾಲ ಕೆಲಸ ಮಾಡುವಾಗ ರೂ. 80-150ರ ಸ್ಕೇಲಿದೆ. ಹಿಂದಿ ಉಪಾಧ್ಯಾಯರಿಗೆ ಹೈಸ್ಕೂಲಿನಲ್ಲಿ ರೂ. 130-250ರ ಸ್ಕೇಲಿದೆ. ಹೈಸ್ಕೂಲಿನಲ್ಲಿ ಮ್ಯೂಸಿಕ್ ಟೀಚರ್‌ಗೆ ರೂ. 110-220ರ ಸ್ಕೇಲಿದೆ. ಆದುದರಿಂದ ಅವರಿಗೆ ಕೊಡುವುದು ಕಡಿಮೆ ಎಂದು ಹೇಳುವುದು ಸರಿಯಲ್ಲ.

ಶಬ್ದಕೋಶದ ವಿಚಾರ ಪ್ರಸ್ತಾಪಮಾಡಿದರು. ಆ ಕೆಲಸ ನಿಧಾನವಾಗಿದೆ, ಅದು ಬಹಳ ದೊಡ್ಡ ಕೆಲಸ. ಅದಕ್ಕೆ 25 ಲಕ್ಷ ರೂಪಾಯಿ ಬೇಕಾಗಿದೆ, ಈಗ ಕೆಲವು ಹಣ ಖರ್ಚಾಗಿದೆ, ಸುಮಾರು 5 ಲಕ್ಷ ಇರಬಹುದು. ಇದರ ಕೆಲಸ ಇನ್ನೂ ಬಹಳ ತ್ವರಿತವಾಗಿ ಮಾಡಬೇಕಾಗಿದೆ. ಅದಕ್ಕೆ ಯಾವ ಕ್ರಮ ಕೈಕೊಳ್ಳಬೇಕೋ ಕೈಕೊಳ್ಳುತ್ತೇವೆ.

ಶ್ರೀ ರಂಗೇಗೌಡರು ನರ್ಸರಿಶಾಲೆಯನ್ನು ಸರ್ಕಾರದವರೇ ಮಾಡಬೇಕೆಂದು ಹೇಳಿದರು. ಅದನ್ನು ಜನರೇ ತೆರೆಯಬೇಕಾಗುತ್ತದೆ. ರಾಜ್ಯಾಂಗದ ಪ್ರಕಾರ 6ರಿಂದ 14 ವರ್ಷದ ಮಕ್ಕಳಿಗೆ ಶಿಕ್ಷಣ ಕೊಡುವ ಜವಾಬ್ದಾರಿ ಸರ್ಕಾರದ ಮೇಲಿದೆ. ಆ ವಯಸ್ಸಿಗಿಂತ ಕೆಳಗಿರುವವರಿಗೆ ವಾಲಂಟರಿ ಬೇಸಿಸ್‌ಮೇಲೆ ನಡೆಯಬೇಕು, ಅದನ್ನು ಸರ್ಕಾರ ವಹಿಸಿಕೊಳ್ಳುವುದಕ್ಕಾಗುವುದಿಲ್ಲ. ಜನರು ಆದನ್ನು ವಹಿಸಿಕೊಳ್ಳಬೇಕು. ಸೇಕಡ 75ರಷ್ಟು ರೆಕರಿಂಗ್ ಗ್ರಾಂಟ್ ನಾವು ಕೊಡುತ್ತೇವೆ.

ಮಾಗಡಿ ತಾಲ್ಲೂಕಿನ ಉರ್ದು ಶಾಲೆಯಲ್ಲಿ ಮಿಡ್‌ಡೇ ಮೀಲ್ಸ್‌ಗೆ ಅವಕಾಶಮಾಡಿಲ್ಲವೆಂದು ಹೇಳಿದರು. ಅವಕಾಶಮಾಡಬಹುದು. ಆದರೆ ಜನರು ಮುಂದೆ ಬರಬೇಕು, ಕಾಂಟ್ರಿಬ್ಯೂಷನ್ ಕೊಡಬೇಕಾಗುತ್ತದೆ.

ಜಾಲಮಂಗಲ ಹೈಸ್ಕೂಲು ವಿಚಾರ ಹೇಳಿದ್ದಾರೆ. ಬಹಳ ಮಂದಿ ನಮ್ಮಲ್ಲಿಗೆ ಬಂದು ಏನಾದರೂ ಮಾಡಿ ಎಂದು ಹೇಳುತ್ತಾರೆ. 10 ಸಾವಿರ ರೂಪಾಯಿ ಕೊಡಿ ಎಂದು ಹೇಳಿ ಅಷ್ಟು ನಾವು ಕೊಟ್ಟಿಲ್ಲವೆಂದು ಕಾಣುತ್ತದೆ. 20 ಎಕರೆ ಜಮೀನು ಕೊಡಬೇಕಾಗುತ್ತದೆ. ಈಗ 2 ಸಾವಿರ ಚಿಲ್ಲರೆ ಕೊಟ್ಟಿದ್ದಾರೆ, ಎರಡೂವರೆ ಸಾವಿರ ಕೊಡಬೇಕು.

ಶ್ರೀ ಸೂರ್ಯನಾರಾಯಣರಾಯರು ಉಪಾಧ್ಯಾಯರಿಗೆ ಟ್ರೈನಿಂಗ್ ಕೊಡುವ ಪ್ರೈವೇಟ್ ಶಾಲೆಗಳವರಿಗೆ ಗ್ರಾಂಟ್ ಕೊಡಬೇಕೆಂದು ಹೇಳಿದರು. ಅದು ಔಟ್‌ಸೈಡ್ ದಿ ಪ್ಲಾನ್ ಇರುವುದರಿಂದಯೋಚನೆಮಾಡಬೇಕು, ನಮ್ಮ ಬಡ್ಜೆಟ್ಟಿನಲ್ಲಿ ಕೊಡಬೇಕಾಗುತ್ತದೆ. ಇನ್ನು ಶ್ರೀ ಕೇಶವಮೂರ್ತಿಗಳು ಮಾತನಾಡುವುದಕ್ಕೆ ಷುರು ಮಾಡಿಬಿಟ್ಟರೆ ಅದೇನು ಭರಾಟೆಯಿಂದ ಮಾತನಾಡುತ್ತಾರೋ ನನಗೆ ಅರ್ಥವಾಗುವುದಿಲ್ಲ. ರಭಸದಿಂದ ಹಾಗೆ ಮಾತನಾಡುವಾಗ ಏನೇನೊ ಮಾತನಾಡುತ್ತಾರೆ. ಅವರು ಸರ್ಕಾರ ಮನಸ್ಸಿಗೆ ಬಂದಂತೆ ದುಡ್ಡು ಖರ್ಚುಮಾಡುತ್ತರೆಂದು ಹೇಳಿದರು. ಇಲ್ಲ ನಿಮಗೆ ಕನ್ನಡಿಯಲ್ಲಿ ಕಾಣುವಂತೆ ನಾವು ಕೊಟ್ಟಿರುವ ಹಣವನ್ನೆಲ್ಲಾ ಪಟ್ಟಿ ಮಾಡಿ ಇಲ್ಲಿ ತಮಗೆ ಒದಗಿಸಿದ್ದೇವೆ.

ಶ್ರೀಮತಿ ಭಾಗೀರಥಮ್ಮನವರು ಎಂ. ಎ., ಹಾಗೂ ಎಂ. ಎಸ್. ಸಿ. ಪದವೀಧರರಾಗಿ ಕೆಲಸ ಮಾಡುತ್ತಿರುವ ಟೀಚರುಗಳಿಗೆ ಪ್ರತಿಯೊಬ್ಬರಿಗೂ ಎರಡೆರಡು ಇನ್‌ಕ್ರಿಮೆಂಟು ಕೊಡಬಹುದು, ಹಿಂದೆ ಇದ್ದುದನ್ನು ಈಗಲೂ ಮುಂದುವರಿಸಿಕೊಂಡು ಬರುವುದಕ್ಕೇಕೆ ಆಗುವುದಿಲ್ಲ? ಎಂದು ಹೇಳಿದರು. ಅವರು ಹೇಳುವ ವಿಚಾರವೇನೋ ಒಳ್ಳೆಯದಾಗಿದೆ. ಇದು ವಿಚಾರ ಮಾಡುವಂತಹ ಪ್ರಶ್ನೆ ಎಂದು ನಾನು ತಿಳಿದುಕೊಂಡಿದ್ದೇನೆ.

ಇನ್ನು ಈ ಇಲಾಖೆಯಲ್ಲಿ ಎರಡು ವರ್ಷಗಳಿಂದ ನಾವು ಮಾಡಿರುವಂತಹ ಕೆಲಸಗಳಾವುವು ಎನ್ನುವುದರ ಒಂದು ಲಿಸ್ಟನ್ನು ಮಾಡಿದ್ದೇವೆ. ಅವುಗಳ ಬಗ್ಗೆ ಇಲ್ಲಿ ಹೇಳುತ್ತೇನೆ.

Free text books to the Primary Schools, Triple benefit scheme to the teachers, Fee concession in the High Schools where the income annually is Rs. 2,400 and less.

ಮೊದಲು ಸ್ಕಾಲರ್‌ಷಿಪ್ ಕೊಡುವ ನೀತಿ ಅಷ್ಟು ಚೆನ್ನಾಗಿರಲಿಲ್ಲ. ಈಗ ಎರಡು ವರ್ಷಗಳಿಂದ ಮಾಸ್ ಎಜುಕೇಷನ್ನನ್ನು ನೋಡಿ ಇಲ್ಲಿ ಹೇಳುತ್ತೇನೆ. ಬಡವರ ಮಕ್ಕಳು ಯೋಗ್ಯರಾದವರೂ ಹಾಗೂ ನುರಿತವರಿಗೆ ಪಾವರ್ಟಿ ಕಂ ಪ್ರೋಗ್ರೆಸ್ ಸ್ಕಾಲರ್‌ಷಿಪ್ ಎಂದು ಕೊಡಬೇಕೆಂದು ಮಾಡಲಾಗಿದೆ. ಅದೇ ಪ್ರಕಾರ ಕೇಂದ್ರ ಸರ್ಕಾರದವರೂ ಕೂಡ ಮೆರಿಟ್ ಕಂ ಪಾವರ್ಟಿ ಸ್ಕಾಲರ್‌ಷಿಪ್ ಎಂದು ಕೊಡಬೇಕೆಂದು ಮಾಡಿದ್ದಾರೆ. ನಾವು ಮಾಡಿರುವುದು ಹಾಗಿಲ್ಲ, ಮೊದಲು ಪಾವರ್ಟಿ ಆನಂತರ ಮೆರಿಟ್ ವಿಚಾರ ಬರಬೇಕೆಂದು ಮಾಡಿದ್ದೇವೆ.

ಶ್ರೀ ಎಸ್. ಶಿವಪ್ಪ.—ನಿಮ್ಮದು ಯಾವಾಗಲೂ ತಲಕೆಳಗಿನ ವ್ಯಾಪಾರವೇ (ನಗು).

ಶ್ರೀ ಎಸ್. ಆರ್. ಕಂಠಿ.—ಶ್ರೀಮಾನ್ ಶಿವಪ್ಪನವರು ನನ್ನ ವಿಚಾರದಲ್ಲಿ ಯಾವಾಗಲೂ ನೂರಕ್ಕೆ ನೂರು ಪಾಲು ಹೊರಗಡೆ ಒಪ್ಪಿಕೊಳ್ಳುತ್ತಾರೆ. ಆದರೆ ಇಲ್ಲಿಗೆ ಬಂದ ತಕ್ಷಣ ನನ್ನ ಮೇಲೆ ಮಾತನಾಡಲು ಬರುತ್ತಾರೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಅದೆಂತಹ ಸಂಬಂಧವೋ ?

ಶ್ರೀ ಎಸ್. ಆರ್. ಕಂಠಿ.—ನ್ಯಾಷನಲೈಸೇಷನ್ ಆಫ್ ಟೆಕ್ಸ್‌ಬುಕ್ ಮಾಡಬೇಕೆಂದು ಏರ್ಪಾಡು ಮಾಡಿದ್ದೇವೆ, ಅದರಂತೆ ಮಿಡ್ ಡೇ ಮೀಲ್ಸ್ ಜಾರಿಗೆ ತಂದಿದ್ದೇವೆ. ಇದನ್ನು ಮುಂದೆ ಎಲ್ಲ ವಿದ್ಯಾರ್ಥಿಗಳಿಗೂ ಪೂರ್ಣವಾಗಿ ಸಿಗುವಂತೆ ಏರ್ಪಾಡು ಮಾಡಬೇಕೆಂದಿದ್ದೇವೆ.

*Re.*—Up-grading of Colleges.

ಮೂರು ಕಾಲೇಜುಗಳನ್ನು ಸರ್ಕಾರದವರು ಈಗ ಅಪ್‌ಗ್ರೇಡು ಮಾಡಿದ್ದಾರೆ. ಮಾಂಡ್ಯ, ಚಿಕ್ಕ ಮಗಳೂರು ಮತ್ತು ಕೋಲಾರ ಇಲ್ಲಿದ್ದ ಕಾಲೇಜುಗಳನ್ನು ಅಪ್‌ಗ್ರೇಡ್ ಮಾಡಲಾಗಿದೆ.

ಶ್ರೀ ಎಸ್. ಶಿವಪ್ಪ.—ಅಲ್ಲಿನ ರಿಸಲ್ಟ್ಸ್ ಹೇಗಿದೆಯೋ ?

ಶ್ರೀ ಎಸ್. ಆರ್. ಕಂಠಿ.—ರಿಸಲ್ಟುಗಳು ಎಲ್ಲ ಕಡೆಯಲ್ಲಿಯೂ ಹೇಗಿದೆಯೋ ಇಲ್ಲಿಯೂ ಹಾಗೇ ಇದೆ.

*Re.*—Granting of New High Schools.

ಇನ್ನು ಗ್ರಾಂಟಿಂಗ್ ಆಫ್ ನ್ಯೂ ಹೈಸ್ಕೂಲ್ಸ್ ಬಗ್ಗೆ ಹೇಳುವುದಾದರೆ 415 ರಿಂದ 420 ಹೈಸ್ಕೂಲುಗಳನ್ನು ತೆರೆಯಲು ಅವಕಾಶ ಮಾಡಿಕೊಡಲಾಗಿದೆ. ಇನ್ನು ಕೇಂದ್ರ ಸರ್ಕಾರದವರು ರೀಜನಲ್ ಟ್ರೈನಿಂಗ್ ಕಾಲೇಜನ್ನು ನಮ್ಮ ಮೈಸೂರಿನಲ್ಲಿ ತೆರೆದಿದ್ದಾರೆ. ಇದಕ್ಕೆ ಕೇರಳ, ಮೈಸೂರು, ಆಂಧ್ರ ಮತ್ತು ಮದರಾಸು ಈ ನಾಲ್ಕು ರಾಜ್ಯಗಳಿಂದಲೂ ಶಿಕ್ಷಕರು ಟ್ರೈನಿಂಗಿಗಾಗಿ ಬರಬಹುದು. ಕೇಂದ್ರ ಸರ್ಕಾರದವರು ಈ ಟ್ರೈನಿಂಗ್ ಕಾಲೇಜಿಗಾಗಿ ಒಂದು ಕೋಟಿಯಷ್ಟು ಹಣ ವನ್ನು ಖರ್ಚು ಮಾಡುತ್ತಿದ್ದಾರೆ. ಇದಕ್ಕಾಗಿ ಮೈಸೂರು ಸರ್ಕಾರದವರು ಬಹಳ ಕಷ್ಟಪಟ್ಟು ಅವ ರಿಗೇ ಬೇಕಾದ ಸವಲತ್ತುಗಳನ್ನೆಲ್ಲಾ ಕೊಡುತ್ತೇವೆಂದು ಹೇಳಿ ಇಲ್ಲಿ ಸ್ಥಾಪನೆ ಮಾಡಿದ್ದಾರೆ.

ಇನ್ನು ವೆಸ್ಟ್ ಜರ್ಮನಿಯಿಂದ ನಮಗೆ ಒಂದು ಪ್ರಿಂಟಿಂಗ್ ಪ್ರೆಸ್ ಬರುತ್ತದೆ. ಇದರ ಮೆಷಿ ನರಿಯ ಬೆಲೆಯೇ ಸುಮಾರು ಎರಡು ಕೋಟಿ ರೂಪಾಯಿಗಳಿಗಿಂತ ಹೆಚ್ಚಾಗುತ್ತದೆ. ಇದಕ್ಕಾಗಿ ನಮ್ಮ ಸರ್ಕಾರದವರು 60 ಲಕ್ಷ ರೂಪಾಯಿಗಳ ವೆಚ್ಚದಲ್ಲಿ ಒಂದು ಬಿಲ್ಡಿಂಗನ್ನು ಕಟ್ಟುವುದರಲ್ಲಿದ್ದೇವೆ ಇದು ಮೈಸೂರಿನ ಬಳಿ ಇರುತ್ತದೆ. ಆಗ ಇದು ಮೂರು ಕೋಟಿಗಿಂತಲೂ ಹೆಚ್ಚಿನ ಖರ್ಚು ಮಾಡಿ ದಂತಹ ಒಳ್ಳೆಯ ಪ್ರಿಂಟಿಂಗ್ ಪ್ರೆಸ್ಸಾಗುತ್ತದೆ. ಇದಕ್ಕಾಗಿ ನೂರು ಎಕರೆಗಳಷ್ಟು ಜಮೀನನ್ನೂ ಕೊಡುತ್ತಲಿದ್ದೇವೆ.

Sainik School at Bijapur.

ಬಿಜಾಪುರದಲ್ಲಿ ಸೈನಿಕ ಶಿಕ್ಷಣಕ್ಕಾಗಿ ಒಂದು ಸ್ಕೂಲನ್ನು ತೆಗೆದು ಸುಮಾರು ಒಂದು ವರ್ಷ ವಾಯಿತು. ಇದು ಬಹಳ ಚೆನ್ನಾಗಿ ನಡೆಯುತ್ತಿದೆ. ಮಾನ್ಯ ಮುಖ್ಯ ಮಂತ್ರಿಗಳೂ ಕೂಡ ಹೋಗಿ ಇದನ್ನು ನೋಡಿಕೊಂಡು ಬಂದಿದ್ದಾರೆ. ಮಾನ್ಯ ಹಣಕಾಸಿನ ಸಚಿವರೂ ಕೂಡ ಹೋಗಿ ನೋಡಿಕೊಂಡು ಬಂದಿದ್ದಾರೆ. ನಾನೂ ಕೂಡ ಎರಡು ಮೂರು ಸಾರಿ ಹೋಗಿ ನೋಡಿಕೊಂಡು ಬಂದಿದ್ದೇನೆ. ತಾವೂ ಹೋಗಿ ನೋಡಬಹುದು. ನಮ್ಮ ಮಾನ್ಯ ವಿರೋಧ ಪಕ್ಷದ ನಾಯಕರಾದ ಶ್ರೀಮಾನ್ ಶಿವಪ್ಪನವರೂ ಬಂದರೆ ನಾನು ಕರೆದುಕೊಂಡು ಹೋಗಿ ತೋರಿಸುತ್ತೇನೆ. ಇವೊತ್ತು ಇದು ಬಹಳ ಚೆನ್ನಾಗಿ ನಡೆಯುತ್ತಿದೆ.

*Re.*—Common Grant-in-Aid Code for High Schools.

ಇನ್ನು ಗ್ರಾಂಟ್ ಇನ್ ಏಡ್ ಕೋಡ್ ರೂಲ್ಸುಗಳನ್ನು ಕಾಮನ್ ಆಗಿ ಎಲ್ಲ ಹೈಸ್ಕೂಲುಗಳಿಗೂ ಮಾಡಬೇಕೆಂದು ಇದ್ದೇವೆ. ಇದಕ್ಕೆ ಮಾನ್ಯ ಹಣಕಾಸಿನ ಸಚಿವರೂ ಒಪ್ಪಿದ್ದಾರೆ. ಅದು ಇಷ್ಟರಲ್ಲೇ ಬರುತ್ತದೆ.

*Re.*—Branch Printing Presses.

ಇನ್ನು ಬ್ರಾಂಚ್ ಪ್ರಿಂಟಿಂಗ್ ಪ್ರೆಸ್ಸುಗಳು ಎಂದು ಈಗ ಧಾರವಾಡದಲ್ಲಿ ಒಂದು ಮಾಡಿದ್ದೇವೆ ಗುಲ್ಬರ್ಗದಲ್ಲಿ ಒಂದು ಮಾಡಿದ್ದೇವೆ. ಧಾರವಾಡದಲ್ಲಿರುವುದಕ್ಕೆ 16 ಲಕ್ಷಕ್ಕಿಂತಲೂ ಹೆಚ್ಚಿಗೆ ಹಣ ಖರ್ಚುಮಾಡಿ ಅದಕ್ಕೆ ಜಾಸ್ತಿ ಮೆಷಿನರಿಗಳನ್ನು ತರಿಸಿದ್ದೇವೆ. ಗುಲ್ಬರ್ಗದಲ್ಲಿ ಸುಮಾರು 9 ಲಕ್ಷದಷ್ಟು ವೆಚ್ಚ ಮಾಡಲಾಗುತ್ತಿದೆ. ನಮ್ಮಲ್ಲಿ ಬ್ರಾಂಚು ಪ್ರಿಂಟಿಂಗ್ ಪ್ರೆಸ್ಸುಗಳು, ಧಾರವಾಡ, ಗುಲ್ಬರ್ಗ, ಮೈಸೂರು ಹಾಗೂ ಮತ್ತು ಮಡಕೇರಿಗಳಲ್ಲಿವೆ. ಮೈಸೂರಿನಲ್ಲಿರುವ ಪ್ರಿಂಟಿಂಗ್ ಪ್ರೆಸ್ಸನ್ನು ಪೂರ್ತಿಯಾಗಿ ಟೆಕ್ಸ್ಟ್ ಬುಕ್‌ಗಳ ಪ್ರಿಂಟಿಂಗ್‌ಗಾಗಿಯೇ ಮೀಸಲಾಗಿಡಬೇಕೆಂದು ಸರ್ಕಾರದವರು ಈಚೆಗೆ ನಿರ್ಣಯವನ್ನು ತೆಗೆದುಕೊಂಡಿದ್ದಾರೆ, ಅಂತಹ ಪ್ರಿಂಟಿಂಗ್ ಪ್ರೆಸ್ ಆಗಬೇಕು ಎಂದು ಮಾನ್ಯ ಸದಸ್ಯರಾದ ಶ್ರೀಮಾನ್ ಅಣ್ಣಾರಾಯರೂ ಹೇಳಿದ್ದರು. ಇಂತಹ ಒಂದು ಪ್ರಿಂಟಿಂಗ್ ಪ್ರೆಸ್ ಮಾಡಿದರೆ ರಾಜ್ಯದಲ್ಲಿ ನ್ಯಾಷನಲೈಸ್ಡ್ ಟೆಕ್ಸ್ಟ್ ಬುಕ್ಕುಗಳನ್ನು ಪ್ರಿಂಟು ಮಾಡಲು ಬಹಳ ಅನುಕೂಲ ವಾಗುತ್ತದೆ ಎಂದು ಈ ಪ್ರಿಂಟಿಂಗ್ ಪ್ರೆಸ್ಸನ್ನು ಮಾಡುತ್ತಿದ್ದೇವೆ.

*Re.*—Teachers and Students' Welfare Services.

ಈಚೆಗೆ ಶಿಕ್ಷಕರಿಗಾಗಿ ಮತ್ತು ಮಕ್ಕಳ ಸೌಕರ್ಯಗಳಿಗಾಗಿ ಒಂದು ನಿಧಿಯನ್ನು ಕೂಡಿಸ ಬೇಕೆಂದು ಮಾಡಲಾಗಿದೆ. ಇದರಂತೆ ಹೋದ ವರ್ಷದಲ್ಲಿ ಸ್ಟೂಡೆಂಟ್ಸ್ ಫಂಡ್‌ಗಾಗಿ 3,07,000 ದಷ್ಟು ಹಣ ಕೂಡಿಸಲಾಗಿದೆ. ಹಾಗೇ ಟೀಚರ್ಸ್ ವೆಲ್ ಫೇರ್ ಫಂಡಿಗಾಗಿ 2,25,000 ದಷ್ಟು ಹಣ ಕೂಡಿಸ ಲಾಗಿದೆ. ಇದಲ್ಲದೇ ನಮ್ಮದೇ ಆದ ಒಂದು ಲಕ್ಷ ರೂಪಾಯಿಗಳು ಕೇಂದ್ರ ಸರ್ಕಾರದಲ್ಲಿ ಜಮಾ ಇದೆ. ಇದೆಲ್ಲವನ್ನೂ ಕೂಡಿಸಿದರೆ ಸುಮಾರು 3,25,000 ಟೀಚರ್ಸ್ ಫಂಡಾಗುತ್ತದೆ ಮತ್ತು 3,07,000 ಸ್ಟೂಡೆಂಟ್ಸ್ ಫಂಡ್ ಆಗುತ್ತದೆ.

ಇನ್ನು ನಮ್ಮ ರಾಜ್ಯದಲ್ಲಿ ಬುಕ್ ಬ್ಯಾಂಕ್ ಎಂದು ಇದೆ. ಇದರಿಂದ ಸುಮಾರು 5,000 ವಿದ್ಯಾರ್ಥಿಗಳಿಗೆ ಅವರು ಎಸ್. ಎಸ್. ಎಲ್. ಸಿ ಯವರಿಗೆ ಓದುತ್ತಿರುವ ಅರ್ಹವಿದ್ಯಾರ್ಥಿಗಳಿಗೆ ಅನುಕೂಲ ವಾಗಲೆಂದು ನಿರ್ಣಯಮಾಡಿ ಇಂತಹ ಬುಕ್ ಬ್ಯಾಂಕು ಮಾಡಿ ಅನುಕೂಲಗಳನ್ನು ಹುಡುಗರಿಗೆ ಕೊಡಲಾಗುತ್ತಿದೆ.

ಹಿಂದೀ ಟೀಚರುಗಳ ಬಗ್ಗೆ ಕೆಲವರು ಹೇಳಿದರು. 1375 ಟೀಚರುಗಳನ್ನು ನೇಮಕಮಾಡ ಲಾಗಿದೆ, ಮುಂದಿನ ವರ್ಷ 3,000 ಟೀಚರುಗಳನ್ನು ಮಿಡಲ್ ಸ್ಕೂಲುಗಳಲ್ಲಿ ಮತ್ತು 200 ಹೈಸ್ಕೂಲುಗಳಲ್ಲಿ ನೇಮಕ ಮಾಡಬೇಕೆನ್ನುವ ವಿಚಾರ ಇದೆ. ಮೊನ್ನೆ ನಾನು ದೆಹಲಿಗೆ ಹೋಗಿದ್ದಾಗ ಈ ವಿಚಾರದಲ್ಲೂ ಮಾತನಾಡಿಕೊಂಡುಬಂದಿದ್ದೇನೆ. ಒಂದು ಇಂಡಸ್ಟ್ರಿಯಲ್ ಟ್ರೈನಿಂಗ್ ಕಾಲೇಜನ್ನು ಮೈಸೂರಿಗೆ ಕೊಡಿ ಎಂದು ಹೇಳಿದ್ದೇನೆ. ಇದನ್ನು ಕೇಂದ್ರ ಸರ್ಕಾರದವರು ಸಹಾನುಭೂತಿಯಿಂದ ಪರಿಶೀಲಿಸುತ್ತಾರೆಂದು ನಂಬಿದ್ದೇನೆ. ಒಂದು ಹಿಂದಿ ಟೀಚರುಗಳ ಟ್ರೈನಿಂಗ್ ಕಾಲೇಜು ಎಂದು ಮೈಸೂರಿನಲ್ಲಿ ಮಾಡಲಾಗಿದೆ, ಇನ್ನು ಎಕ್ಸ್ ಪ್ಯಾನ್‌ಷನ್ ಸ್ಕೀಂ ಫಾರ್ ಎನ್. ಸಿ. ಸಿ. ಗೆ ಏರ್ಪಾಡು ಮಾಡಲಾಗಿದೆ. ಅಲ್ಲದೆ ಇಲ್ಲಿ ಒಂದು ಇನ್ಸ್ಟಿಟ್ಯೂಷನ್ ಆಫ್ ಎಜುಕೇಷನ್ ಎಂದು ಮಾಡಲಾಗಿದೆ, ಇದು ಬಹಳ ಮಹತ್ವವಾದುದು. ಇದರಲ್ಲಿ ಟೆಕ್ಸ್ ಬುಕ್ಕುಗಳ ರಿಸರ್ಚ್ ಮಾಡುವು ದಕ್ಕೆ ಏರ್ಪಾಡು ಮಾಡಿದ್ದೇವೆ. ಟೀಚರುಗಳ ಮತ್ತು ಪ್ರೊಫೆಸರುಗಳ ಟ್ರೈನಿಂಗ್ ಮಾಡುವುದಕ್ಕೂ ಇಲ್ಲಿ ಏರ್ಪಾಡು ಮಾಡಿದ್ದೇವೆ. ಮತ್ತು ಇದರಲ್ಲಿ ಇವ್ಯಾಲ್ಯುಯೇಷನ್ ಯುನಿಟ್ ಎಂದು ಈ ವರ್ಷ ದಿಂದ ಇದರಲ್ಲಿ ಮಾಡಬೇಕೆಂದು ಮಾಡಿ ಟೀಚರುಗಳಿಗೆ ಹೊಸ ವಿಧಾನವನ್ನು ಕಲಿಸುವುದಕ್ಕೆ ಮತ್ತು ಹೊಸ ಪುಸ್ತಕಗಳನ್ನು ಮಾಡುವುದಕ್ಕೂ ಏರ್ಪಾಡು ಮಾಡಲಾಗಿದೆ.

ನಾನೀಗ ಬೆಂಗೂರು ಸಿಟಿಯಲ್ಲಿ ಆಗತಕ್ಕ ಯೂನಿವರ್ಸಿಟಿಯ ವಿಷಯವನ್ನು ಹೇಳಿದ್ದಾಯಿತು. ಇನ್ನು ನಾವು ಈ ಅಡೆಲ್ಟ್ ಲಿಟ್ರೆಸಿ ಎಜುಕೇಷನ್ ಸ್ಕೀಮನ್ನು ರೀ ಆರ್ಗನೈಜ್ ಮಾಡಿದ್ದೇವೆ. ರೋಣ ತಾಲ್ಲೂಕಿನಲ್ಲಿ ಇದು ಬಹಳ ಚೆನ್ನಾಗಿ ನಡೆಯುತ್ತಿದೆ. ಅಲ್ಲಿ ಈ ಸ್ಕೀಮಿನಿಂದ 15—20 ಪರ್ಸೆಂಟ್ ಮಂದಿ ವಿದ್ಯಾವಂತರಾಗಿದ್ದಾರೆ. ಇನ್ನು ಮ್ಯೂಜಿಕ್ ಮತ್ತು ಡ್ಯಾನ್‌ಸಿಂಗ್ ವಿಚಾರದಲ್ಲೂ ಸಾಕಷ್ಟು ಪ್ರಯತ್ನಗಳನ್ನು ನಡೆಸಿರುತ್ತೇವೆ. ಇದಕ್ಕೆ ಸರಿಯಾದ ಬಿಲ್ಡಿಂಗ್ ಸ್ಕೀಂ ಸಹಾ ಮಾಡ ಬೇಕೆಂದು ನಾವು ಇನ್ನೂ ಅನೇಕ ರೀತಿಯ ಪ್ರಯತ್ನಗಳನ್ನು ಮಾಡುತ್ತಿದ್ದೇವೆ. ನಾವು ಇಷ್ಟೆಲ್ಲಾ ಮಾಡಿದ್ದರೂ ಕಲರ್ ಗ್ಲಾಸಿನಲ್ಲಿ ನೋಡತಕ್ಕವರಿಗೆ ನಾನೇನೂ ಹೇಳಲಾರೆ. ಅನೇಕರು ಅನೇಕ ರೀತಿಯಲ್ಲಿ ಮಾತನಾಡುತ್ತಿದ್ದಾರೆ. ಆದರೆ ಅದರಲ್ಲಿ ಹಲವರು ಅನೇಕ ಉತ್ತಮ ಸಲಹೆಗಳನ್ನು ಕೊಟ್ಟಿದ್ದಾರೆ. ಇನ್ನು ಕೆಲವರು ಹಲ್ಲಿಯನ್ನು ನುಂಗಿದ ಹಾಗೆ ಮಾತನಾಡಿದ್ದಾರೆ. ಆದುದರಿಂದ ಅವರ ಹುಚ್ಚನ್ನು ಹೇಗೆ ಬಿಡಿಸಬೇಕೋ ಅದು ನನಗೆ ತಿಳಿಯುತ್ತಿಲ್ಲ. ಅವರಿಗೆ ಅವರ ಮನಸ್ಸಿಗೆ ತೋಚಿದಂತೆ ನನ್ನನ್ನು ಬೈದುಕೊಂಡು ಹೋಗಬೇಕೆಂದು ಇರಾದೆಯಿದ್ದರೆ ಅದಕ್ಕೂ ನನ್ನ ಅಭ್ಯಂತರ ವೇನಿಲ್ಲ. If you want to administer any type of criticism, you can do it. But if you stay long at the table and consider these points, you must agree that during the last two years, the Education Department has done very well and it will do very well.

ಶ್ರೀ ಎಸ್. ಗೋಪಾಲಗೌಡ.—ಈ ಹಿಂದೆ ಸರ್ಕಾರದವರು ಸಾರ್ವಜನಿಕರ ಸೇವೆಮಾಡಿದ್ದ 40 ಜನರಿಗೆ ಏನೋ ಸ್ವಲ್ಪ ಹಣವನ್ನು ಕೊಡುತ್ತೇವೆಂದು ಹೇಳಿದ್ದರು. ಹೋದ ವರ್ಷದ ಏಪ್ರಿಲ್ ತಿಂಗಳಲ್ಲಿ ಕೆಲವರಿಗೆ ಬಟವಾಡೆಯಾಗಿದೆ. ಇನ್ನು ಕೆಲವರಿಗೆ ಬಟವಾಡೆಯಾಗದೆ ಅವರು ಪ್ರಾಣ ಬಿಡುತ್ತಿದ್ದಾರೆ. ಈ ವಿಚಾರವಾಗೇನೂ ತಾವು ಹೇಳಲಿಲ್ಲ..... ...

ಶ್ರೀ ಎಸ್. ಆರ್. ಕಂಠಿ.—46 ಜನರಿಗೆ ಕೇಂದ್ರ ಸರ್ಕಾರದ ಧನಸಹಾಯ ದೊರೆತಿದೆ. ಹೋದವರ್ಷ ಕೆಲವರಿಗೆ ಕೊಡಲಾಯಿತು. ಹಣ ಸಾಲದೆ ಬಂದುದರಿಂದ ಕೆಲವರಿಗೆ ತಡವಾಯಿತು

ಶ್ರೀಮತಿ ರತ್ನಮ್ಮ ಮಾಧವರಾವ್ (ಶಿವಮೊಗ್ಗ).—ನಾನು ಕೇಳಿದ್ದ ಒಂದು ಪ್ರಶ್ನೆಗೂ ಉತ್ತರವೇ ಬರಲಿಲ್ಲ. ವಿದ್ಯಾ ಮಂತ್ರಿಗಳು ಇಷ್ಟು ನಮ್ಮ ಬಗ್ಗೆ ಕಠಿಣತನವನ್ನೇಕೆ ತೋರಿಸುತ್ತಿ ದ್ದಾರೆ ?

ಶ್ರೀ ಎಸ್. ಆರ್. ಕಂಠಿ.—ನಾನು ತಮ್ಮ ಪ್ರಶ್ನೆಗಳಿಗೆ ಉತ್ತರ ಹೇಳಿದ್ದರೂ ತಾವು ಯಾವಾಗಲೂ ಹೀಗೆ ಕಠಿಣವಾಗಿ ಮಾತನಾಡುತ್ತಿದ್ದೀರಿ.

ಶ್ರೀ ಕೆ ಪಿ. ರೇವಣಸಿದ್ದಪ್ಪ.—ಆ ಹಂಗಾಮಿ ಲೆಕ್ಚರರ ವಿಷಯದಲ್ಲಿ ಮಂತ್ರಿಗಳು ಸುಪ್ರೀಂ ಕೋರ್ಟಿಗೆ ಹೋಗುತ್ತೇವೆಂಬುದಾಗಿ ತಿಳಿಸಿದ್ದರು. ಈ ಪ್ರಶ್ನೆಯನ್ನು ತಾವು ಒಂದು ಮಾನವೀಯತೆಯ ದೃಷ್ಟಿಯಿಂದ ನೋಡಿ ಅವರೂ ನೀವು ಏನಾದರೊಂದು ಕಾಂಪ್ರೊಮೈಸಿಗೆ ಬರುವುದಕ್ಕೆ ಸಾಧ್ಯವಿಲ್ಲವೇ ?

ಶ್ರೀ ಎಸ್. ಆರ್. ಕಂಠಿ.—ಆ ಪ್ರಶ್ನೆಯೀಗ ಸರ್ಕಾರದ ಮುಂದಿದೆ. ಇದನ್ನು ಪರಿಶೀಲನೆ ಮಾಡುತ್ತಿದ್ದೇವೆ.

**Sri S. SIVAPPA.**—The Hon'ble Minister was pleased to state that he is going to introduce 11th Standard in some schools. May I know, whether the 11th Standard is equal to PUC in syllabus and other subject ?

ಶ್ರೀ ಎಸ್. ಆರ್. ಕಂಠಿ.—ಈ ವಿಚಾರದಲ್ಲಿ ಶ್ರೀಮಾನ್ ಶಿವಪ್ಪನವರಿಗೂ ನನಗೂ ಒಂದು ಒಪ್ಪಂದ ಆಗಿದೆ. ಅವರಿಗೆ ಎಲ್ಲಾ ವಿಚಾರವೂ ಗೊತ್ತಿದೆ. ಪರೀಕ್ಷೆಯಲ್ಲಿ ಪಾಸಾಗುವುದು ಅವರ ನಸೀಬು.

**Sri G. V. GOWDA.**– In the matter of giving promotional grades to the teachers in High Schools in Kollegal, Bellary, South Kanara, Government have not recognised, in the rest of the area, they have recognised. Why this discrimination Sir ?

**Sri S. R. KANTHI.**—As for this particular question, I will have to look into the entire matter. I promise if Sri G. V, Gowda comes to me...

**Mr. SPEAKER.**—Why should he go to the Hon'ble Minister ? He has mentioned it here and the Hon'ble Minister may consider it.

**Sri S. R. KANTHI.**— Yes, Sir. I will consider it.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ನಾವು ಇಲ್ಲಿಗೆ ಸುಮಾರು ಎರಡು ವರ್ಷಗಳಿಂದಲೂ ಡೈರೆಕ್ಟರ್ ಆಫ್ ಟೆಕ್ನಿಕಲ್ ಎಜುಕೇಷನ್ ಯಾರಾಗಿದ್ದಾರೋ ಅವರೇ ಚೀಫ್ ಇಂಜಿನಿಯರ್ ಫಾರ್ ಇರಿಗೇಷನ್ ಕೂಡ ಆಗಿದ್ದಾರೆ. ಇದರಿಂದ ಯಾವ ಕೆಲಸಗಳೂ ನೆಟ್ಟಗಾಗುವುದಿಲ್ಲ. ಈ ವಿಚಾರದಲ್ಲಿ ಒಂದು ಖಾಯಂ ಅರೇಂಜ್‌ಮೆಂಟನ್ನು ಯಾವಾಗ ಮಾಡುತ್ತೀರೆಂದು ಕೇಳಿದ್ದೆವು. ಅದಕ್ಕೆ ಉತ್ತರ ಬರಲಿಲ್ಲ.

ಶ್ರೀ ಎಸ್. ಆರ್. ಕಂಠಿ.—ಆ ಬಗ್ಗೆ ನಾವು ಒಂದು ಖಾಯಂ ಅರೇಂಜ್‌ಮೆಂಟನ್ನು ಸಧ್ಯದಲ್ಲೇ ಮಾಡುತ್ತೇವೆ.

ಶ್ರೀಮತಿ ನಾಗರತ್ನಮ್ಮ ಹಿರೇಮಠ್.—ಬೆಂಗಳೂರಿನಲ್ಲಿ ಕೆಲವು ಶಾಲೆಗಳಿಗೆ ಇಂಗ್ಲೀಷ್ ಮೀಡಿಯಂನ್ನು ಕೊಡತಕ್ಕ ವಿಚಾರದಲ್ಲಿ ಒಂದು ಸ್ಕೂಲಿಗೇ ಒಂದು ಇನ್ನೊಂದು ಸ್ಕೂಲಿಗೇ ಒಂದು ಹೀಗೆಲ್ಲಾ ದ್ವಿಮುಖವಾದ ವ್ಯವಹಾರ ನಡೆಯುತ್ತಿದೆ. ಇದನ್ನು ಯಾವಾಗ ಸರಿಪಡಿಸುತ್ತೀರಿ ?

ಶ್ರೀ ಎಸ್. ಆರ್. ಕಂಠಿ.—ಅದನ್ನು ಡಿ. ಪಿ. ಐ. ಅವರು ಮಾಡುತ್ತಾರೆ. ತಪ್ಪಿದ್ದರೆ ಸರಿಪಡಿಸುತ್ತೇವೆ. ಆ ವಿಚಾರವನ್ನು ನಾನು ನೋಡುತ್ತೇನೆ.

**Mr. SPEAKER.**—I will put the Demands to the Vote of the House. The question is :

> "That the respective sums not exceeding the amounts shown in the list of Demands circulated to the Members be granted to defray the charges which will come in course of payment during the financial year ending 31st day of March 1965 in respect of Demand Nos. 17, 57 and 49."

*The moton was adopted.*

[As directed by the Chair, the motions for demands for grants which were adopted by the House are reproduced below.]

DEMAND NO. 17—EDUCATION.

" That a sum not exceeding Rs. 21, 93, 66, 400 be granted to the Government to defray the charges which will come in course of payment during the financial year for the period ending 31st day of March 1965, in respect of ' Education '."

DEMAND NO. 37

68. *Stationery and Printing.*

" That a sum not exceeding Rs. 93, 08,000 be granted to the Government to defray the charges which will come in course of payment during the financial year for the period ending 31st day of March 1965, in respect of Sationery and Printing ".

DEMAND NO. 49—

*Capital Account of other works outside the Revenue Account.*

109. Capital Outlay on other works.

" That a sum not exceeding Rs. 4, 50,000 be granted to the Government to defray the charges which will come in course of payment during the financial year for the period ending 31st day of March 1965, in respect of ' Capital Outlay on other Works'."]

MR. SPEAKER.—The House will now adjourn and reassemble at 12 noon tomorrow.

---

*The House adjourned at Seven of the Clock to meet again at Twelve of the Clock on Thursday, the 19th March 1964.*

---